ಬ್ಯಾಂಕಿಂಗ್ ಪ್ರಪಂಚ

ಸಂಪಾದಕರು
ಎಚ್ಚೆಸ್ಕೆ

ಸಂಪುಟ ೯
ಸಂಚಿಕೆ ೪

ಡಿಸೆಂಬರ್
೧೯೮೮

ಈ ಸಂಚಿಕೆಯಲ್ಲಿ

ಸಮನ್ವಯ ಸಮಿತಿ (ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳು)
ಭಾರತೀಯ ಸ್ಟೇಟ್ ಬ್ಯಾಂಕ್, ನಂ. ೨೨ ಜಯಚಾಮರಾಜೇಂದ್ರ ರಸ್ತೆ, ಬೆಂಗಳೂರು ೫೬೦ ೦೦೨

ಹಣ ಬ್ಯಾಂಕಿಂಗ್ ವಿಚಾರಗಳಿಗೆ ಮೀಸಲಾದ ತ್ರೈಮಾಸಿಕ

ಬ್ಯಾಂಕಿಂಗ್ ಪ್ರಪಂಚ

ಸಂಪುಟ ೯ | ಡಿಸೆಂಬರ್ ೧೯೮೮ | ಸಂಚಿಕೆ ೪

ಸಂಪಾದಕೀಯ

ಹೊಸ ಉದರಿ ನೀತಿ

ನಮ್ಮ ಕೇಂದ್ರೀಯ ಬ್ಯಾಂಕಾದ ಭಾರತೀಯ ರಿಸರ್ವ್ ಬ್ಯಾಂಕು ವರ್ಷಕ್ಕೆ ಎರಡು ಬಾರಿ ತನ್ನ ಉದರಿ ನೀತಿ ಘೋಷಿಸುತ್ತದೆ: ಒಂದು, ತೀವ್ರ ಆರ್ಥಿಕ ಚಟುವಟಿಕೆಯ ತೇಜಿ ಹಂಗಾಮಿಗಾಗಿ (busy season); ಇನ್ನೊಂದು, ಮಂದ ಚಟುವಟಿಕೆಯ ಮಂದಿ ಹಂಗಾಮಿಗಾಗಿ (slack season). ತೇಜಿ ಹಂಗಾಮು ನವೆಂಬರಿನಿಂದ ಮಾರ್ಚ್ ವರೆಗೆ; ಮಂದಿ ಹಂಗಾಮು ಏಪ್ರಿಲಿನಿಂದ ಅಕ್ಟೋಬರ್ ವರೆಗೆ. ಮುಂಗಾರು ಮಳೆಯಾಗಿ, ಫಸಲು ತುಂಬಿ ಬಂದು, ಆರ್ಥಿಕ ಚಟುವಟಿಕೆ ಕುದುರಿದಾಗ ವಹಿವಾಟುಗಳಿಗಾಗಿ ಹೆಚ್ಚು ಹಣ, ಅಧಿಕ ಉದರಿ ಅಗತ್ಯ. ಮಂದಿ ಸಮಯದಲ್ಲಿ ಅಗತ್ಯಕ್ಕಿಂತ ಹೆಚ್ಚು ಹಣ, ಹೆಚ್ಚು ಉದರಿ ಇದ್ದರೆ ಅದರಿಂದ ಪ್ರತಿಕೂಲ ಪರಿಣಾಮವಾಗಬಹುದಾದ್ದರಿಂದ ಆಗ ಅದನ್ನು ಹಿಡಿತಕ್ಕೊಳಪಡಿಸುವುದು ಅನಿವಾರ್ಯ. ರಿಸರ್ವ್ ಬ್ಯಾಂಕಿನೊಂದಿಗೆ ನೇರ ಸಂಬಂಧ ಹೊಂದಿರುವ ವಾಣಿಜ್ಯ ಬ್ಯಾಂಕುಗಳ ಆಸ್ತಿಗಳ ವಿನ್ಯಾಸವನ್ನು ನಿಯಂತ್ರಣಕ್ಕೊಳಪಡಿಸುವುದರ ಮೂಲಕ ರಿಸರ್ವ್ ಬ್ಯಾಂಕು ಈ ಉದ್ದೇಶ ಸಾಧಿಸುತ್ತದೆ. ಆದ್ದರಿಂದ ಋತುಯಿಣವಾಗಿ (seasonally) ರಿಸರ್ವ್ ಬ್ಯಾಂಕ್ ಘೋಷಿಸುವ ಉದರಿ ನೀತಿ ಇಡೀ ದೇಶದ ಅರ್ಥವ್ಯವಸ್ಥೆಯ ಸಮಧಾತುವಿನ ದೃಷ್ಟಿಯಿಂದ ಅತ್ಯಂತ ಪ್ರಾಮುಖ್ಯ ಗಳಿಸಿದೆಯೆನ್ನಬಹುದು.

ಈ ಹಣಕಾಸು ವರ್ಷದ ದ್ವಿತೀಯಾರ್ಧಕ್ಕಾಗಿ, ತೇಜಿ ಹಂಗಾಮಿಗಾಗಿ, ರಿಸರ್ವ್ ಬ್ಯಾಂಕ್ ಘೋಷಿಸಿರುವ ನೀತಿ ಅನೇಕ ದೃಷ್ಟಿಗಳಿಂದ ಗಮನಾರ್ಹವಾದ್ದು. ರಿಸರ್ವ್ ಬ್ಯಾಂಕ್ ಸಾಮಾನ್ಯವಾಗಿ ತೋರಿಸದ ದಿಟ್ಟತನವನ್ನು ಇದರಲ್ಲಿ ಪ್ರದರ್ಶಿಸಿದೆ ಎಂದು ಕೆಲವರ ಅಭಿಪ್ರಾಯ. ಈ ಶತಮಾನದ ಅತ್ಯುಗ್ರ ಅಭಾವ ಪರಿಸ್ಥಿತಿಯ ಅನಂತರ ಈ ವರ್ಷ ಒಳ್ಳೆಯ ಮಳೆಯಾಗಿರುವುದರಿಂದ ಕೃಷಿ ಹಾಗೂ ವಿದ್ಯುತ್ ಪರಿಸ್ಥಿತಿ ಬಹಳಷ್ಟು ಚೇತರಿಸಿಕೊಂಡಿದೆ. ಕಣಜಗಳು ತುಂಬುತ್ತವೆ. ಮಂಡಿಗಳಲ್ಲಿ ಚಟುವಟಿಕೆ ಕುದುರುತ್ತದೆ. ಕೈಗಾರಿಕೆಗಳು ಚುರುಕಾಗುತ್ತವೆ. ಈ ಎಲ್ಲ ಅನುಕೂಲಕರ ಪ್ರವೃತ್ತಿಗಳಿಂದಾಗಿ ಅರ್ಥವ್ಯವಸ್ಥೆಯ ಬೆಳವಣಿಗೆಗೆ ಚಾಲನೆ ದೊರಕುವುದು ಸ್ವತಃಸಿದ್ಧ. ಈ ಸಂದರ್ಭದಲ್ಲಿ ಅದಕ್ಕೆ ಪೋಷಕವಾಗಿ ಅರ್ಥವ್ಯವಸ್ಥೆಗೆ ಹೆಚ್ಚಿನ ಉದರಿ ಲಭ್ಯವಾಗುವಂತೆ ಮಾಡುವುದು ರಿಸರ್ವ್ ಬ್ಯಾಂಕಿನ ಇಚ್ಛೆ. ಆದರೆ ಅದೇ ಸಮಯದಲ್ಲಿ ಅರ್ಥವ್ಯವಸ್ಥೆಯಲ್ಲಿನ ಅಪಾಯಕಾರಿ ಪ್ರವೃತ್ತಿಗಳನ್ನೂ ಕಡೆಗಣಿಸುವಂತಿಲ್ಲ. ಬ್ಯಾಂಕುಗಳ ಠೇವಣಿಗಳು ಬೆಳೆಯುತ್ತಿವೆ. ಸರ್ಕಾರದ ವೆಚ್ಚ ಅಸಾಧಾರಣವಾಗಿ ಏರುತ್ತಿರುವುದರಿಂದ ಹಣದ ಸೃಷ್ಟಿ ಬೆಳೆಯುತ್ತಿದೆ. ಅದು ಬೆಲೆಗಳ ಮೇಲೆ ಹೆಚ್ಚಿನ ಒತ್ತಡ ಹೇರದಂತೆ ಎಚ್ಚರಿಕೆ ವಹಿಸಬೇಕಾದ್ದೂ ಅತ್ಯವಶ್ಯ. ಹೀಗೆ, ಬೆಳವಣಿಗೆಗೆ ಪ್ರೋತ್ಸಾಹ ದೊರಕುವಂತೆ, ಆದರೆ ಬೆಲೆಗಳ ಏರಿಕೆಗೆ ಪ್ರಚೋದನೆ ಉಂಟಾಗದಂತೆ ರಿಸರ್ವ್ ಬ್ಯಾಂಕು ತನ್ನ ಅಸ್ತ್ರಕ್ಕೆ ದ್ವೈತೋದ್ದೇಶಗಳನ್ನು ತೊಡಿಸಬೇಕಾಗುತ್ತದೆ; ಎರಡು ಗುರಿಗಳನ್ನು ಹೊಂದಿರಬೇಕಾಗುತ್ತದೆ. ಆದರೆ ಒಂದು ಗುರಿಯನ್ನು ಸಾಧಿಸಹೋದರೆ ಇನ್ನೊಂದು ಗುರಿಗೆ ವಿಘ್ನ. ಈ ವೈರುದ್ಧ್ಯವನ್ನು ಹೋಗಲಾಡಿಸುವುದು ಹೇಗೆ? ಇದು ರಿಸರ್ವ್ ಬ್ಯಾಂಕಿನ ಉಭಯಸಂಕಟ. ಈ ಉಭಯ ಸಂಕಟದಿಂದ ಪಾರಾಗುವ ಉಪಾಯವೇ ಈಗ ಘೋಷಿಸಲಾಗಿರುವ—ಈಗಾಗಲೇ ಜಾರಿಗೆ ಬಂದಿರುವ—ರಿಸರ್ವ್ ಬ್ಯಾಂಕಿನ ಉದರಿ ನೀತಿಯ ಮುಖ್ಯ ಲಕ್ಷಣ.

ಹಳೆಯ ನೀತಿ

ರಿಸರ್ವ್ ಬ್ಯಾಂಕಿನ ಈಗಿನ ಉದರಿ ನೀತಿ ಒಂದು ದೃಷ್ಟಿಯಲ್ಲಿ ಈ ಹಿಂದೆ ಅದು ಜಾರಿಗೆ ತಂದ ನೀತಿಯ ಮುಂದುವರಿಕೆಯೆಂದೇ ಹೇಳಬೇಕು. ತೀವ್ರ ಅಭಾವ ಪರಿಸ್ಥಿತಿಯ ಫಲವಾಗಿ ದೇಶದಲ್ಲಿ ಈ ವರ್ಷದ ಆದಿಯಲ್ಲಿ ಬೆಲೆಗಳು ತೀವ್ರವಾಗಿ ಏರುವ ಪ್ರವೃತ್ತಿ ಪ್ರಬಲವಾಗಿತ್ತು. (ಈಗಲೂ ಆ ಅಪಾಯ ತಪ್ಪಿಲ್ಲ.) ಇಡೀ ವರ್ಷದಲ್ಲಿ ಬ್ಯಾಂಕ್ ಠೇವಣಿಗಳು ಶೇ. 17ರಷ್ಟು ಅಧಿಕವಾಗಬಹುದೆಂದು ಮೊದಲು ಅಂದಾಜು ಮಾಡಲಾಗಿತ್ತು. ಆದರೆ ಈ ನಿರೀಕ್ಷೆಯನ್ನೂ ಮೀರಿ ಠೇವಣಿಗಳು ಬೆಳೆದುವು. ಮೊದಲೇ ಹಣದುಬ್ಬರ ಪರಿಸ್ಥಿತಿ ಇರುವಾಗ ಠೇವಣಿಗಳೂ ಮೇರೆ ಮೀರಿ ಬೆಳೆದರೆ, ಇವನ್ನು ತೊಡಗಿಸಲು ಯೋಗ್ಯ ಮಾರ್ಗಗಳು ಇರ

ದಿದ್ದರೆ, ಅನುತ್ಪಾದಕ ಹಾಗೂ ಅನರ್ಥಕಾರಿ ಚಟುವಟಿಕೆಗಳಿಗೆ ಇವು ಒದಗಿಬರುವಂತಾದರೆ ಆಗ ಬಹುದಾದ ಅಪಾಯವನ್ನು ಮುಂಗಂಡ ರಿಸರ್ವ್ ಬ್ಯಾಂಕು ಕಳೆದ ಜುಲೈನಲ್ಲೇ ಇದರ ನಿವಾರಣೆ ಗಾಗಿ ತೀವ್ರಕ್ರಮ ಕೈಗೊಂಡಿತ್ತು. ಬ್ಯಾಂಕುಗಳ ನಗದು ಮೀಸಲು ಅನುಪಾತ (cash reserve ratio) ಜುಲೈ 30ರಿಂದ ಶೇ. 10ರಿಂದ ಶೇ. 10.5ಕ್ಕೆ ಏರಬೇಕೆಂದಿದ್ದುದನ್ನು ಬದಲಿಸಿ, ಜುಲೈ 2ರಿಂದಲೇ ಅದು ಜಾರಿಗೆ ಬರುವಂತೆ ಮಾಡಿತಲ್ಲದೆ, ಜುಲೈ 30ರಿಂದ ಇದನ್ನು ಶೆ. 11ಕ್ಕೆ ಏರಿಸಿತು. ಬ್ಯಾಂಕುಗಳು ತಮ್ಮ ಠೇವಣಿಗಳ ಮೊಬಲಗಿನಲ್ಲಿ ಈ ಶತಾಂಶವನ್ನು ಕಡ್ಡಾಯವಾಗಿ ರಿಸರ್ವ್ ಬ್ಯಾಂಕಿನಲ್ಲಿ ನಗದಾಗಿ ಇರಿಸಬೇಕಾಗಿ ಬರುವುದರಿಂದ ಅವುಗಳ ಉದರಿ ಸೃಷ್ಟಿಯ (ಮುಂಗಡ ನೀಡಿಕೆಯ) ಸಾಮರ್ಥ್ಯ ಅಷ್ಟರ ಮಟ್ಟಿಗೆ ಮೊಟಕಾಗುವುದು ಸಹಜ. ಇದಲ್ಲದೆ ಬ್ಯಾಂಕುಗಳು ಸುಲಭವಾಗಿ ನಗದಾಗಿ ಪರಿವರ್ತಿಸಬಹುದಾದ ಪ್ರತಿಭೂತಿಗಳಲ್ಲಿ (securities) ಕಡ್ಡಾಯವಾಗಿ ತೊಡಗಿಸಬೇಕಾದ ಮೊಬಲಗಿನ ಪ್ರಮಾಣವನ್ನೂ— ಪರಿನಿಯತ ದ್ರವತ್ವ ಅನುಪಾತವನ್ನೂ (statutory liquidity ratio)–ಶೇ. 38ರಷ್ಟು ಉನ್ನತ ಮಟ್ಟದಲ್ಲಿ ಇರಿಸಿದ್ದರಿಂದ ಮತ್ತೆ ಬ್ಯಾಂಕುಗಳ ಉದರಿ ಸೃಷ್ಟಿ ಸಾಮರ್ಥ್ಯ ಅಷ್ಟರಮಟ್ಟಿಗೆ ಮೊಟಕಾಗುವುದೂ ಸ್ವಯಂವೇದ್ಯ. ಇವೆರಡೂ ಅಸ್ತ್ರಗಳು ಉಬ್ಬರ ಪರಿಸ್ಥಿತಿಯನ್ನು ತಮಗೆ ತಾವೇ ವಿಚಾರಿಸಿಕೊಂಡಾವು ಎಂಬುದು ರಿಸರ್ವ್ ಬ್ಯಾಂಕಿನ ಅಕ್ಕರೆಯ ಹಾರೈಕೆಯಾಗಿತ್ತು (fond hope).

ಆತಂಕ

ರಿಸರ್ವ್ ಬ್ಯಾಂಕ್ ಈ ಅಸ್ತ್ರಪ್ರಯೋಗ ಮಾಡಿದಾಗ ದೇಶದ ಆರ್ಥಿಕ ಪರಿಸ್ಥಿತಿ ಉತ್ಕಟವಾಗಿಯೇ ಇತ್ತು. ಮಳೆ ಬೆಳೆ ಹೇಗಾದಾವೋ ಎಂಬುದಿನ್ನೂ ಗೊತ್ತಿರಲಿಲ್ಲ. ಮತ್ತೆ ಮುಂಗಾರು ಕೈಕೊಟ್ಟರೆ ? — ಎಂಬ ಭಯವಿತ್ತು. ದೇಶದಲ್ಲಿದ್ದ ಧಾನ್ಯ ದಾಸ್ತಾನು ಕರಗುತ್ತಿತ್ತು. ಕಳೆದ ವರ್ಷದ ಫಸಲು ಕಡಿಮೆಯಾಗಿದ್ದರೂ ಅಂಜಿದ್ದಷ್ಟು ಕಡಿಮೆಯಾಗಿರಲಿಲ್ಲ. ಆದ್ದರಿಂದ ಧಾನ್ಯ ಸಂಗ್ರಹಣೆಯ ಕಾರ್ಯ ತುಂಬ ಹಿಂದೆ ಬೀಳಲಾರದೆಂಬ ಆಶೆಯ ಕಿರಣವೂ ಹೊಳೆಯದಿರಲಿಲ್ಲ. ಆದರೂ ಸರ್ಕಾರಿ ಮಳಿಗೆಗಳಿಂದ ಹರಿದು ಹೋಗುತ್ತಿದ್ದ ಧಾನ್ಯದ ಬದಲು ಹೊಸ ಧಾನ್ಯವೇನೂ ಹೆಚ್ಚಾಗಿ ತುಂಬಿಕೊಳ್ಳಲಿಲ್ಲ. ಒಂದು ವೇಳೆ ಧಾನ್ಯ ಸಂಗ್ರಹಣ ಕಾರ್ಯ ತಕ್ಕ ಮಟ್ಟಿಗೆ ಸಮಾಧಾನಕರವಾಗಿದ್ದರೆ ಅದಕ್ಕಾಗಿ ಬ್ಯಾಂಕು ಉದರಿ ನೀಡಲು ತೊಂದರೆಯೇನೂ ಇರಲಿಲ್ಲ. ಹಿಂದೆ (1977ರಿಂದ 1980ರ ವರೆಗೆ) ಸ್ಥಗಿತಗೊಳಿಸಿದ್ದ—ತನ್ನ ಬಳಿ ಇಟ್ಟುಕೊಂಡಿದ್ದ– ರೂ. 744 ಕೋಟಿಯಷ್ಟು ವೃದ್ಧಿಶೀಲ ನಗದು ಮೀಸಲನ್ನು (incremental cash reserve) ರಿಸರ್ವ್ ಬ್ಯಾಂಕು ಬಿಡುಗಡೆ ಮಾಡಿದ್ದರಿಂದ ಬ್ಯಾಂಕುಗಳು ಧಾನ್ಯಸಂಗ್ರಹಣೆಗಾಗಿ ಸಾಲ ನೀಡಲು ಈ ಹಣವನ್ನು ಬಳಸಿಕೊಳ್ಳಬಹುದೆಂದು ಆಶಿಸಲಾಗಿತ್ತು. ಆದರೆ ಧಾನ್ಯ ಸಂಗ್ರಹಣೆ ಸಮರ್ಪಕವಾಗಿ ಆಗಲಿಲ್ಲ. ಬೆಲೆಗಳು ಏರಬಹುದೆಂಬ ನಿರೀಕ್ಷೆಯಿಂದ ರೈತರು ಧಾನ್ಯ ಒಪ್ಪಿಸದೆ ತಡೆಹಿಡಿದರು. ಮಾರುಕಟ್ಟೆಯಲ್ಲಿ ತಮ್ಮ ಧಾನ್ಯಕ್ಕೆ ಹೆಚ್ಚು ಬೆಲೆ ದೊರಕೀತೆಂಬ ಆಸೆ ಅವರಿಗೆ. ಈ ಪರಿಸ್ಥಿತಿಯಿಂದಾಗಿ ಹಾಗೂ ಬೆಲೆಗಳು ಏರುತ್ತಿದ್ದುದರಿಂದಾಗಿ ರಿಸರ್ವ್ ಬ್ಯಾಂಕು ಮುಂದಿನ ತಿಂಗಳುಗಳನ್ನು ಬಹಳ ಆತಂಕದಿಂದಲೇ ಕಳೆಯಿತೆನ್ನಬೇಕು. ಈ ಆತಂಕ ಅದರ ವಾರ್ಷಿಕ ವರದಿಯಲ್ಲೂ ಅಭಿವ್ಯಕ್ತಗೊಂಡಿರುವುದನ್ನು ಕಾಣಬಹುದು.

ಸದ್ಯದ ಸ್ಥಿತಿ

ಒಳ್ಳೆಯ ಮಳೆಯಿಂದಾಗಿ ಪರಿಸ್ಥಿತಿ ಸುಧಾರಿಸುವುದರಿಂದ ಆರ್ಥಿಕ ಪರಿಸ್ಥಿತಿ ಚೇತರಿಸಿಕೊಳ್ಳುವಂತೆ ಮಾಡಲು ರಿಸರ್ವ್ ಬ್ಯಾಂಕು ಉಜ್ಜುಗಿಸಿದೆ. ಅದರೊಂದಿಗೆ ಹಣದುಬ್ಬರಕ್ಕೆ ಹೆಚ್ಚಿನ ಒತ್ತಡ ಬಾರದಂತೆ ತಡೆಯುವುದೂ ಉದ್ದೇಶವಾಗಿದೆ. ಆದ್ದರಿಂದ ಅದು ನಗದು ಮೀಸಲು ಹಾಗೂ ಪರಿನಿಯತ ದ್ರವತ್ವ ಅನುಪಾತಗಳ ತಂಟೆಗೆ ಹೋಗದೆ ಅವನ್ನು ಹಾಗೆಯೇ ಇರಗೊಟ್ಟು, ಬ್ಯಾಂಕುಗಳು ಉದರಿ ಸೃಷ್ಟಿಯ ಹಂಬಲಕ್ಕೆ ಒಳಗಾಗದಂತೆ ಮಾಡಲು ಎಚ್ಚರ ವಹಿಸಿದೆ. ಬ್ಯಾಂಕುಗಳ ಠೇವಣಿಗಳು ಈ ವರ್ಷ ನಿರೀಕ್ಷಿತ ರೂ. 20,500 ಕೋಟಿಯ ಏರಿಕೆ ಸಾಧಿಸುವ ಭರವಸೆ ಇದೆ. ಅಧಿಕ ಠೇವಣಿಗಳಿಂದ ಬ್ಯಾಂಕುಗಳ ಪ್ರಸಾಮಾನ್ಯ (normal) ಉದರಿ ನೀಡಿಕೆಯ ಕಲಾಪಕ್ಕೆ ಅಡ್ಡಿಯುಂಟಾಗದು. ಅವು ತಮ್ಮ ಅಧಿಕ ಬೇಡಿಕೆ ಪೂರೈಸಲು ರಿಸರ್ವ್ ಬ್ಯಾಂಕಿನ ನೆರವಿಗಾಗಿ ಕೈ ಚಾಚುವ ಪ್ರಮೇಯ ಬರಲಾರದು. ಬ್ಯಾಂಕುಗಳು ಸಾಲ ನೀಡಬಹುದಾದ ನಿವ್ವಳ ಸಂಪನ್ಮೂಲಗಳಲ್ಲಿ ಅತೀವ ಏರಿಕೆಯಾದೀತೆಂಬ ಭಯವೂ ಇಲ್ಲ. ಏಕೆಂದರೆ ಅಧಿಕ ನಗದು ಮೀಸಲು ಅನುಪಾತ (11%) ಹಾಗೂ ಪರಿನಿಯತ ದ್ರವತ್ವ ಅನುಪಾತ (38%)—ಇವುಗಳಿಂದಾಗಿ, ಬ್ಯಾಂಕುಗಳು ಸಾಲ ನೀಡಲು ಒದಗಿಬರಬಹುದಾದ ಸಂಪನ್ಮೂಲಗಳಲ್ಲಿ ರೂ. 2,000 ಕೋಟಿಯಷ್ಟು ಕಡಿತ ಬೀಳುತ್ತದೆ. ಕಳೆದ ವರ್ಷದ ತೇಜಿ ತಿಂಗಳುಗಳಲ್ಲಿ ಬ್ಯಾಂಕುಗಳು ಆಹಾರಧಾನ್ಯಗಳ ಮೇಲೆ ನೀಡಿದ ಉದರಿಯಲ್ಲಿ ರೂ. 1,522 ಕೋಟಿಯಷ್ಟು ಇಳಿತವಾಗಿತ್ತು. ಈ ವರ್ಷದ ತೇಜಿ ಶ್ರಾಯದಲ್ಲಿ ರೂ. 1,000 ಕೋಟಿಯಷ್ಟು ನಿವ್ವಳ ಏರಿಕೆಯಾಗುವುದೆಂಬ ನಿರೀಕ್ಷೆಯಿದೆ. ಬ್ಯಾಂಕುಗಳಲ್ಲಿ ಲಭ್ಯವಿರುವ ಸಂಪನ್ಮೂಲಗಳು ಈ ಅಗತ್ಯವನ್ನು ವಿಚಾರಿಸಿಕೊಳ್ಳ
ಬಹುದೆಂಬುದು ರಿಸರ್ವ್ ಬ್ಯಾಂಕಿನ ನಂಬಿಕೆ.

ಉದರಿ ಪ್ರಾಧಿಕರಣ

ಸದ್ಯದ ಉದರಿ ನಿರ್ಬಂಧಗಳನ್ನು ಹಾಗೆಯೇ
ಮುಂದುವರಿಯಗೊಟ್ಟು, ಸುವೃಷ್ಟಿಯ ಫಲವಾದ
ಆರ್ಥಿಕ ಚೇತರಿಕೆಗೆ ಎಲ್ಲ ಉತ್ತೇಜನವನ್ನೂ
ದೊರಕಿಸಿಕೊಡುವುದಲ್ಲದೆ, ಬ್ಯಾಂಕಿಂಗ್ ಕ್ಷೇತ್ರದಲ್ಲಿ
ಮನೆಮಾಡಿಕೊಂಡಿರುವ ಕೆಲವು ಜಡತೆಯ
ಪ್ರವೃತ್ತಿಗಳನ್ನು ತೊಡೆದುಹಾಕಲೂ ರಿಸರ್ವ್
ಬ್ಯಾಂಕ್ ಇದೀಗ ಕ್ರಮ ತೆಗೆದುಕೊಂಡಿದೆ. ಕೃ
ಚೇತರಿಸಿಕೊಂಡಿರುವುದರಿಂದ ಸಹಜವಾಗಿಯೆ
ಕೈಗಾರಿಕೆಯೂ ಹೆಚ್ಚು ಚುರುಕಾಗುತ್ತದೆ. ಕೈಗಾ
ರಿಕೆಯ ಬೆಳವಣಿಗೆ ಸುಸೂತ್ರವಾಗಿ ಸಾಗುವಂತಾಗಲ
ಅದಕ್ಕೆ ಹೆಚ್ಚಿನ ನೆರವು ಅಗತ್ಯ. ಬ್ಯಾಂಕ್ ರಾಷ್ಟ್ರೀ
ಕರಣ ಆದಮೇಲೆ ಆದ್ಯತಾ ವಲಯಕ್ಕೆ ಹೆಚ್ಚಿ
ಉದರಿ ಹರಿಯುವಂತೆ ಮಾಡಲು, ಲಭ್ಯವಿರು
ವಿರಳ ಸಂಪನ್ಮೂಲ ಪೋಲಾಗದಂತೆ ತಡೆಯಲ
ರಿಸರ್ವ್ ಬ್ಯಾಂಕ್ ಕೈಗೊಂಡ ಕ್ರಮಗಳ ಪೈ
ಉದರಿ ಪ್ರಾಧಿಕರಣ ಯೋಜನೆಯೂ (cred
authorisation scheme) ಒಂದು. ಹೆಚ್ಚಿ
ಮೊತ್ತದ ಸಾಲಗಳನ್ನು ಕೈಗಾರಿಕೆಗಳಿಗೆ ನೀಡು
ಮೊದಲು ಆ ಬಗ್ಗೆ ರಿಸರ್ವ್ ಬ್ಯಾಂಕಿಗೆ ಪೂರ್ವ
ಭಾವಿಯಾಗಿ ಪ್ರಸ್ತಾವವನ್ನೊಪ್ಪಿಸಿ ಅದರಿಂ
ಮಂಜೂರಾತಿ ಪಡೆದ ಮೇಲೇ ಅಂಥ ಉದ
ಗಳನ್ನು ನೀಡಬೇಕೆಂಬುದು ಇದರ ಕಟ್ಟುಪಾಡು
ಆದರೆ ಆಚರಣೆಯಲ್ಲಿ ಈ ಯೋಜನೆಯಿಂ
ಅನುಕೂಲವಾಗುವ ಬದಲು ಬಹಳ ತೊಂದರೆಯೆ
ಆಗುತ್ತಿತ್ತು. ಬ್ಯಾಂಕ್ ಕಳಿಸಿದ ಯಾವುದ
ಪ್ರಸ್ತಾವವಾಗಲಿ (proposal) ಮಂಜೂರಾಗ
ಇರುತ್ತಿರಲಿಲ್ಲವಾದರೂ, ಅತಿಯಾದ ವಿಳಂಬದಿಂ
ಸಂಬಂಧಪಟ್ಟ ಉದ್ಯಮಗಳಿಗೆ ಅಪಾರ ಹಿಂ
ಯಾಗುತ್ತಿತ್ತು. ಬ್ಯಾಂಕ್ ಉದರಿಯ ಬದಲ
ಅನ್ಯ ಮೂಲಗಳತ್ತ ಅವು ಕೈ ಚಾಚುವ ಪ್ರಮೇಯ
ಬಂದಿತ್ತು. ಇದರ ದೋಷಗಳತ್ತ ಅನೇಕರು ರಿಸರ್ವ್
ಬ್ಯಾಂಕಿನ ಗಮನ ಸೆಳೆದಿದ್ದರು. ಈ ಯೋಜನೆಯನ
ರದ್ದು ಮಾಡಿ, ಬ್ಯಾಂಕುಗಳಿಗೆ ಸ್ವಾತಂತ್ರ್ಯ
ನೀಡುವುದು ಮೇಲೆಂದು ಒಂದು ದಶಕದ ಹಿಂ
ದಾಗ್ಲಿ ಸಮಿತಿ ಸಲಹೆ ಮಾಡಿತ್ತು. ಆದರೂ
ಯೋಜನೆ ರದ್ದಾಗಿರಲಿಲ್ಲ. ತುಂಬ ಅರ್ಹ ಸಂದರ್ಭ
ಗಳಲ್ಲಿ ಈ ವಿಳಂಬ ತಪ್ಪಿಸಲು ವೇಗ ಪಥ (fa
track) ಎಂಬ ಯೋಜನೆಯನ್ನು ತರಲಾಗಿತ್ತು
ಇದೆಲ್ಲ ಕೇವಲ ವ್ಯರ್ಥ ಪ್ರಯತ್ನವಾಗಿತ್ತು
ಒಟ್ಟಿನಲ್ಲಿ ಇಡೀ ಉದರಿ ಪ್ರಾಧಿಕರಣ ಯೋಜನೆಯ
ನಗೆಪಾಟಲಿಗೆ ಈಡಾಗಿತ್ತು.

ಈಗ ಕೈಗಾರಿಕಾ ಚೇತರಿಕೆಗೆ ಬೆಂಬಲ ನೀ
ಬೇಕೆಂದು ಸಂಕಲ್ಪ ಮಾಡಿರುವ ರಿಸರ್ವ್ ಬ್ಯಾಂ

ಈ ಯೋಜನೆಯನ್ನು ರದ್ದುಮಾಡಿದೆ. ಎಂದರೆ ಇಂಥ ಸಾಲಗಳನ್ನು ನೀಡುವ ಮುನ್ನ ರಿಸರ್ವ್ ಬ್ಯಾಂಕಿನ ಒಪ್ಪಿಗೆ ಪಡೆಯಬೇಕಾದ ಅಗತ್ಯವಿಲ್ಲ. ಆದ್ಯತಾ ವಲಯದ ಉದರಿ ಬೇಡಿಕೆ ಸಮರ್ಪಕವಾಗಿ ಪೂರೈಕೆಯಾಗುತ್ತಿರುವುದರಿಂದ ಇನ್ನು ಮುಂದೆ ಉದರಿಗೆ ಈ ಬಗೆಯ ಪಡಿತರ ವಿಧಿಸಬೇಕಾದ ಅಗತ್ಯವಿಲ್ಲ ಎಂದು ಅದು ತನ್ನ ಹಿಂದಿನ ನಿಲುವನ್ನು ಸಮರ್ಥಿಸಿಕೊಂಡಿದೆ. ಈಗ ಅದನ್ನು ರದ್ದು ಮಾಡಲು ಒಂದು ಕಾರಣ ಹುಡುಕಿಕೊಂಡಿದೆ. ಆದರೂ ಉದರಿಯ ಅಪವ್ಯಯವಾಗದಂತೆ ತಡೆಯುವ ಉದ್ದೇಶ ಬಿಟ್ಟುಕೊಟ್ಟಿಲ್ಲವೆಂದೂ ಹೇಳಿಕೊಂಡಿದೆ. ರೂ. ಐದು ಕೋಟಿಯನ್ನು ಮೀರಿದ ಉದರಿಗೆ ಸಂಬಂಧಿಸಿದಂತೆ, ಅದನ್ನು ನೀಡುವ ಮುನ್ನ ಅಲ್ಲದಿದ್ದರೂ ಆಮೇಲೆ, ಆ ಬಗ್ಗೆ ಪರತ ಮಾಹಿತಿಯನ್ನು ರಿಸರ್ವ್ ಬ್ಯಾಂಕಿಗೆ, ಅದರ ಅವಗಾಹನೆಗಾಗಿ, ಒಪ್ಪಿಸುವುದು ಬ್ಯಾಂಕುಗಳ ಕರ್ತವ್ಯ. ಏನಾದರೂ ಹೆಚ್ಚುಕಡಿಮೆ ಆಗಿದ್ದರೆ ಜೋಕೆ ಎಂಬ ಧ್ವನಿಯೂ ಇದರ ಹಿಂದೆ ಇದೆ. ಆದರೆ ಉದರಿ ನೀಡಿಕೆಗೆ ಮುನ್ನ ಕಳಿಸಿದ ಪ್ರಸ್ತಾವವನ್ನೇ ಸಕಾಲದಲ್ಲಿ ನೋಡಲಾಗದೆ, ಅದರ ಮೇಲೆ ಧೂಳು ಕೂರಲು ಅವಕಾಶ ಮಾಡಿಕೊಟ್ಟಿದ್ದ ರಿಸರ್ವ್ ಬ್ಯಾಂಕು ಈಗ ಚುರುಕಾಗಿ ಈ ಪರತ ಮಾಹಿತಿಯ ಕಡತವನ್ನು ಬಿಚ್ಚಿ ನೋಡಿ, ಆಗಿರಬಹುದಾದ ಅಕ್ರಮವನ್ನು ಸಕಾಲದಲ್ಲಿ ಗಮನಿಸಿ ಯುಕ್ತ ರೀತಿಯಲ್ಲಿ ವರ್ತಿಸುವುದೆಂದು ಹೇಳಲಾಗದು. ಒಟ್ಟಿನಲ್ಲಿ ಬ್ಯಾಂಕುಗಳಿಗೆ ಹೊಣೆಗಾರಿಕೆ ನೀಡಿ, ಸರಿಕಂಡಂತೆ ಅವು ವರ್ತಿಸುವಂತೆ ನೋಡಿಕೊಳ್ಳುವುದೇ ಒಳಿತು ಎಂಬುದು ಈ ಪ್ರಕರಣದಿಂದ ರಿಸರ್ವ್ ಬ್ಯಾಂಕ್ ಕಲಿತಿರುವ ನೀತಿಪಾಠ.

ಭಾಗೀದಾರಿಕೆ ಪತ್ರ

ರಿಸರ್ವ್ ಬ್ಯಾಂಕ್ ತೆಗೆದುಕೊಂಡಿರುವ ಇನ್ನೊಂದು ಸ್ವಾಗತಾರ್ಹ ಕ್ರಮವೆಂದರೆ, ಭಾಗೀದಾರಿಕೆ ಪತ್ರಗಳನ್ನು (participation certificate) ಮತ್ತೆ ಜೀವಂತಗೊಳಿಸಿರುವುದು. ಭಾರತದ ಹಣ ಪೇಟೆಯ ವಿಕಾಸಕ್ಕೆ ಉಚಿತವಾದ ಕ್ರಮಗಳನ್ನು ಸೂಚಿಸಲು 1986ರಲ್ಲಿ ನೇಮಕಗೊಂಡಿದ್ದ ವಾಘುಲ್ ಸಮಿತಿ ಈ ಬಗ್ಗೆ ಶಿಫಾರಸು ನೀಡಿತ್ತು. ಬ್ಯಾಂಕುಗಳ ದ್ರವತ್ವದ ಅತಿವ್ಯಾಪ್ತಿ ಹಾಗೂ ಅವ್ಯಾಪ್ತಿಯ ತೊಡಕುಗಳನ್ನು ನಿವಾರಿಸಿ, ಅದು ಸಮವಾಗಿ ಹರಿಯುವಂತೆ ಮಾಡಲು ಇವು ಸಹಾಯಕ. ಮುಂಗಡಗಳಲ್ಲಿ ಬ್ಯಾಂಕುಗಳು ಪಾಲ್ಗೊಳ್ಳಲು, ಬ್ಯಾಂಕು-ಬ್ಯಾಂಕುಗಳ ನಡುವೆ ಹಣದ ಕೊಡು–ಕೊಳು ಸಾಧ್ಯವಾಗುವಂತಾಗಲು ಇವು ನೆರವಾಗುತ್ತವೆ. ಭಾಗೀದಾರಿಕೆ ಪತ್ರಗಳ ಅವಧಿ. ಬಡ್ಡಿ ದರ ಇತ್ಯಾದಿಗಳನ್ನು ವಿಧಿಸಲಾಗಿದೆ. ಹಿಂದೆ ಈ ಸೌಲಭ್ಯವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದದ್ದರಿಂದ 1979ರಲ್ಲಿ ರಿಸರ್ವ್ ಬ್ಯಾಂಕು ಇದನ್ನು ಬ್ಯಾಂಕಿನ ತಗಾದೆ ಹಾಗೂ ಸಾವಧಿ ಹೊಣೆಯೆಂದು ಪರಿಗಣಿಸಿ, ಇದೂ ಮೀಸಲಿನ ಕಟ್ಟುಪಾಡಿಗೆ ಒಳಪಡಬೇಕೆಂದು ವಿಧಿಸಿತ್ತು. ಈಗ ಎಲ್ಲ ಭಾಗೀದಾರಿ ಪತ್ರಗಳಿಗೂ ಈ ನಿರ್ಬಂಧವಿಲ್ಲ. ನಷ್ಟ ಸಂಭವದ ಪಾಲುದಾರಿಕೆ (risk-sharing) ಇಲ್ಲದ ಪತ್ರಗಳಿಗೆ ಮಾತ್ರ ಈ ನಿರ್ಬಂಧ ಅನ್ವಯವಾಗುತ್ತದೆ.

ಗ್ರಾಹಕರಿಗೆ ಆಯ್ಕೆ ಸ್ವಾತಂತ್ರ್ಯ

ಬ್ಯಾಂಕುಗಳಿಗೆ ತಮ್ಮ ಹೊಣೆಗಳನ್ನು ಇತರರೊಂದಿಗೆ ಹಂಚಿಕೊಳ್ಳಲು ಈಗ ಅವಕಾಶ ಇರುವಂತೆ ಗ್ರಾಹಕರಿಗೂ ವ್ಯವಹಾರದಲ್ಲಿ ಈಗ ಆಯ್ಕೆಯ ಸ್ವಾತಂತ್ರ್ಯ ದೊರಕುತ್ತದೆ. ಖಾತೆಗಳನ್ನು ಒಂದು ಬ್ಯಾಂಕಿನಿಂದ ಇನ್ನೊಂದು ಬ್ಯಾಂಕಿಗೆ ವರ್ಗಾಯಿಸಿಕೊಳ್ಳುವುದು ಈಗ ಸಾಧ್ಯ. ಹೀಗೆ ಬ್ಯಾಂಕಿಂಗಿನಲ್ಲಿ ಸ್ಪರ್ಧೆಯ ಅಂಶ ಪ್ರವೇಶಮಾಡಿದೆ. ಆದರೆ ಈ ಪ್ರಕ್ರಿಯೆಯಲ್ಲಿ ದುರ್ಬಲ ಬ್ಯಾಂಕುಗಳು ನಷ್ಟ ಅನುಭವಿಸುವ ಅಪಾಯವೂ ಉಂಟು. ಇದನ್ನು ನಿವಾರಿಸಲು ಎಚ್ಚರಿಕೆ ವಹಿಸುವುದು ಅಗತ್ಯ.

ದರಗಳಲ್ಲಿ ನಮ್ಯತೆ

ದ್ರವ ಸಂಪನ್ಮೂಲಗಳು ಬ್ಯಾಂಕುಗಳ ಬಳಿ ಸಾಕಷ್ಟು ಇರುವುದರಿಂದ ಸಾಲ ನೀಡಿಕೆ ದರಗಳ ವಿಚಾರದಲ್ಲಿ ಅವು ಒಂದಿಷ್ಟು ನಮ್ಯತೆ (flexibility) ಸಾಧಿಸಲು ಅವಕಾಶವುಂಟು. 'ವ್ಯವಹಾರ ಸ್ಥಿತಿಯಲ್ಲಿ ಏರಿಳಿತಗಳಾದಂತೆ, ತಮ್ಮ ನಿಧಿಗಳ ವೆಚ್ಚಗಳಿಗೆ ಅನುಗುಣವಾಗಿ ಸಾಲದ ಬಡ್ಡಿ ದರಗಳನ್ನು ವ್ಯತ್ಯಾಸಗೊಳಿಸಲು ಬ್ಯಾಂಕುಗಳಿಗೆ ಅವಕಾಶ ಇರಬೇಕು' ಎಂಬ ಚಕ್ರವರ್ತಿ ಸಮಿತಿಯ ಶಿಫಾರಸನ್ನು ರಿಸರ್ವ್ ಬ್ಯಾಂಕ್ ಗಮನಿಸಿದೆಯೆಂಬುದಕ್ಕೆ ದ್ಯೋತಕವಾಗಿ, ಬಡ್ಡಿ ದರಗಳನ್ನು ಆಯಾ ಗ್ರಾಹಕರ ಪ್ರತ್ಯಯಗಳಿಗೆ ಅನುಗುಣವಾಗಿ ವಿಧಿಸಲು ಬ್ಯಾಂಕುಗಳಿಗೆ ಅದು ಸ್ವಾತಂತ್ರ್ಯ ನೀಡಿದೆ. ಆದರೆ ಕನಿಷ್ಠ ದರ ಶೇಕಡ 16 ಎಂದು ವಿಧಿಸಿದೆ. ಉತ್ಕೃಷ್ಟ ಸಾಲಕ್ಕೆ ಈ ದರ. ಹೀಗೆ ತಳ ದರವನ್ನು (floor rate) ಸ್ಥಿರವಾಗಿರಿಸಿರುವುದರಿಂದ ಈ ಸ್ವಾತಂತ್ರ್ಯ ಮೇಲ್ತುದಿಗೆ ಮಾತ್ರ ಅನ್ವಯಿಸುತ್ತದೆ; ಕೆಳತುದಿಗೆ–ತಳಕ್ಕೆ–ಅಲ್ಲ. ಒಂದು ವೇಳೆ ಈ ತಳವನ್ನು ರಿಸರ್ವ್ ಬ್ಯಾಂಕ್ ಸ್ಥಿರಗೊಳಿಸದಿದ್ದರೂ ಬ್ಯಾಂಕುಗಳೆಲ್ಲ ಸೇರಿ ಮಾತಾಡಿಕೊಂಡು ಒಂದು ನಿಶ್ಚಿತ ತಳ ನಿರ್ಧರಿಸಿಕೊಳ್ಳುತ್ತಿದ್ದುವು. ಸಂಪೂರ್ಣ ಅನಿರ್ಬಂಧ ಪರಿಸ್ಥಿತಿಗೆ ಅವು ಇನ್ನೂ ಸಿದ್ಧವಾಗಿಲ್ಲವೆನಿಸುತ್ತದೆ.

ಗೃಹನಿರ್ಮಾಣ ಧನ

ಗೃಹನಿರ್ಮಾಣ ಕಾರ್ಯಕ್ಕಾಗಿ ಬ್ಯಾಂಕ್ ಹಣಕಾಸು ಹೆಚ್ಚಾಗಿ ಒದಗಿ ಬರುವಂತೆ ಮಾಡಲೂ ರಿಸರ್ವ್ ಬ್ಯಾಂಕ್ ಕ್ರಮ ಕೈಗೊಂಡಿದೆ. ಇದಕ್ಕಾಗಿ ನೀಡಿದ ಸಾಲದ ಮರುಪಾವತಿಯ ಅವಧಿಯನ್ನು 10 ವರ್ಷಗಳಿಂದ 15 ವರ್ಷಗಳಿಗೆ ವಿಸ್ತರಿಸಲಾಗಿದೆ. ಇಂಥ ಹಣಕಾಸು ಪೂರೈಕೆಯಲ್ಲಿ ಸಾಲಗಾರನ ಸ್ವಭಾಗದ (margin) ಮಿತಿಯನ್ನು ಕುಗ್ಗಿಸಲಾಗಿದೆ. ಬಡ್ಡಿ ದರಗಳನ್ನೂ ಪುನರ್ವಿಮರ್ಶಿಸಲಾಗಿದೆ. ಈ ಬದಲಾವಣೆಗಳಿಂದ ಗೃಹನಿರ್ಮಾಣಕ್ಕೆ ಹೆಚ್ಚಿನ ಪ್ರೋತ್ಸಾಹ ದೊರಕುವಂತಾಗಿದೆ. ಈ ಉದ್ದೇಶಕ್ಕಾಗಿ ಕೆಲವು ಬ್ಯಾಂಕುಗಳು ಹಿಂದೆಯೇ ಸಹಾಯಕ ಸಂಸ್ಥೆಗಳನ್ನು ಆರಂಭಿಸಿದ್ದರೂ ಈ ಕ್ಷೇತ್ರದಲ್ಲಿ ಚಟುವಟಿಕೆ ಇದುವರೆಗೂ ಚುರುಕಾಗಿರಲಿಲ್ಲ. ಈ ಬಗ್ಗೆ ಅನುಸರಿಸಬೇಕಾಗಿದ್ದ ವಿಧಿವಿಧಾನಗಳು ತುಂಬ ಗಡುಸಾಗಿದ್ದುದು ಒಂದು ಕಾರಣ. ಅಲ್ಲದೆ ಹಣಕಾಸು ಸುಲಭವಾಗಿ ಲಭ್ಯವಿರಲಿಲ್ಲ. ಇನ್ನು ಮುಂದೆ ಈ ತೊಡಕುಗಳ ನಿವಾರಣೆಯಾದೀತು.

ಒಟ್ಟಿನಲ್ಲಿ ರಿಸರ್ವ್ ಬ್ಯಾಂಕ್ ಮೊತ್ತಮೊದಲ ಬಾರಿಗೆ ಹಲವು ಪ್ರಯೋಗಗಳನ್ನು ಮಾಡುತ್ತಿದೆ. ಉದರಿ ನೀತಿಯ ಸಂರಚನೆಯಲ್ಲೇ ಕೆಲವು ಬದಲಾವಣೆಗಳನ್ನು ತರುತ್ತಿದೆ. ಆದರೆ ಸರ್ಕಾರ ಮಾಡುತ್ತಿರುವ ಅಗಾಧ ಅನುತ್ಪಾದಕ ಹಾಗೂ ಯೋಜನೇತರ ವೆಚ್ಚಗಳು ರಿಸರ್ವ್ ಬ್ಯಾಂಕಿನ ಈ ಪ್ರಯತ್ನಗಳನ್ನೆಲ್ಲ ತಲೆಕೆಳಗು ಮಾಡುವ ಸಾಧ್ಯತೆಯೂ ಇಲ್ಲದಿಲ್ಲ. ಸರ್ಕಾರದ ಈ ನೀತಿಯಿಂದಾಗಿ ಹಣದ ಹುಚ್ಚುಹೊಳೆ ಹರಿದು ಬೆಲೆಗಳ ಅತೀವ ಅಸ್ಥಿರತೆಗೆ ಹಾದಿಮಾಡಿಕೊಡುವ ಅಪಾಯವಿದ್ದೇ ಇದೆ. ರಿಸರ್ವ್ ಬ್ಯಾಂಕ್ ಈ ವಿಚಾರದಲ್ಲಿ ನಿಸ್ಸಹಾಯಕ. ಹಾಗಾಗದಿರಲೆಂದು ಆಶಿಸಬೇಕಾಗಿದೆ. ★

ಸಂಶೋಧನೆ ಮತ್ತು ಬ್ಯಾಂಕಿಂಗ್

ಅತ್ಯಂತ ವ್ಯಾಪಕವಾಗಿಯೂ ವೈವಿಧ್ಯಮಯವಾಗಿಯೂ ಬೆಳೆದಿರುವ ಬ್ಯಾಂಕಿಂಗ್ ವ್ಯವಸ್ಥೆಯ ವ್ಯವಸ್ಥಾಪನ ಮತ್ತು ಸಂರಚನೆಯ ಸವಾಲುಗಳನ್ನೆದುರಿಸಲು ಮತ್ತು ಕಾರ್ಯಾಚರಣೆಯ ವೆಚ್ಚವನ್ನು ಇಳಿಸಿ ಉತ್ಪಾದಕತೆ ಮತ್ತು ಲಾಭಪ್ರದತೆಗಳನ್ನು ಹೆಚ್ಚಿಸಲು ನೀತಿನಿರೂಪಣೆ, ತಂತ್ರವ್ಯೂಹ ಮತ್ತು ಆಡಳಿತ—ಹೀಗೆ ಈ ಮೂರೂ ಸ್ತರಗಳಲ್ಲಿ ಸಂಶೋಧನೆಯ ಅಗತ್ಯವಿದೆ.

ಕೆ. ಎನ್. ಮಹಾಬಲ
ಅಧಿಕೃತ ಭಾಷಾ ವಿಭಾಗ
ಸ್ಥಳೀಯ ಪ್ರಧಾನ ಕಛೇರಿ
ಭಾರತೀಯ ಸ್ಟೇಟ್ ಬ್ಯಾಂಕ್
ಬೆಂಗಳೂರು

ನಮ್ಮ ಬ್ಯಾಂಕಿಂಗ್ ವ್ಯವಸ್ಥೆ ಕಳೆದ ಹದಿನೆಂಟು ವರ್ಷಗಳಲ್ಲಿ ಅಭೂತಪೂರ್ವವಾದ ಬದಲಾವಣೆಗಳನ್ನು ಕಂಡಿದೆ. ಶಾಖೆಗಳ ವಿಸ್ತರಣೆ, ಠೇವಣಿ ವೃದ್ಧಿ, ಸಾಲಗಳ ನೀಡಿಕೆಯಲ್ಲಿ ಹೆಚ್ಚಳ—ಈ ಅಂಕಿ ಅಂಶಗಳೇ ಅಲ್ಲದೆ ಬ್ಯಾಂಕ್ ಸೇವೆಗಳ ವಿಶೇಷೀಕರಣ, ವೈವಿಧ್ಯೀಕರಣ ಇವೆಲ್ಲಾ ಇಂದು ಬ್ಯಾಂಕಿಂಗನ್ನು ಸಂಕೀರ್ಣವ್ಯವಸ್ಥೆಯನ್ನಾಗಿಸಿವೆ.

ಬ್ಯಾಂಕಿಂಗ್ ಕಂಡಿರುವ ಪ್ರಗತಿ ಸುಭದ್ರವಾದುದೇ ? ಇಂದು ಬ್ಯಾಂಕಿಂಗ್ ವಲಯವನ್ನು ಬಾಧಿಸುತ್ತಿರುವ ಸಮಸ್ಯೆಗಳ ಸ್ವರೂಪ, ಅಗಾಧತೆಗಳೇನು ? ಮುಂದಿನ ಬ್ಯಾಂಕಿಂಗ್ ದಾರಿ ಎತ್ತ ? ಮುಂತಾದ ಪ್ರಶ್ನೆಗಳನ್ನು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕಳಕಳಿ ಹೊಂದಿರುವವರೆಲ್ಲ ಕೇಳುವುದು ಸಹಜವಾಗಿದೆ. ಇದು ಬ್ಯಾಂಕಿಂಗ್‌ನಲ್ಲಿ ಆಗಿರುವ, ಮತ್ತು ಆಗಬೇಕಾಗಿರುವ ಸಂಶೋಧನೆಯತ್ತ ಗಮನ ಹರಿಸುವಂತೆ ಮಾಡುತ್ತದೆ.

ಸಂಶೋಧನೆ ಏನು ? ಹೇಗೆ ?

ವೈಜ್ಞಾನಿಕ ವಲಯದಲ್ಲಿ ನಡೆಯುವ ಸಂಶೋಧನೆಗೂ ಬ್ಯಾಂಕಿಂಗ್‌ನಂತಹ ವಲಯದಲ್ಲಿ ನಡೆಯುವ ಸಂಶೋಧನೆಗೂ ಇರುವ ಮೂಲಭೂತವಾದ ವ್ಯತ್ಯಾಸವನ್ನು ಕಂಡುಕೊಳ್ಳುವುದು ಅಗತ್ಯವಾಗಿದೆ. ಬ್ಯಾಂಕಿಂಗ್ ವಲಯದ ಸಂಶೋಧನೆ ಪ್ರಮುಖವಾಗಿ ಮೌಲ್ಯಾಂಕನ, ಅಧ್ಯಯನ, ವರದಿ, ಸಮೀಕ್ಷೆ ಮುಂತಾದ ಅನೌಪಚಾರಿಕ ರೂಪದಲ್ಲಿರುತ್ತದೆ. ಬ್ಯಾಂಕಿಂಗ್ ಕುರಿತ ಸಂಶೋಧನೆಯೆಂದರೆ, ಇಂಥ ಅಧ್ಯಯನದ ಅನುಷ್ಠಾನ, ಉಪಯುಕ್ತತೆಯನ್ನು ಪರಿಶೀಲಿಸುವುದಾಗಿದೆ.

ಕ್ರಿಯಾಶೀಲ ವಲಯವೆನ್ನಿಸಿರುವ 'ಬ್ಯಾಂಕಿಂಗ್' ವಲಯದಲ್ಲಿ ಇದುವರೆಗೆ ನಡೆದಿರುವ ಸಂಶೋಧನೆ ಅಸಮರ್ಪಕವಾದುದೆಂದೇ ಗುರುತಿಸಲಾಗಿದೆ. 1972 ರಷ್ಟು ಹಿಂದೆಯೇ ಬ್ಯಾಂಕಿಂಗ್ ಆಯೋಗ, ತನ್ನ ವರದಿಯಲ್ಲಿ, 'ಬ್ಯಾಂಕಿಂಗ್ ಕ್ಷೇತ್ರ' ಸಂಶೋಧಕರ ಅಲಕ್ಷ್ಯಕ್ಕೆ ತುತ್ತಾಗಿದೆ ಎಂದು ಆಪಾದಿಸಿತ್ತು. ಸುದೀರ್ಘ ಬ್ಯಾಂಕಿಂಗ್ ಇತಿಹಾಸದಲ್ಲಿ, ದೇಶದ ವಿವಿಧ ವಿಶ್ವವಿದ್ಯಾಲಯಗಳಿಗೆ ಬ್ಯಾಂಕಿಂಗ್‌ಕುರಿತಂತೆ ಕೇವಲ 37 ಪ್ರೌಢಪ್ರಬಂಧಗಳು ದಾಖಲಾಗಿದ್ದುವು. ಅನಂತರದ ವರ್ಷಗಳಲ್ಲಿ ಈ ಸಂಖ್ಯೆ ಸ್ವಲ್ಪ ಹೆಚ್ಚಿರಬಹುದು ಅಷ್ಟೆ.

ಸಂಶೋಧನೆಯ ದೃಷ್ಟಿಕೋನ

ಬ್ಯಾಂಕುಗಳಲ್ಲಿ ಸಂಶೋಧನೆ ಅಗತ್ಯವಾದುದೋ ಇಲ್ಲವೋ ಎಂಬುದು ಇನ್ನೂ ಪ್ರಶ್ನೆಯಾಗೇನೂ ಉಳಿದಿಲ್ಲ. ಬ್ಯಾಂಕುಗಳ ಆಂತರಿಕ ಸಮಸ್ಯೆಗಳ ಅಧ್ಯಯನ, ಒಟ್ಟಾರೆ ಎಲ್ಲ ಬ್ಯಾಂಕುಗಳ ಅಧ್ಯಯನ, ಇಡೀ ಅರ್ಥವ್ಯವಸ್ಥೆಗೆಅನ್ವಯವಾಗುವಬ್ಯಾಂಕಿಂಗ್ ಅಂಶಗಳು—ಇವೆಲ್ಲದರ ಮಹತ್ವ ಬ್ಯಾಂಕಿಂಗ್ ವಲಯದ ಸಂಶೋಧಕ ಪ್ರವೃತ್ತಿಯ ಅಗತ್ಯವನ್ನು ಹೆಚ್ಚಿಸಿವೆ. ಇಂದಿನ ಬ್ಯಾಂಕಿಂಗ್ ಸಂಶೋಧನೆಯ ದೃಷ್ಟಿಕೋನ ಈ ಮುಖ್ಯವಾದ ವಿಷಯಗಳನ್ನು ಕುರಿತಂತೆ ಇರುತ್ತದೆ :

1 ವ್ಯವಸ್ಥಾಪನ ಮತ್ತು ಸಂರಚನೆಯ ಸವಾಲುಗಳು,
2 ಕಾರ್ಯಾಚರಣೆಯ ವೆಚ್ಚದಲ್ಲಿ ಇಳಿತ,
3 ಉತ್ಪಾದಕತೆ ಮತ್ತು ಲಾಭಪ್ರದತೆ.

ಸಂಶೋಧನೆಯ ಸ್ತರಗಳು

ಬ್ಯಾಂಕಿಂಗ್ ವಲಯದಲ್ಲಿ ಸಂಶೋಧನೆಯನ್ನು ಸಾಮಾನ್ಯವಾಗಿ ಈ ಮೂರು ಸ್ತರಗಳಲ್ಲಿ ಕೈಗೊಳ್ಳಲಾಗುತ್ತದೆ :

1 ನೀತಿನಿರೂಪಣಾ ಸ್ತರ (Policy level)
2 ತಂತ್ರವ್ಯೂಹ ಸ್ತರ (Stratagic level)
3 ಆಡಳಿತ ಸ್ತರ (Administrative level)

ಇಡೀ ವ್ಯವಸ್ಥೆಯಲ್ಲಿ ಅನ್ವಯಿಸಬಹುದಾದ ನಿರ್ದೇಶಗಳನ್ನೂ ಅಗತ್ಯಗಳನ್ನೂ ನೀತಿನಿರೂಪಣಾ ಸ್ತರದಲ್ಲಿ ಸಂಶೋಧಿಸಲಾಗುತ್ತದೆ. ಈ ನೀತಿ ನಿರೂಪಣಾ ಸ್ತರದಲ್ಲಿ ಕೈಗೊಂಡ ಸಂಶೋಧನೆಯ ಫಲವನ್ನು ಅನುಷ್ಠಾನಕ್ಕೆ ತರಬೇಕಾದ ಪರಿಯನ್ನು ನಿರೂಪಿಸಲು ತಂತ್ರವ್ಯೂಹ ಸ್ತರದ ಸಂಶೋಧನೆ ಸಹಕರಿಸುತ್ತದೆ.

ಕಾರ್ಯಾಚರಣೆಯ ಸಂಬಂಧದ ಅಂಶಗಳನ್ನು ವಿಶ್ಲೇಷಿಸಿ ನಿರೀಕ್ಷಿಸಿದ ಬದಲಾವಣೆಗಳನ್ನು ಆಡಳಿತ ಸ್ತರದ ಸಂಶೋಧನೆ ತರಲು ಯತ್ನಿಸುತ್ತದೆ. ಈ ಮೂರೂ ಸ್ತರಗಳ ಸಂಶೋಧನೆಗಳು ಮುಖ್ಯವಾದುವಷ್ಟೇ ಅಲ್ಲದೆ ಪರಸ್ಪರ ಅವಲಂಬಿತವೂ ಆಗಿವೆ.

ಇತ್ತೀಚಿನ ಹಲವು ಉಪಯುಕ್ತ ಸಂಶೋಧನೆಗಳು

1969ರಲ್ಲಿ ನೇಮಕವಾಗಿದ್ದ ಬ್ಯಾಂಕಿಂಗ್ ಆಯೋಗದ ವರದಿಯನ್ನು ಇಂದೂ ಒಂದು ಉಪಯುಕ್ತ ಸಂಶೋಧಕ ಕಾರ್ಯವೆಂದೇ ಗುರುತಿಸಲಾಗಿದೆ. ಐತಿಹಾಸಿಕ ಅಧ್ಯಯನ, ಮೌಲ್ಯಾಂಕನ, ಸಮೀಕ್ಷೆ, ಪ್ರಾಯೋಗಿಕ ಸಂಶೋಧನೆ ಮುಂತಾದ ದೃಷ್ಟಿಕೋನಗಳನ್ನು ಈ ಆಯೋಗದ ವರದಿ ಯಶಸ್ವಿಯಾಗಿ ಸಂಯೋಜಿಸಿದೆ.

ಭಾರತೀಯ ಬ್ಯಾಂಕುಗಳ ನೀತಿನಿರೂಪಣೆಯ ಅಧ್ಯಯನ ಕುರಿತು ನಡೆದಿರುವ ಇನ್ನೊಂದು ಪ್ರಯತ್ನವೆಂದರೆ ಡಿ. ಎನ್. ಘೋಷರಿಂದ: 'ಭಾರತದಲ್ಲಿದ ಬ್ಯಾಂಕಿಂಗ್ ನೀತಿ–ಒಂದು ಮೌಲ್ಯಾಂಕನ 1979.' ನೀತಿನಿರೂಪಣೆ ಕುರಿತ ವಿವಿಧ ವ್ಯಾಖ್ಯೆಗಳಲ್ಲಿ ಇರುವ ಸಾಮರಸ್ಯವನ್ನು ಗುರುತಿಸುವ ಜತೆಗೆ ಈ ನಿಟ್ಟಿನಲ್ಲಿ ಅಗತ್ಯವಾದ ಅಂಶಗಳನ್ನೂ ಅವಯವಗಳನ್ನೂ ವಿಶ್ಲೇಷಿಸುವ ಕಾಳಜಿಯನ್ನೂ ಶ್ರೀ ಘೋಷ್ ಹೊಂದಿದ್ದರು.

ಇತ್ತೀಚೆಗೆ ಪ್ರೊ. ಸುಖಮಯ್ ಚಕ್ರವರ್ತಿ ವರದಿ ಅರ್ಥವ್ಯವಸ್ಥೆಯತ್ತ ನೋಟ ಹರಿಸಿದ ಇನ್ನೊಂದು ಯತ್ನ. ಅರ್ಥವ್ಯವಸ್ಥೆಗೆ ಸುಭದ್ರ ಚೌಕಟ್ಟೊಂದನ್ನು ನೀಡಿದ್ದೇ ಅಲ್ಲದೆ, ಅದನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಬೇಕಾದ ತಂತ್ರರಚನೆಯನ್ನೂ ಸಮಿತಿ ನಿರ್ದೇಶಿಸಿತ್ತು. ಅಲ್ಲದೆ ಸರ್ಕಾರಕ್ಕೆ ರಿಸರ್ವ್ ಬ್ಯಾಂಕ್ ನೀಡುವ ಸಾಲದ ಮೇಲೆ ನಿರ್ಬಂಧ, ಬಡ್ಡಿದರಗಳಪುನರ್ರಚನೆ, ಚೈತನ್ಯಶೀಲ ಹುಂಡಿ ಮಾರುಕಟ್ಟೆಗಳ ಅಭಿವೃದ್ಧಿ

ಮುಂತಾದ ಪುರೋಗಾಮಿ ಶಿಫಾರಸುಗಳನ್ನೂ ಪ್ರೊ. ಚಕ್ರವರ್ತಿ ಆಯೋಗ ನೀಡಿದೆ.

ಬ್ಯಾಂಕುಗಳು ಸ್ಥಾಪನೆಯಾದ ಹಿನ್ನೆಲೆ, ನಡೆದು ಬಂದ ದಾರಿ, ಸಾಧನೆ-ವೈಫಲ್ಯಗಳನ್ನು ಗುರುತಿಸುವ ಯತ್ನವಾಗಿ ಇಂಡಿಯನ್ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ಬ್ಯಾಂಕ್ ಆಫ್ ಬರೋಡಾ ಮತ್ತು ಭಾರತೀಯ ಸ್ಟೇಟ್ ಬ್ಯಾಂಕ್ ಸಂಶೋಧಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸಿವೆ.

ಸಂಶೋಧಕ ಪ್ರವೃತ್ತಿ; ಅನುಷ್ಠಾನದ ತೊಡಕುಗಳು

ಸುಸಂಬದ್ಧ ಹಾಗೂ ವ್ಯವಸ್ಥಿತ ರೂಪದ ಸಂಶೋಧನ ವ್ಯವಸ್ಥೆ ಇಲ್ಲದಿರುವಾಗ ಅನೌಪಚಾರಿಕ ಸ್ವರೂಪದ ಅಧ್ಯಯನ, ಸಮೀಕ್ಷೆ, ವರದಿ ಮುಂತಾದವೇ ಸಂಶೋಧನೆಯ ಕಲ್ಪನೆ ನೀಡುತ್ತದೆಯಾದರೂ, ಹಲವಾರು ರೀತಿಯ ಕಾರ್ಯಾಚರಣೆ ಸಂಬಂಧಿ ತೊಡಕು ಅನುಷ್ಠಾನವಾಗುವಾಗ ಕಂಡು ಬರುತ್ತಿದೆ.

1 ನೀತಿಸಂಬಂಧಿ ನಿರ್ದೇಶನಗಳ ತಾಕಲಾಟ

ಹಲವಾರು ವೇಳೆ ನೀತಿಸಂಬಂಧಿ ನಿರ್ದೇಶನಗಳ ತಾಕಲಾಟದಿಂದ ಸಮಸ್ಯೆ ಉದ್ಭವಿಸುತ್ತದೆ. ಉದಾಹರಣೆಗೆ ಯೋಜನಾ ಆಯೋಗ, ಏಳನೆಯ ಯೋಜನೆಯಲ್ಲಿ, ಸಾರ್ವಜನಿಕವಲಯದಲ್ಲಿ 50 ಸಾವಿರ ಉದ್ಯೋಗ ಸೃಷ್ಟಿಯಾಗುತ್ತದೆಂದು ಯಾವುದೋ ಸಮೀಕ್ಷೆಯ ಆಧಾರದ ಮೇಲೆ ಅಂದಾಜು ಮಾಡುತ್ತದೆ. 1986ರ ಹೊತ್ತಿಗೆ ಈ ಸಂಖ್ಯೆ 30 ಸಾವಿರಕ್ಕೆ ಇಳಿಯುತ್ತದೆ. ಈ ಮಧ್ಯೆ ಹಣಕಾಸು ಸಚಿವಾಲಯ ಯೋಜನೆಯ ಗುರಿಗಳನ್ನು ಲಕ್ಷಿಸದೆ ಉದ್ಯೋಗಿಗಳ ಸಂಖ್ಯೆ, 1986ರ ಡಿಸೆಂಬರ್ ಸಂಖ್ಯೆಗಿಂತ ಶೇ. 1.5 ಮೀರಬಾರದೆಂದು ನಿರ್ದೇಶಿಸುತ್ತದೆ. ಹೀಗೆ ಸುಮಾರು 15 ಸಾವಿರ ಉದ್ಯೋಗ ಮಾತ್ರ ಸೃಷ್ಟಿಯಾಗುತ್ತದೆ. ಯೋಜನಾ ಆಯೋಗದ ಗುರಿಗಳಿಗೆ ಹಣಕಾಸು ಮಂತ್ರಾಲಯದ ನೀತಿ ಅಡ್ಡಿಯಾಗುತ್ತದೆ.

2 ಭಾಗಶಃ ಕ್ರಮ, ನೀತಿ ನಿರೂಪಣೆಯ ವಿಫಲತೆ

ತೀರ್ಮಾನ ಪ್ರಕ್ರಿಯೆಯ ಅಂಗಗಳು ತೆಗೆದುಕೊಳ್ಳುವ ಭಾಗಶಃ ನಿರ್ಧಾರ ಕ್ರಮಗಳಿಂದ ಅಧ್ಯಯನ/ಸಮೀಕ್ಷೆಗಳಅನುಷ್ಠಾನ ಹಲವಾರುಬಾರಿ ಕುಂಠಿತವಾಗುತ್ತದೆ. ಉದಾಹರಣೆಗೆ, ಬ್ಯಾಂಕಿಂಗ್ ಆಯೋಗದ ಶಿಫಾರಸಿನಂತೆ ಬ್ಯಾಂಕಿಂಗ್ ವ್ಯವಸ್ಥೆಯನ್ನು ಪುನರ್ರಚಿಸಿ ಕೆಲವೇ ಅಖಿಲ ಭಾರತ ಬ್ಯಾಂಕ್, ಮತ್ತು ಕೆಲವು ಪ್ರಾದೇಶಿಕ ಬ್ಯಾಂಕ್ [7ನೇ ಪುಟ ನೋಡಿ]

ಕಾಫಿ ಬೆಳೆಯ ಅಭಿವೃದ್ಧಿಯಲ್ಲಿ ಬ್ಯಾಂಕುಗಳ ಪಾತ್ರ

ಕಾಫಿ ನಮ್ಮ ದೇಶದ ಪ್ರಮುಖ ಪ್ಲಾಂಟೇಷನ್‌ಬೆಳೆಗಳಲ್ಲೊಂದು. ಇತರ ಬೆಳೆಗಳಿಗಿಂತ ವಿಭಿನ್ನವಾದ ಪ್ಲಾಂಟೇಷನ್ ಬೆಳೆಗಳಿಗೆ— ಮುಖ್ಯವಾಗಿ ಕಾಫಿಗೆ— ಬ್ಯಾಂಕಿಂಗಿನ ನೆರವೂ ವಿಶಿಷ್ಟವಾದ್ದಾಗಿರಬೇಕಾಗಿದೆ.

ಡಾ. ಬಿ. ಸಿ. ಸೂರ್ಯನಾರಾಯಣ
ಗ್ರಾಮೀಣ ಅಭಿವೃದ್ಧಿ ಅಧಿಕಾರಿ
ಭಾರತೀಯ ಸ್ಟೇಟ್ ಬ್ಯಾಂಕ್
ಸ್ಥಳೀಯ ಪ್ರಧಾನ ಕಛೇರಿ
ಬೆಂಗಳೂರು

ಕಾಫಿ ನಮ್ಮ ದೇಶದ ಪ್ರಮುಖ ಪ್ಲಾಂಟೇಷನ್ ಬೆಳೆಗಳಲ್ಲೊಂದು. ಕರ್ನಾಟಕದ ಪ್ಲಾಂಟೇಷನ್ ಬೆಳೆಗಳಲ್ಲಿ ಕಾಫಿ ಅತ್ಯಂತ ಮುಖ್ಯವಾದ್ದು. ರಾಜ್ಯದ 1985–86ನೆಯ ಸಾಲಿನ ಒಟ್ಟು ರಫ್ತಿನ (37,208 ಲಕ್ಷ ರೂ.ಗಳು) ಪ್ರತಿಶತ 34,4ರಷ್ಟು ಆದಾಯ (ರೂ. 12.802 ಲಕ್ಷ) ಕಾಫಿಯಿಂದ ದೊರಕುತ್ತದೆ. ಪ್ಲಾಂಟೇಷನ್ ಬೆಳೆಗಳ ಉತ್ಪನ್ನಗಳ ರಫ್ತಿನಿಂದ ಬರುವ ಆದಾಯದಲ್ಲಿ ಹೆಚ್ಚು ಭಾಗ ಕಾಫಿಯ ಉತ್ಪನ್ನಗಳ ರಫ್ತಿನಿಂದ ಬರುತ್ತದೆ. ನಮ್ಮ ರಾಜ್ಯದಲ್ಲಿ ಕಾಫಿಯನ್ನು 1.23,000 ಹೆಕ್ಟೇರುಗಳಲ್ಲಿ ಬೆಳೆಯಲಾಗುತ್ತಿದ್ದು ವಾರ್ಷಿಕ ಉತ್ಪನ್ನ 1,41,000 ಟನ್ನುಗಳಷ್ಟಿದೆ.

ಕಾಫಿ ಹಾಗೂ ಇತರ ಪ್ಲಾಂಟೇಷನ್ ಬೆಳೆಗಳು ಇತರ ಬೆಳೆಗಳಿಗಿಂತ ವಿಭಿನ್ನವಾಗಿವೆ. ಅನೇಕ ವಿಶಿಷ್ಟ ಗುಣಗಳು ಈ ಬೆಳೆಗಳನ್ನು ಇತರ ಬೆಳೆಗಳಿಂದ ಬೇರ್ಪಡಿಸುತ್ತವೆ.

1 ಪ್ಲಾಂಟೇಷನ್ ಬೆಳೆಗಳು ಬಹುವಾರ್ಷಿಕ ಬೆಳೆಗಳು. ಒಮ್ಮೆ ಸರಿಯಾಗಿ ಬೇರು ಬಿಟ್ಟ ನಂತರ ಬಹಳಷ್ಟು ವರ್ಷ ಇಳುವರಿಯನ್ನು ಕೊಡುತ್ತವೆ.

2 ಪ್ಲಾಂಟೇಷನ್ ಬೆಳೆಗಳ ಬೆಳವಣಿಗೆ ನಿಧಾನವಾದುದರಿಂದ ಅವು ಇಳುವರಿಗೆ ಬರಲು, ಅದರಲ್ಲೂ ಲಾಭದಾಯಕ ಇಳುವರಿಗೆ ಬರಲು ಅನೇಕ ವರ್ಷಗಳಾಗುತ್ತವೆ. ಲಾಭದಾಯಕ ಇಳುವರಿಗೆ ಬರುವವರೆಗೆ ಅವುಗಳನ್ನು ಪೋಷಿಸಲು ಹೆಚ್ಚು ಬಂಡವಾಳ ಹೂಡಬೇಕಾಗುವುದು.

3 ಪ್ಲಾಂಟೇಷನ್ ಬೆಳೆಗಳ ಪೋಷಣೆ ಹಾಗೂ ನಿರ್ವಹಣೆಗಳಲ್ಲಿ ಕೂಲಿಯಾಳುಗಳ ಅವಶ್ಯಕತೆ ಹೆಚ್ಚು. ವರ್ಷವಿಡೀ ಕೂಲಿಗಳು ಬೇಕಾಗುವುದರಿಂದ ಕೆಲಸಗಾರರನ್ನು ಖಾಯಂ ಆಗಿ ನೇಮಿಸಿಕೊಳ್ಳುವುದು ಪದ್ಧತಿಯಾಗಿದೆ. ಈ ರೀತಿ ನೇಮಿಸಿಕೊಂಡ ಕೂಲಿಯಾಳುಗಳ ವಾಸಕ್ಕಾಗಿ ಮನೆ,ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳು ಕೂಡ ಈ ಬೆಳೆಗಳ ನಿರ್ವಹಣೆಯ ಖರ್ಚಾಗಿ ಸೇರುತ್ತವೆ.

4 ಅಧಿಕ ವಿಸ್ತೀರ್ಣದ ಪ್ರದೇಶದಲ್ಲಿ ಪ್ಲಾಂಟೇಷನ್ ಬೆಳೆಗಳನ್ನು ಸಾಮಾನ್ಯವಾಗಿ ಬೆಳೆಯುವುದರಿಂದ ಅವುಗಳ ಸರಿಯಾದ ನಿರ್ವಹಣೆಗೆ, ಗಿಡಗಳಿಗೆ ಬೇಕಾಗುವ ಗೊಬ್ಬರ, ಕ್ರಿಮಿನಾಶಕ ವಸ್ತುಗಳಂತಹ ಪದಾರ್ಥಗಳನ್ನು ಸಾಗಿಸಲು ಹಾಗೂ ಉತ್ಪನ್ನಗಳನ್ನು ಸಾಗಿಸಲು ಸರಿಯಾದ ರಸ್ತೆಗಳ ನಿರ್ಮಾಣ ಅತ್ಯಗತ್ಯ. ಪ್ಲಾಂಟೇಷನ್‌ನ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಸಂಚರಿಸಲು ವಾಹನಗಳ ಅಗತ್ಯವಿರುತ್ತದೆ. ಕೂಲಿಗಳು ಪ್ಲಾಂಟೇಷನ್‌ನ ವಿವಿಧ ಭಾಗಗಳಲ್ಲಿ ಕೆಲಸ ಮಾಡುವುದರಿಂದ ಅವರ ಕೆಲಸದ ಮೇಲ್ವಿಚಾರಣೆಗೆ ಸಿಬ್ಬಂದಿಯ ನೇಮಕ ಮಾಡಿಕೊಳ್ಳಬೇಕಾಗುತ್ತದೆ. ಕೂಲಿಗಳ ಹಾಗೂ ಇತರ ನೌಕರರ ಸಂಬಳದ ಲೆಕ್ಕಾಚಾರ ಹಾಗೂ ಬಟವಾಡೆಗೆ ನೆರವಾಗಲು ಕಛೇರಿಯನ್ನು ಸ್ಥಾಪಿಸಬೇಕಾಗುತ್ತದೆ.

5 ಪ್ಲಾಂಟೇಷನ್ ಬೆಳೆಗಳ ಉತ್ಪನ್ನಗಳನ್ನು ಸಾಮಾನ್ಯವಾಗಿ ಸಂಸ್ಕರಣ ಮಾಡದೆ ಮಾರಾಟ ಮಾಡಲು ಆಗುವುದಿಲ್ಲ. ಸಂಸ್ಕರಣಕ್ಕೆ ಬೇಕಾಗುವ ಯಂತ್ರೋಪಕರಣಗಳು ಅನೇಕ.

ಈ ರೀತಿ ಇತರ ಬೆಳೆಗಳಿಗಿಂತ ಅನೇಕ ರೀತಿಯಲ್ಲಿ ವಿಭಿನ್ನವಾಗಿರುವ ಪ್ಲಾಂಟೇಷನ್ ಬೆಳೆಗಳ ಅಭಿವೃದ್ಧಿಯಲ್ಲಿ ಬ್ಯಾಂಕುಗಳ ಪಾತ್ರವೂ ವಿಭಿನ್ನವಾಗಿರುವುದು.

ಕಾಫಿ ಬೆಳೆಯ ಅಭಿವೃದ್ಧಿಯಲ್ಲಿ ಪ್ರಥಮವಾಗಿ ಕಾಫಿ ಮಂಡಳಿಯ (Coffee Board) ಪಾತ್ರವನ್ನು ವಿವರಿಸುವುದು ಉಚಿತ.

ಕಾಫಿ ಮಂಡಳಿ

ಕಾಫಿ ಮಂಡಳಿ ಅಧಿನಿಯಮದನ್ವಯ ಸ್ಥಾಪಿತವಾಗಿರುವ ಕಾಫಿ ಮಂಡಳಿಯ ಪ್ರಧಾನ ಕಛೇರಿ ಬೆಂಗಳೂರಿನಲ್ಲಿದೆ. ಅಧಿನಿಯಮದ ಪ್ರಕಾರ ಭಾರತದಲ್ಲಿ ಬೆಳೆಯುವ ಎಲ್ಲ ಕಾಫಿಯ ಉತ್ಪನ್ನಗಳ ಸಂಸ್ಕರಣೆ ಹಾಗೂ ಮಾರಾಟದ ಸ್ವಾಮ್ಯ ಕಾಫಿ ಮಂಡಳಿಗೆ ಸೇರಿದೆ.

ಕಾಫಿ ಮಂಡಳಿ ಕಾಫಿ ಬೆಳೆಗಾರರ ಅಭ್ಯುದಯಕ್ಕಾಗಿ ಅನೇಕ ಯೋಜನೆಗಳನ್ನು ಹಮ್ಮಿಕೊಂಡಿದೆ. ಹೊಸ ಕಾಫಿ ತೋಟ ಸ್ಥಾಪಿಸಲು ಸಾಲ, ಕಾಫಿ ತೋಟದ ಪುನರುಜ್ಜೀವನಕ್ಕಾಗಿ ಸಾಲ, ಬೆಳೆ ಸಾಲ, ಯಂತ್ರೋಪಕರಣಗಳನ್ನು ಖರೀದಿಸಲು ಸಾಲ, ಕಾಫಿಯನ್ನು ಸಂಸ್ಕರಣಮಾಡಲು ಬೇಕಾಗುವ ಅಗತ್ಯತೆಗಳನ್ನು ಪೂರೈಸಲು (ಕಾಫಿ ಬೀಜ ಒಣಗಿಸಲು ಸೌಲಭ್ಯ, ಕಾಫಿ ಬೀಜದ ಹೊರಪೊರೆಯನ್ನು ಒಡೆಯಲು ಸೌಲಭ್ಯ (Pulping unit) ಇತ್ಯಾದಿ) ಸಾಲ—ಈ ರೀತಿಯ ಸಾಲ ಸೌಲಭ್ಯಗಳ ಪೂರೈಕೆಯ ಜೊತೆಗೆ ಬೆಳೆಗಾರರಿಗೆ ಅಗತ್ಯವಾಗುವ ತಾಂತ್ರಿಕ ಸಲಹೆ ಕೊಡುವಲ್ಲಿ ಕಾಫಿ ಮಂಡಳಿ ಪ್ರಮುಖ ಪಾತ್ರ ವಹಿಸುತ್ತದೆ. ಉತ್ಪಾದನೆಯಾದ ಕಾಫಿ ಬೀಜದ ಮಾರಾಟ ಸಂಪೂರ್ಣವಾಗಿ ಕಾಫಿ ಮಂಡಳಿಯ ಕೈಯಲ್ಲಿದೆ. ಬೆಳೆಗಾರರು ಉತ್ಪಾದನೆಯನ್ನು ಕಾಫಿ ಮಂಡಳಿ ನಿಗದಿಪಡಿಸಿರುವ ಶೇಖರಣಾ ಪ್ರತಿನಿಧಿಗೆ (Pooling agent) ಸರಬರಾಜು ಮಾಡಬೇಕು. ನಿಗದಿಪಡಿಸಿದ ಬೆಲೆಯನ್ನು ಕಾಫಿ ಮಂಡಳಿ ಬೆಳೆಗಾರರಿಗೆ ಈ ಶೇಖರಣಾ ಪ್ರತಿನಿಧಿಯ ಮೂಲಕವೇ ತಲುಪಿಸುವುದು. ಇದಲ್ಲದೆ ಕಾಫಿ ಬೆಳೆಯನ್ನು ಅಸಾಂಪ್ರದಾಯಿಕ (Non-traditional) ಪ್ರದೇಶಗಳಲ್ಲಿ ಬೆಳೆಯಲು ರೈತರಿಗೆ ಪ್ರೋತ್ಸಾಹ ಕೊಡಲು ಕಾಫಿ ಮಂಡಳಿ ಕಾರ್ಯಕ್ರಮವನ್ನು ಹೊಂದಿದೆ. ಆದರೆ ದೇಶದ ಎಲ್ಲ ಕಾಫಿ ಬೆಳೆಗಾರರ ಸಾಲಸೌಲಭ್ಯಗಳ ಅಗತ್ಯವನ್ನು ಪೂರೈಸುವುದು ಕಠಿಣವಾದುದರಿಂದ ವಾಣಿಜ್ಯ ಬ್ಯಾಂಕುಗಳು ರೈತರಿಗೆ ಸಾಲ ಒದಗಿಸಲು ಕಾಫಿ ಮಂಡಳಿ ಅನುವುಮಾಡಿಕೊಟ್ಟಿದೆ. ವಾಣಿಜ್ಯ ಬ್ಯಾಂಕುಗಳಿಂದ ರೈತರಿಗೆ ದೊರೆಯುವ ಸಾಲದ ಮೇಲಿನ ಬಡ್ಡಿಯ ಹೊರೆಯನ್ನು ಇಳಿಸಲು ಕಾಫಿ ಮಂಡಳಿ ಬಡ್ಡಿ ಸಹಾಯಧನ (Interest Subsidy) ಯೋಜನೆಯನ್ನು ಜಾರಿಗೆ ತಂದಿದೆ.

ವಾಣಿಜ್ಯ ಬ್ಯಾಂಕುಗಳು

ವಾಣಿಜ್ಯ ಬ್ಯಾಂಕುಗಳು ಕಾಫಿ ಬೆಳೆಯ ಅಭಿವೃದ್ಧಿಯಲ್ಲಿ ಅನೇಕ ರೀತಿಯ ಪಾತ್ರವನ್ನು ವಹಿಸುತ್ತಿವೆ.

1 ಸಾಲಗಳ ಸೌಲಭ್ಯ

ವಾಣಿಜ್ಯ ಬ್ಯಾಂಕುಗಳು ಕಾಫಿ ಬೆಳವಣಿಗೆಗೆ ಅನೇಕ ರೀತಿಯ ಸೌಲಭ್ಯಗಳನ್ನು ಒದಗಿಸುತ್ತವೆ :

1 ಹೊಸ ಪ್ಲಾಂಟೇಷನ್ ಸ್ಥಾಪಿಸಲು,
2 ಹಳೆಯ ಪ್ಲಾಂಟೇಷನ್ ಪುನರುಜ್ಜೀವನಕ್ಕಾಗಿ,
3 ಪ್ಲಾಂಟೇಷನ್ ನಿರ್ವಹಣೆಗಾಗಿ,
4 ನಶಿಸಿಹೋದ ಪ್ಲಾಂಟೇಷನ್ ಮತ್ತೆ ಸ್ಥಾಪಿಸಲು.

ಕಾಫಿ ಪ್ಲಾಂಟೇಷನ್ ಸ್ಥಾಪಿಸಲು ಹಾಗೂ ನಿರ್ವಹಣೆಗೆ ಅನೇಕ ರೀತಿಯ ಬೆಳವಣಿಗೆಗಳು ಆವಶ್ಯಕ, ಕಾಡನ್ನು ಕಡಿಯಲು, ಭೂಮಿಯನ್ನು ಹದಗೊಳಿಸಲು, ಸಸಿಗಳನ್ನು ತಯಾರಿಸಲು, ನೆರಳಿನ ಮರಗಳ ಸಸಿಗಳನ್ನು ನಾಟಿಮಾಡಲು, ಕಾಫಿ ಸಸಿಗಳನ್ನು ನಾಟಿಮಾಡಲು, ಸಹಾಯಕ ಗೂಟಗಳನ್ನು ನೆಡಲು, ರಸಗೊಬ್ಬರಗಳನ್ನು ಪೂರೈಸಲು, ತಂತಿ ಬೇಲಿಯನ್ನು ಹಾಕಲು, ಗಿಡ ಸವರಲು (Pruning) ಹೊಸ ದಾರಿಗಳನ್ನು ನಿರ್ಮಿಸಲು, ಕೆಲಸಗಾರರ ಮನೆಗಳನ್ನು ಕಟ್ಟಿಸಲು, ನೀರಾವರಿ ಯೋಜನೆಗಾಗಿ, ವಾಹನ, ಯಂತ್ರೋಪಕರಣಗಳ ಖರೀದಿಗಾಗಿ— ಈ ರೀತಿಯಾಗಿ ಹಲವಾರು ಬೆಳವಣಿಗೆಗಳಿಗೆ ಸೌಲಭ್ಯಗಳನ್ನು ವಾಣಿಜ್ಯ ಬ್ಯಾಂಕುಗಳು ಒದಗಿಸುತ್ತವೆ.

2 ವಿಶೇಷ ಸಾಲ ಸೌಲಭ್ಯ

ಕಾಫಿ ಬೆಳೆಗೆ ಹೂವು ಅರಳುವ ಸಮಯದಲ್ಲಿ ಮಳೆ ಅತಿ ಆವಶ್ಯಕ. ಹಾಗೆಯೇ, ಹೂವು ಕಾಯಾಗಿ ಪರಿವರ್ತಿತಗೊಳ್ಳುವ ಸಮಯದಲ್ಲೂ ಮಳೆ ಬರಲೇಬೇಕು. ಇವೆರಡರಲ್ಲಿ ಯಾವ ಮಳೆ ತಪ್ಪಿದರೂ ಇಳುವರಿ ಕಡಿಮೆಯಾಗುತ್ತದೆ. ಇತ್ತೀಚಿನ ವರ್ಷಗಳಲ್ಲಿ ಮಳೆ ತರುವ ಮಾರುತಗಳ ಅನಿಶ್ಚಯತೆಯಿಂದ ಕಾಫಿ ಬೆಳೆಗೆ ಸಾಕಷ್ಟು ಹಾನಿಯುಂಟಾಗಿದೆ. ಕಾಫಿ ವಾಣಿಜ್ಯ ಬೆಳೆಯಾದುದರಿಂದ ಅದರ

[6ನೇ ಪುಟದಿಂದ ಮುಂದುವರಿದುದು]

ಸಂಶೋಧನೆ ಮತ್ತು ಬ್ಯಾಂಕಿಂಗ್

ಗಳನ್ನು, ಅಂದು, ಎಪ್ಪತ್ತರ ದಶಕದಲ್ಲೇ, ಸುಲಭಸಾಧ್ಯವಾಗಿದ್ದಾಗ, ಕಾರ್ಯಗತಗೊಳಿಸಿ ಇಂದಿನ ಗೊಂದಲ ನಿವಾರಿಸಬಹುದಿತ್ತು.

3 ನೌಕರಶಾಹಿ : ಪ್ರತಿಷ್ಠೆಯ ಪ್ರಶ್ನೆ

ನೌಕರಶಾಹಿಯ ವಿಳಂಬ, ಇಬ್ಬರು ಉನ್ನತಸ್ತರದ ಮುಖ್ಯಸ್ಥರ ಪ್ರತಿಷ್ಠೆಯ ಪ್ರಶ್ನೆ ಮುಂತಾದ ಅಂಶಗಳು ಕೂಡ ಅಧ್ಯಯನದ ಅನುಷ್ಠಾನದಲ್ಲಿ ಅಡ್ಡಿಯಾಗಬಹುದು. ಇತ್ತೀಚೆಗೆ ವಾಘುಲ್ ಸಮಿತಿ ವರದಿಯಲ್ಲಿ ಹಣಪೇಟೆಯ ಅಭಿವೃದ್ಧಿಯನ್ನು ಕುರಿತಂತೆ ರಚನಾತ್ಮಕ ಹಾಗೂ ಕಾಲಬದ್ಧ ಯೋಜನೆಯೊಂದನ್ನು ನೀಡಲಾಗಿತ್ತು. ಅರ್ಥಖಾತೆಯಲ್ಲಿನ ಇಬ್ಬರು ಉನ್ನತ ಅಧಿಕಾರಿಗಳ ನಡುವಿನ ಭಿನ್ನಾಭಿಪ್ರಾಯದಿಂದ ವರದಿಯ ಅನುಷ್ಠಾನ ವಿಳಂಬವಾಗುತ್ತಿದೆ ಎಂಬ ಅಂಶವನ್ನು ಪತ್ರಿಕೆಯೊಂದು ತಿಳಿಸಿದೆ.

ಬ್ಯಾಂಕಿಂಗ್ ಸಂಶೋಧನೆಗೆ ಬೆಂಬಲ

ಇಂದು ಹಲವಾರು ಸಂಸ್ಥೆಗಳು ಸಂಶೋಧನೆಗೆ ಬೆಂಬಲ ನೀಡುತ್ತಿವೆ. ಈ ದಿಸೆಯಲ್ಲಿ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಬ್ಯಾಂಕ್ ಮ್ಯಾನೇಜ್‌ಮೆಂಟ್ (ಎನ್ ಐ ಬಿ ಎಂ) ಸ್ಥಾಪನೆಯಾಗಿದೆ.

ಭಾರತೀಯ ಬ್ಯಾಂಕುಗಳ ಸಂಘ ಬ್ಯಾಂಕಿಂಗ್ ಸಂಶೋಧನೆಗೆ ಸಹಾಯ ಮಾಡುವ ಅಲ್ಡಿಂಗ್‌ಟನ್ ಸಂಶೋಧನ ಶಿಷ್ಯವೇತನ ನೀಡುತ್ತಿದೆ.

ವಿವಿಧ ವಿಶ್ವವಿದ್ಯಾಲಯಗಳಲ್ಲಿ ಬ್ಯಾಂಕಿಂಗ್ ಪೀಠದ ಸ್ಥಾಪನೆ, ಬೇರೆ ವ್ಯವಸ್ಥಾಪನ ಸಂಸ್ಥೆಗಳು ನಡೆಸುವ ಬ್ಯಾಂಕಿಂಗ್ ಅಧ್ಯಯನಕ್ಕೆ ಬೆಂಬಲ ಮುಂತಾದ ರೂಪದಲ್ಲೂ ಸಂಶೋಧನೆ ಉತ್ತೇಜನ ಪಡೆಯುತ್ತಿದೆ.

ಇದಲ್ಲದೆ ನಿಯತಕಾಲಿಕೆಗಳಲ್ಲಿ ಪ್ರಕಟವಾಗುವ ಲೇಖನಗಳು ಅವು ಸುಸಂಬದ್ಧ ಸಂಶೋಧನೆಯ ಫಲವಲ್ಲವಾದರೂ, ಹೊಸ ವಿಚಾರಗಳ ಮೇಲೆ ಬೆಳಕು ಚೆಲ್ಲುವ ಯತ್ನವಾಗಿ ಗಮನ ಸೆಳೆಯುತ್ತವೆ.

ಆಯೋಜನೆ, ಬ್ಯಾಂಕಿಂಗ್ ವ್ಯವಸ್ಥೆ, ಹಣದುಬ್ಬರ ಮುಂತಾದ ವಿಶಾಲ ತಳಹದಿಯ ವಿಷಯಗಳೇ ಅಲ್ಲದೆ, ಸಮಗ್ರ ಗ್ರಾಮೀಣ ಅಭಿವೃದ್ಧಿಯೋಜನೆ ಮುಂತಾದ ಸೂಕ್ಷ್ಮ ವಿಷಯಗಳನ್ನು ಕುರಿತಂತೆ ವಿಶ್ವವಿದ್ಯಾಲಯಗಳಿಂದ ಪ್ರೌಢಪ್ರಬಂಧಗಳು ಹೊರಬರುತ್ತಿವೆ.

ಸಂಶೋಧನೆಯ ಭವಿಷ್ಯ

ಇಷ್ಟೆಲ್ಲ ಅಧ್ಯಯನ, ಸಂಶೋಧನೆ, ವಿಶ್ಲೇಷಣೆಗಳು ಬ್ಯಾಂಕಿಂಗ್ ವಲಯದಲ್ಲಿ ನಡೆಯುತ್ತಿದ್ದರೂ, ವಿಶಾಲವಾದ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸಂಶೋಧಿಸಬೇಕಾದ ಇನ್ನೂ ಹಲವಾರು ವಿಷಯಗಳಿವೆ. ರೋಗಗ್ರಸ್ತ ಉದ್ಯಮಗಳು, ವಂಚನೆ ಪ್ರಕರಣಗಳು, ಸ್ವಯಂಚಲೀಕರಣ, ಮಾನವ ಸಂಬಂಧಗಳು, ಮುಂತಾದ ಕ್ಷೇತ್ರಗಳಲ್ಲಿ ಉಪಯುಕ್ತ ಅಧ್ಯಯನ ನಡೆಯಬೇಕಾಗಿದೆ. ಬ್ಯಾಂಕಿಂಗ್ ವಲಯದಲ್ಲಿ ಮೂಲಭೂತವಾಗಿ ಸಂಶೋಧನೆಯ ಸ್ವರೂಪವೇ ಅನೌಪಚಾರಿಕ ಎಂಬುದನ್ನು ಒಪ್ಪಿಕೊಂಡರೂ, ಭವಿಷ್ಯದಲ್ಲಿ ಬ್ಯಾಂಕಿಂಗ್‌ಕ್ಷೇತ್ರದಲ್ಲಿ ಸಂಶೋಧಿಸಲು ಅನಂತ ಅವಕಾಶಗಳಿವೆ ಎಂಬುದರಲ್ಲಿ ಎರಡು ಮಾತಿಲ್ಲ.

★

ಇಳುವರಿ ಕಡಿಮೆಯಾಗದಂತೆ ನೋಡಿಕೊಳ್ಳಲು ಮಳೆ ಬಾರದೆ ಇದ್ದಾಗ 'ಕೃತಕ ಮಳೆ' ಸೃಷ್ಟಿಸಲು ತುಂತುರು ನೀರಾವರಿ (Sprinkler irrigation) ಸೌಲಭ್ಯವನ್ನು ಬಳಸಬೇಕಾಗುವುದು. ಹೆಚ್ಚು ಬಂಡವಾಳ ಹಾಕಬೇಕಾಗಿರುವ ಈ ಸೌಲಭ್ಯವನ್ನು ರೈತರಿಗೆ ದೊರಕಿಸುವಲ್ಲಿ ಬ್ಯಾಂಕುಗಳು ಮಹತ್ವದ ಪಾತ್ರವಹಿಸಿವೆ.

ತಾಂತ್ರಿಕ ಸಲಹೆ

ಕಾಫಿಯಂತಹ ದೀರ್ಘಾವಧಿ ಬೆಳೆಗಳಲ್ಲಿ ಮೊದಲ ಕೆಲವು ವರ್ಷ ಬೆಳೆಯನ್ನು ವಿಶೇಷ ಗಮನವಿಟ್ಟು ಬೆಳೆಸಬೇಕು. ಯಾವುದೇ ಅಂಶದ ಕೊರತೆ ಉಂಟಾದರೂ ಅದರ ಪರಿಣಾಮ ಅನೇಕ ವರ್ಷಗಳ ವರೆಗೆ ಇರುತ್ತದೆ. ಕಾಫಿ ಬೆಳೆಗಾರರಿಗೆ ಸರಿಯಾದ ತಾಂತ್ರಿಕ ಸಲಹೆ ಕಾಲಕಾಲಕ್ಕೆ ಒದಗಿಸುವುದು ಅತ್ಯಾವಶ್ಯಕ. ವಾಣಿಜ್ಯ ಬ್ಯಾಂಕುಗಳು ಈ ವಿಷಯದಲ್ಲಿ ಕಾಫಿ ಮಂಡಳಿಗೆ ಪೂರಕವಾಗಿ ಕೆಲಸಮಾಡುತ್ತಿವೆ. ಬ್ಯಾಂಕುಗಳಲ್ಲಿನ ಶಾಖೆಗಳಲ್ಲಿ ನೇಮಕಗೊಂಡ ಕೃಷಿ ಅಭಿವೃದ್ಧಿ/ಗ್ರಾಮೀಣ ಅಭಿವೃದ್ಧಿ ಅಧಿಕಾರಿಗಳು ಕಾಲಕಾಲಕ್ಕೆ ಬೆಳೆಗಾರರನ್ನು ಭೇಟಿ ಮಾಡಿ ಅಗತ್ಯವಾದ ತಾಂತ್ರಿಕ ಸಲಹೆಗಳನ್ನು ಕೊಟ್ಟು ಉತ್ತಮ ಬೆಳೆ ಪಡೆಯುವುದರಲ್ಲಿ ರೈತರಿಗೆ ಸಹಕಾರಿಯಾಗಿದ್ದಾರೆ.

4 ಸಂಸ್ಕರಣ ಘಟಕಗಳಿಗೆ ಸಹಾಯ

ಇದಲ್ಲದೆ ಬೆಳೆಗಾರರ ಮಾಹಿತಿಗಾಗಿ ವಿಶೇಷವಾದ ಕಮ್ಮಟಗಳು, ಸಂಕಿರಣಗಳನ್ನು ಏರ್ಪಡಿಸಲು ಬ್ಯಾಂಕುಗಳು ಮುಂದೆ ಬಂದಿವೆ.

ಕಾಫಿ ಬೆಳೆಗಾರರು ಉತ್ಪನ್ನವನ್ನು ಶೇಖರಣಾ ಪ್ರತಿನಿಧಿಗೆ ತಲುಪಿಸಿದ ನಂತರ ಅದು ಸಂಸ್ಕರಣೆ ಮಾಡಲ್ಪಡುತ್ತದೆ. ಕಾಫಿ ಬೆಳೆಯ ಅಭಿವೃದ್ಧಿಗೆ ಕೊಡುವ ಸಾಲದಷ್ಟೇ ಈ ಸಂಸ್ಕರಣಾ ಘಟಕಗಳಿಗೆ ಕೊಡುವ ಸಾಲವೂ ಅವಶ್ಯಕವಾಗಿರುತ್ತದೆ. ಈ ಸಾಲದ ಸೌಲಭ್ಯಗಳನ್ನು ಬ್ಯಾಂಕುಗಳು ಯಶಸ್ವಿಯಾಗಿ ನಿರ್ವಹಿಸಿವೆ.

ಕಾಫಿ ಮಂಡಳಿಗೆ ಸಾಲ

ಕಾಫಿ ಉತ್ಪನ್ನಗಳ ಮಾರಾಟದ ಪೂರ್ತಿ ಹೊಣೆಯನ್ನು ಕಾಫಿ ಮಂಡಳಿ ವಹಿಸಿಕೊಂಡಿರುವುದರಿಂದ ಬೆಳೆಗಾರರು ಶೇಖರಿಸಿದ ಬೆಳೆಗೆ ಯೋಗ್ಯ ಬೆಲೆಯನ್ನು ಕಾಲಕಾಲಕ್ಕೆ ಪಾವತಿಮಾಡುವಲ್ಲಿ ಬೇಕಾಗುವ ಹಣ ಅತಿ ಹೆಚ್ಚು. ಇದಕ್ಕಾಗಿ ಕಾಫಿ ಮಂಡಳಿ ಹೊರಗಡೆಯಿಂದ ಸಾಲ ಎತ್ತಬೇಕಾಗುವುದು. ಈ ಸಾಲದ ಸೌಲಭ್ಯವನ್ನು ವಾಣಿಜ್ಯ ಬ್ಯಾಂಕುಗಳು ಒದಗಿಸುತ್ತವೆ.

ಸಣ್ಣ ಪ್ಲಾಂಟೇಷನ್‌ಗಳಿಗೆ ವಿಶೇಷ ರಿಯಾಯಿತಿ

ಐದು ಎಕರೆ ವಿಸ್ತೀರ್ಣಕ್ಕಿಂತ ಕಡಿಮೆಯಿರುವ ಸಣ್ಣ ಪ್ಲಾಂಟೇಷನ್‌ಗಳಿಗೆ ಭಾರತೀಯ ರಿಸರ್ವ್ ಬ್ಯಾಂಕ್ ಆದೇಶದ ಮೇರೆಗೆ ವಾಣಿಜ್ಯಬ್ಯಾಂಕುಗಳು ಆದ್ಯತಾ ವಲಯಗಳಿಗೆ (Priority Sector) ದೊರಕುವ ರಿಯಾಯಿತಿಗಳನ್ನು ಕೊಟ್ಟಿವೆ. ಈ ರಿಯಾಯಿತಿಗಳು ಐದು ಎಕರೆಗೆ ಮೇಲ್ಪಟ್ಟ ಪ್ಲಾಂಟೇಷನ್ನುಗಳಿಗೆ ದೊರೆಯುವುದಿಲ್ಲ.

ರಾಷ್ಟ್ರೀಯ ಬ್ಯಾಂಕಿನ ಸಹಕಾರ

ಕಾಫಿ ಬೆಳೆ ಅಭಿವೃದ್ಧಿಯಲ್ಲಿ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (National Bank for Agriculture and Rural Development: NABARD) ಪ್ರಮುಖ ಪಾತ್ರ ವಹಿಸಿದೆ. ವಾಣಿಜ್ಯ ಬ್ಯಾಂಕುಗಳು, ಗ್ರಾಮೀಣ ಬ್ಯಾಂಕುಗಳು ಹಾಗೂ ಸಹಕಾರ ಕ್ಷೇತ್ರದ ಬ್ಯಾಂಕುಗಳು ನೀಡುವ ಸಾಲಗಳಿಗೆ ಪುನರ್ಧನ (refinance) ನೀಡುವುದಲ್ಲದೆ ಕ್ಷೇತ್ರ ಅಭಿವೃದ್ಧಿ ಯೋಜನೆಗಳನ್ನು (Area Development Projects) ರೂಪಿಸಿ ಸಮಗ್ರ ಅಭಿವೃದ್ಧಿಗೆ ಬ್ಯಾಂಕುಗಳು ಸಹಾಯಮಾಡುವಂತೆ ಅನುಕೂಲ ಮಾಡಿಕೊಟ್ಟಿದೆ.

ಬಡ್ಡಿ ಸಹಾಯಧನ

ವಾಣಿಜ್ಯ ಬ್ಯಾಂಕುಗಳು ನೀಡುವ ಸಾಲದ ಮೇಲಿನ ಬಡ್ಡಿಯ ಹೊರೆಯನ್ನು ಕಡಿಮೆಗೊಳಿಸಲು ಕಾಫಿ ಮಂಡಳಿ ಬಡ್ಡಿ ಸಹಾಯಧನದ ಯೋಜನೆ ರೂಪಿಸಿದೆ. ಈ ಸಹಾಯಧನ 25 ಎಕರೆ ಪ್ರದೇಶದ ವರೆಗಿನ ಪ್ಲಾಂಟೇಷನ್‌ಗಳಿಗೆ ಮಾತ್ರ ಅನ್ವಯಿಸುವುದು. ಅಲ್ಪಾವಧಿ ಸಾಲಗಳ ಬಡ್ಡಿಯಲ್ಲಿ ಪ್ರತಿಶತ 2½ ಹಾಗೂ ಅವಧಿ ಸಾಲಗಳ ಬಡ್ಡಿಯಲ್ಲಿ ಪ್ರತಿಶತ ಒಂದರಷ್ಟು ಸಹಾಯಧನವನ್ನು ಕಾಫಿ ಮಂಡಳಿ ಕೊಡುತ್ತಿದೆ. ಈ ಬಡ್ಡಿ ಸಹಾಯಧನವನ್ನು ಬೆಳೆಗಾರರಿಗೆ ದೊರಕಿಸಲು ಬ್ಯಾಂಕುಗಳು ಸಹಕಾರ ನೀಡುತ್ತಿವೆ.

ಹೀಗೆ, ಕರ್ನಾಟಕಕ್ಕೆ ಹಾಗೂ ಭಾರತಕ್ಕೆ ಅತ್ಯ ಮೂಲ್ಯವಾದ ವಿದೇಶಿ ವಿನಿಮಯವನ್ನು ದೊರಕಿಸುವ ಪ್ಲಾಂಟೇಷನ್ ಬೆಳೆಗಳಲ್ಲಿ ಮುಖ್ಯವಾದ ಕಾಫಿ ಬೆಳೆಯ ಅಭಿವೃದ್ಧಿಯಲ್ಲಿ ಬ್ಯಾಂಕುಗಳು ಪ್ರಮುಖ ಪಾತ್ರ ವಹಿಸಿವೆ. ★

ಗ್ರಾಮೀಣ ಬ್ಯಾಂಕಿಂಗ್: ಸೇವಾಕ್ಷೇತ್ರ ಯೋಜನೆ

ಗ್ರಾಮೀಣ ಅಭಿವೃದ್ಧಿಗಾಗಿ 1989ರ ಜನವರಿಯಿಂದ ಜಾರಿಗೆ ಬರುವ ಹೊಸ ಯೋಜನೆ ಒಂದರ ರೂಪರೇಷೆ.

ಎಂ. ಎಸ್. ಪ್ರಭಾಕರ
ಶಾಖಾ ವ್ಯವಸ್ಥಾಪಕ
ಮೈಸೂರು ಬ್ಯಾಂಕು
ಬುಕ್ಕಾಪಟ್ಟಣ

1969ರಲ್ಲಿ ರಾಷ್ಟ್ರೀಕರಣಗೊಂಡ ಬ್ಯಾಂಕಿಂಗ್ ಉದ್ಯಮ ಗ್ರಾಮೀಣ ಅಭಿವೃದ್ಧಿಯ ಸಲುವಾಗಿ ಹಲವಾರು ಯೋಜನೆಗಳನ್ನು ರೂಪಿಸಿದೆ. 1989ರ ಜನವರಿಯಿಂದ ಆರಂಭಗೊಳ್ಳುವ, ಬ್ಯಾಂಕ್ ಶಾಖೆಗಳು ನಿರ್ದಿಷ್ಟ ಸೇವಾಕ್ಷೇತ್ರದಲ್ಲಿ ತಮ್ಮ ವ್ಯವಹಾರವನ್ನು ತೊಡಗಿಸುವ ವಿನೂತನ ಯೋಜನೆ ನಿಜಕ್ಕೂ ಮಹತ್ವದ್ದೆನಿಸಿದೆ. ಇಂತಹ ಅವಕಾಶ ಮೊದಲಿನಿಂದಲೂ ಇರಲಿಲ್ಲವೇ ಎಂದು ಪ್ರಶ್ನಿಸಿದಲ್ಲಿ, ಇತ್ತು; ಆದರೆ ನಿರ್ದಿಷ್ಟ ವ್ಯವಸ್ಥೆಯನ್ನು ರಾಷ್ಟ್ರಮಟ್ಟದಲ್ಲಿ ರೂಪಿಸಿರಲಿಲ್ಲವೆಂದು ಗುರುತಿಸಬೇಕಾಗಿದೆ. ಈಗ ಆರಂಭಗೊಳ್ಳುವ ಯೋಜನೆ ರಾಷ್ಟ್ರವ್ಯಾಪ್ತಿಯುಳ್ಳದ್ದು. ಇದನ್ನು ವ್ಯವಸ್ಥಿತವಾಗಿ ಅಣಿಗೊಳಿಸುವ ಕಾರ್ಯಭಾರ ಗ್ರಾಮೀಣ ಬ್ಯಾಂಕುಗಳೂ ಸೇರಿದಂತೆ ಎಲ್ಲ ವಾಣಿಜ್ಯ ಬ್ಯಾಂಕುಗಳ ಮೇಲಿದೆ. ಈ ದಿಸೆಯಲ್ಲಿ ಬ್ಯಾಂಕಿಂಗ್ ಕ್ಷೇತ್ರ ಕಾರ್ಯಪ್ರವೃತ್ತವಾಗಲಿದೆ.

ಸ್ವರೂಪ

1988ರ ಜನವರಿಯಲ್ಲಿ, ಭಾರತೀಯ ರಿಸರ್ವ್ ಬ್ಯಾಂಕ್ ಗ್ರಾಮೀಣ ಅಭಿವೃದ್ಧಿಗೆ ಸಂಬಂಧಿಸಿದಂತೆ ಮುಂಬಯಿಯಲ್ಲಿ ವಿಚಾರಸಂಕಿರಣವೊಂದನ್ನು ಏರ್ಪಡಿಸಿತ್ತು. ಮುಂಬರುವ ವರ್ಷಗಳಲ್ಲಿ ಹೂಡುವ

ಗ್ರಾಮೀಣ ಸಾಲಗಳ ಉತ್ಪಾದಕತೆಯನ್ನು ಕುರಿತು ಈ ಸಂಕಿರಣದಲ್ಲಿ ಗಮನಾರ್ಹವಾಗಿ ಚರ್ಚಿಸಲಾಯಿತು. ರಿಸರ್ವ್ ಬ್ಯಾಂಕಿನ ಅಧ್ಯಕ್ಷರೂ, ಸಾರ್ವಜನಿಕ ವಲಯದ ಬ್ಯಾಂಕುಗಳ ಅಧ್ಯಕ್ಷರುಗಳೂ, ನಿರ್ದೇಶಕ ವ್ಯವಸ್ಥಾಪಕರೂ, ಕೇಂದ್ರದ ಹಿರಿಯ ಅಧಿಕಾರಿಗಳೂ, ವಿತ್ತಸಚಿವರೂ, ರಾಜ್ಯ ಸಚಿವರೂ, ಈ ಚರ್ಚೆಯಲ್ಲಿ ಪಾಲ್ಗೊಂಡಿದ್ದರು. ಗ್ರಾಮೀಣ ಸಾಲಗಳ ಸಮರ್ಥ ವಿತರಣೆ, ನಿರ್ವಹಣೆ, ಉತ್ಪಾದಕತೆ, ಆರ್ಥಿಕ ವರಮಾನದ ಹೆಚ್ಚಳ ಇತ್ಯಾದಿ ಅಂಶಗಳನ್ನೊಳಗೊಂಡಂತೆ ವ್ಯಾಪಕವಾಗಿ ಚರ್ಚಿಸಲಾಯಿತು. ಗ್ರಾಮೀಣ ಪ್ರದೇಶಗಳನ್ನು ಪ್ರಧಾನವಾಗಿ ಉಳ್ಳ ಶಾಖೆಗಳಿಗೆ ನಿರ್ದಿಷ್ಟ ಸೇವಾಕ್ಷೇತ್ರವನ್ನು ವಿಂಗಡಿಸಿ, ಆಯಾ ಕ್ಷೇತ್ರದ ಸರ್ವಾಂಗೀಣ ಪ್ರಗತಿಗೆ, ಗ್ರಾಮೀಣ ಸಾಲಗಳ ಹೆಚ್ಚು ಉತ್ಪಾದಕತೆಗೆ ಅವಕಾಶ ನೀಡಬೇಕೆಂದು ಸಂಕಿರಣದಲ್ಲಿ ತೀರ್ಮಾನಿಸಲಾಯಿತು. ಈ ಸಂಕಿರಣದ ಫಲವಾಗಿ ಕೇಂದ್ರದ ವಿತ್ತ ಸಚಿವರು ವಾರ್ಷಿಕ ಬಜೆಟ್ ಭಾಷಣದಲ್ಲಿ ಈ ಯೋಜನೆಯ ಮೂಲ ಸ್ವರೂಪವನ್ನು ಸೂಚಿಸಿದರು. ಈ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ರಿಸರ್ವ್ ಬ್ಯಾಂಕಿನ ಡೆಪ್ಯುಟಿ ಗೌರ್ನರ್ ಡಾ. ಓಝಾರವರ ಅಧ್ಯಕ್ಷತೆಯಲ್ಲಿ ಯೋಜನಾ ಹಂತಗಳನ್ನು ಗುರುತಿಸಲು ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯ ಶಿಫಾರಸ್ಸಿನಂತೆ ಬ್ಯಾಂಕುಗಳು ಈಗ ಕಾರ್ಯನಿರತವಾಗಬೇಕಾಗಿದೆ.

ಗ್ರಾಮೀಣ ಕ್ಷೇತ್ರಗಳನ್ನೊಳಗೊಂಡ ವಾಣಿಜ್ಯ ಹಾಗೂ ಗ್ರಾಮೀಣ ಬ್ಯಾಂಕ್ ಶಾಖೆಗಳು ನಿರ್ದಿಷ್ಟ ವ್ಯಾಪ್ತಿಯುಳ್ಳ ಪ್ರದೇಶದಲ್ಲಿ ಹದಿನೈದರಿಂದ ಇಪ್ಪತ್ತೈದು ಹಳ್ಳಿಗಳ ಸಮೂಹವನ್ನುಸೇವಾಕ್ಷೇತ್ರವೆಂದು ಪಡೆಯುತ್ತವೆ. ಯೋಜನೆಯ ಆರಂಭದ ಹಂತದಲ್ಲಿ ಈ ಸಂಖ್ಯೆ ಕೆಲವೆಡೆ ಆಭಾಸವೆನಿಸಬಹುದು. ಉದಾಹರಣೆಗೆ ದಕ್ಷಿಣ ಕನ್ನಡದಂತಹ ಜಿಲ್ಲೆಗಳಲ್ಲಿ ಬೆರಳೆಣಿಕೆಯ ಹಳ್ಳಿಗಳೂ ಉತ್ತರ ಭಾರತದ ಕೆಲವು ಜಿಲ್ಲೆಗಳಲ್ಲಿ ಅರವತ್ತಕ್ಕಿಂತ ಹೆಚ್ಚು ಹಳ್ಳಿಗಳೂ ಒಂದು ಶಾಖೆಯ ವ್ಯಾಪ್ತಿಯಲ್ಲಿಸೇರಲು ಸಾಧ್ಯವಿದೆ. ಈ ಯೋಜನೆ ಮುಂದಿನ ಶಾಖಾ ವಿಸ್ತರಣ ಕಾರ್ಯಕ್ರಮಕ್ಕೆ ಮಾರ್ಗಸೂಚಿಯಾಗಬಹುದು. ಸಾಮಾನ್ಯವಾಗಿ ಶಾಖೆಗೆ ಹತ್ತಿರವಿರುವ ಹಾಗೂ ಶಾಖೆಯಿರುವ ಮಂಡಲ ಪಂಚಾಯಿತಿ ಹಳ್ಳಿಗಳು ಆಯಾ ಶಾಖೆಯ ಸೇವಾಕ್ಷೇತ್ರವೆನಿಸುತ್ತವೆ. ಒಂದೇ ಪಂಚಾಯಿತಿಯ ವ್ಯಾಪ್ತಿಯಲ್ಲಿ ಎರಡು ಶಾಖೆಗಳಿದ್ದಲ್ಲಿ ಆಗ ಹಂಚಲ್ಪಡುವ ಹಳ್ಳಿಗಳಲ್ಲಿ ಹಿಂದೆ ನೀಡಿದ್ದ ಸಾಲಗಳ ಒಟ್ಟು ಸಂಖ್ಯೆ ಆಧಾರವಾಗುತ್ತದೆ. ಗ್ರಾಮೀಣ ಬ್ಯಾಂಕ್ ಶಾಖೆಗಳು ತಮ್ಮ ಸೇವಾಕ್ಷೇತ್ರದಲ್ಲಿ ಆದ್ಯತಾ ಸಮೂಹಕ್ಕೆ ಮಾತ್ರ ಸಾಲಗಳನ್ನು ನಿರ್ವಹಿಸುತ್ತವೆ. ಹೆಚ್ಚುವರಿ ಸಾಲಗಳನ್ನು ಹತ್ತಿರದ ಮಾರ್ಗದರ್ಶಿ ಬ್ಯಾಂಕ್ ಶಾಖೆ ವಹಿಸಿಕೊಳ್ಳುತ್ತದೆ. ಸಹಕಾರಿ ಸಂಘಗಳನ್ನೂ ಹಾಗೂ ಭೂ ಅಭಿವೃದ್ಧಿ ಬ್ಯಾಂಕುಗಳನ್ನೂ ಸೇವಾಕ್ಷೇತ್ರ ಯೋಜನೆಯಿಂದ ಹೊರತುಪಡಿಸಲಾಗಿದೆ.

ಈ ಯೋಜನೆ ಆರಂಭಗೊಳ್ಳುವ ಮುನ್ನ ಹಾಲಿ ಇರುವ ಇತರ ಬ್ಯಾಂಕ್ ಸಾಲಗಳು ಅವುಗಳ ಪುಸ್ತಕದಲ್ಲಿ ಚುಕ್ತಾ ಆಗುವವರೆಗೆ ಮುಂದುವರಿಯುಲಿವೆ. ಬ್ಯಾಂಕುಗಳು ಪರಸ್ಪರ ಸಮಾಲೋಚನೆ ನಡೆಸಿ ಒಂದು ಬ್ಯಾಂಕಿನಿಂದ ಮತ್ತೊಂದು ಬ್ಯಾಂಕಿಗೆ ಸಾಲಗಳನ್ನು ವರ್ಗಾಯಿಸಿಕೊಳ್ಳಬಹುದು. ಈ ರೀತಿ ವರ್ಗಾವಣೆಗೆ ಅವಕಾಶವಿದ್ದಾಗ್ಯೂ ವರ್ಗಾವಣೆಯಾಗುವ ಖಾತೆಗಳು ಬಹುಶಃ ಕಡಿಮೆಯೆಂದೇ ಭಾವಿಸಬಹುದು.

ಕಾರ್ಯವಿಧಾನ

ಶಾಖೆಗಳು ತಮ್ಮ ಸೇವಾಕ್ಷೇತ್ರಕ್ಕೆ ಸಂಬಂಧಿಸಿದಂತೆ ವಾರ್ಷಿಕ ಸಾಲ ಯೋಜನೆಯನ್ನು, ಪ್ರತಿಯೊಂದು ಹಳ್ಳಿಯ ಅಂಕಿ-ಅಂಶಗಳನ್ನು ಗಮನಿಸಿ, ಪ್ರತ್ಯೇಕವಾಗಿ ರೂಪಿಸುತ್ತವೆ. ವಾರ್ಷಿಕ ಯೋಜನೆಯನ್ನು ಅಂತಿಮವಾಗಿ ನಿರ್ಧರಿಸುವಾಗ ಸ್ಥಳೀಯ ಸಹಕಾರಿ ಸಂಘಗಳ ಹಾಗೂ ಭೂ ಅಭಿವೃದ್ಧಿ ಬ್ಯಾಂಕ್‌ಗಳ ಸಾಲವನ್ನು ಹೊರತುಪಡಿಸಿ ತಯಾರಿಸುತ್ತವೆ. ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ, ವಿಶೇಷ ಘಟಕ ಯೋಜನೆ, ಸ್ವಯಂ ಉದ್ಯೋಗ ಯೋಜನೆ ಮುಂತಾದ ಕಾರ್ಯಕ್ರಮಗಳನ್ನೂ ವಾರ್ಷಿಕ ಯೋಜನೆ, ಒಳಗೊಳ್ಳುತ್ತದೆ. ಈ ಯೋಜನೆಯ ಕರಡುಪ್ರತಿ ತಯಾರಿಸುವಲ್ಲಿ ತಾಲ್ಲೂಕಿನ ಹಲವು ಇಲಾಖೆಗಳ ನೆರವನ್ನು ಯಾಚಿಸುವುದುಂಟು.

ವಾರ್ಷಿಕ ಸಾಲ ಪ್ರಮಾಣವನ್ನು ನಿರ್ಧರಿಸುವಲ್ಲಿ ಆಯಾ ಶಾಖೆಗಳ ಒಟ್ಟು ಠೇವಣಾತಿಗಳೂ ಗಮನಾರ್ಹ ಪಾತ್ರ ವಹಿಸುತ್ತವೆ. ಮುಂಬರುವ ವರ್ಷಗಳಲ್ಲಿ ಶೇಖರಿಸಲ್ಪಡುವ ಠೇವಣಿ ಹಾಗೂ ವಸೂಲಾತಿಗಳು ಸಾಲದ ಪ್ರಮಾಣವನ್ನು ನಿರ್ಧರಿಸುವಲ್ಲಿ ನೆರವಾಗುತ್ತವೆ. ಪ್ರತಿ ಶಾಖೆಯ ಠೇವಣಿ ಹಾಗೂ ಸಾಲಗಳ ಅನುಪಾತ ರಾಷ್ಟ್ರೀಯ ಪ್ರಮಾಣದಲ್ಲಿರಬೇಕು. ಈ ರೀತಿಯ ಕಟ್ಟುಪಾಡು ಉದ್ಯಮದಲ್ಲಿ ಹೊಸ ಬೆಳವಣಿಗೆಯೂ ಹೌದು. ಅದರ ಪರಿಣಾಮವನ್ನು ಕಾದುನೋಡಬೇಕಾಗಿದೆ. ಗ್ರಾಮೀಣ ಶಾಖೆಗಳಲ್ಲಿನ ಅನಿರ್ಬಂಧಿತ ಸಾಲ ವಿತರಣೆಗೆ ಈ ಕಟ್ಟುಪಾಡು ಅಂಕುಶಪ್ರಹಾರವೆನಿಸಬಹುದು.

ಶಾಖೆಗಳು ತಯಾರಿಸಿದ ವಾರ್ಷಿಕ ಸಾಲ ಪಟ್ಟಿಗಳು ತಾಲ್ಲೂಕು ಅಥವಾ ಬ್ಲಾಕ್ ಮಟ್ಟದಲ್ಲಿ ಒಂದುಗೂಡುತ್ತವೆ. ಬ್ಲಾಕಿನ ವಾರ್ಷಿಕ ಸಾಲ ಪಟ್ಟಿ ತಯಾರಿಕೆಯನ್ನು ಅಗ್ರ ಬ್ಯಾಂಕಿನ ಪ್ರಮುಖ ಶಾಖೆ ನಿರ್ವಹಿಸುತ್ತದೆ. ಇದೇ ರೀತಿ ತಾಲ್ಲೂಕು ಮಟ್ಟದ ಯೋಜನಾ ಪತ್ರಗಳ ಒಗ್ಗೂಡುವಿಕೆಯಿಂದ ಜಿಲ್ಲೆಯ ವಾರ್ಷಿಕಯೋಜನಾ ಪತ್ರ ತಯಾರಾಗುವುದು.

ಸಮನ್ವಯ ಸಮಿತಿ

ತಾಲ್ಲೂಕು ಮಟ್ಟದ ಯೋಜನೆ ಹಾಗೂ ಅನುಷ್ಠಾನದ ಸಲುವಾಗಿ ಸಮನ್ವಯ ಸಮಿತಿಯೊಂದನ್ನು ರಚಿಸಲಾಗುವುದು. ತಾಲ್ಲೂಕಿನ ವಾಣಿಜ್ಯ ಬ್ಯಾಂಕುಗಳು, ಗ್ರಾಮೀಣ ಬ್ಯಾಂಕು, ಜಿಲ್ಲಾ ಸಹಕಾರಿ ಬ್ಯಾಂಕು, ಕೃಷಿ, ಕೈಗಾರಿಕೆ, ಸಹಕಾರ ಇತ್ಯಾದಿ ಇಲಾಖೆಗಳ ತಾಂತ್ರಿಕ ಹಾಗೂ ವಿಸ್ತರಣಾಧಿಕಾರಿಗಳು, ಮತ್ತುತಾಲ್ಲೂಕಿನ ಕ್ಷೇತ್ರಾಧಿಕಾರಿಗಳು ಈ ಸಮಿತಿಯ ಸದಸ್ಯರು. ಜಿಲ್ಲೆಯ ರಿಸರ್ವ್ ಬ್ಯಾಂಕಿನ ಅಧಿಕಾರಿ, ನಬಾರ್ಡ್‌ನ ಅಧಿಕಾರಿ ಇವರೂ ಬ್ಲಾಕ್ ಮಟ್ಟದ ಸಭೆಯಲ್ಲಿ ಭಾಗ ವಹಿಸುವರು. ಬ್ಲಾಕ್ ಮಟ್ಟದ ಈ ಸಭೆಗೆ ಅಗ್ರ ಬ್ಯಾಂಕಿನ ಅಧಿಕಾರಿಗಳು ಅಧ್ಯಕ್ಷರು. ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಈ ಸಭೆ ಕಾರ್ಯ ನಿರ್ವಹಿಸುವುದು. ಈ ಯೋಜನೆಯ ಹೆಚ್ಚಿನ ಕಾರ್ಯಭಾರ ಬ್ಯಾಂಕುಗಳ ಮೇಲಿದೆ ಎಂದು ಪ್ರಮುಖವಾಗಿ ಗಮನಿಸಬೇಕಾಗಿದೆ.

ಹಿಂದಿನ ಪ್ರಯೋಗ

ಎಪ್ಪತ್ತರ ದಶಕದಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್ ರೂಪಿಸಿದ ದತ್ತುಗ್ರಾಮ ಯೋಜನೆ ಈ ಯೋಜನೆಗಿಂತ ಹೆಚ್ಚು ಭಿನ್ನವಾಗಿರಲಿಲ್ಲ. ಯೋಜನೆಯ ಮೂಲ ಉದ್ದೇಶ ಹಳ್ಳಿಗಳ ಸರ್ವತೋಮುಖವಾದ ಬೆಳವಣಿಗೆಯೆನಿಸಿತ್ತು. ಭಾರತೀಯ ಸ್ಟೇಟ್ ಬ್ಯಾಂಕಿನಿಂದ ಆರಂಭಗೊಂಡ ಯೋಜನೆಯನ್ನು ಸಹವರ್ತಿ ಬ್ಯಾಂಕುಗಳೂ ಸ್ವೀಕರಿಸಿದುವು. ಯೋಜನೆಯ ಪಾತ್ರತೆಯನ್ನು ಗಮನಿಸಿ ಕೇಂದ್ರ ಸರ್ಕಾರ ಅಧಿಕಾರ ಮುದ್ರೆ ನೀಡಿದ್ದಲ್ಲಿ ಇಂದು ಎಲ್ಲೆಡೆ ಇದರ ಫಲಶ್ರುತಿಯನ್ನು ಕಾಣಬಹುದಿತ್ತು. ಬ್ಯಾಂಕರುಗಳಲ್ಲಿ ಪರಸ್ಪರ ಪೈಪೋಟಿ, ಗ್ರಾಮೀಣ ಶಾಖೆಗಳ ಮೇಲಿನ ಅನಗತ್ಯ ಒತ್ತಡ ಮುಂತಾದವನ್ನು ಮೊಳಕೆಯಲ್ಲೇ ಚಿವುಟಬಹುದಿತ್ತು. ನೂತನ ಯೋಜನೆಯಲ್ಲಿಯೂ ಬ್ಯಾಂಕುಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಅವಕಾಶವಿದೆ.

ಬ್ಯಾಂಕ್ ರಾಷ್ಟ್ರೀಕರಣದ ಮೂರನೇ ದಶಕಕ್ಕೆ ದಾಪುಗಾಲು ಹಾಕುವ ಮುನ್ನ ಈ ಯೋಜನೆ ಹಲವಾರು ಯೋಜನೆಗಳ ಕಾರ್ಮೋಡಗಳ ಮಧ್ಯೆ ಬೆಳ್ಳಿ ಗೆರೆಯಂತೆ ಕಾಣುತ್ತಿದೆ. ಯೋಜನೆ ಕಾರ್ಯರೂಪಕ್ಕೆ ಇಳಿದಾಗ ಮುಕ್ತ ವಾತಾವರಣ ಮುಂದುವರಿದಲ್ಲಿ ಬೆಳ್ಳಿಯ ಗೆರೆ ಹೊಳೆಯಾಗಿ ಹರಿದೀತು. ಕಾಲ ಇದನ್ನೆಂತು ಸ್ವೀಕರಿಸಿ ನಿರ್ಧರಿಸುವುದೋ ? ಕಾದು ನೋಡಬೇಕು. ★

ಸಾಧನಶೀಲ ಬ್ಯಾಂಕರುಗಳಿಗೆ ಸನ್ಮಾನ

ಮೂಲ : ಬಿ. ರಾಮಚಂದ್ರರಾವ್

ಅನುವಾದ : ಪಾಂಡುರಂಗ ಶೃಂಗೇರಿ
ವೆಂಕಟರಮಣ ಪೈ
ವಸಂತ ಭಾರದ್ವಾಜ
ಎನ್. ಶ್ರೀಧರ್
ಬಿ. ಎಸ್. ಚಂದ್ರಶೇಖರ

ದೇಶದಲ್ಲಿ ಕೇವಲ ಬ್ಯಾಂಕ್ ಕೆಲಸಗಾರರಿದ್ದಾರೆಯೇ ಹೊರತು ಕೆಲಸಮಾಡುವ ಬ್ಯಾಂಕರುಗಳಿಲ್ಲ ಎಂದು ಹೇಳಲಾಗಿದ. ಇದು ನಿಜವಾಗಿದ್ದಿದ್ದರೆ ಬ್ಯಾಂಕಿಂಗ್ ವಿಕಾಸದ ಇಂದಿನ ಘಟ್ಟ, ಅದರಲ್ಲೂ 1969ರ 14 ಪ್ರಮುಖ ಅನುಸೂಚೀ ವಾಣಿಜ್ಯ ಬ್ಯಾಂಕುಗಳ ರಾಷ್ಟ್ರೀಕರಣದ ಅನಂತರದ ಘಟ್ಟ, ಬರುತ್ತಿರಲಿಲ್ಲ. ಇಂದು ದೇಶಾದ್ಯಂತ ಕಾರ್ಯನಿರತವಾಗಿರುವ 50,000ಕ್ಕೂ ಹೆಚ್ಚು ಬ್ಯಾಂಕ್ ಶಾಖೆಗಳು ಇವೆ. ಬ್ಯಾಂಕಿಂಗ್ ವ್ಯವಸ್ಥೆಯ ಠೇವಣಿಗಳು ರೂ. 79,000 ಕೋಟಿ ಮೀರಿವೆ ಮತ್ತು ಇದರಲ್ಲಿ ರೂ. 49,000 ಕೋಟಿಗಿಂತಲೂ ಹೆಚ್ಚು ಹಣವನ್ನು ಅರ್ಥವ್ಯವಸ್ಥೆಯ ವಿವಿಧ ವಲಯಗಳಿಗೆ ಸಾಲವಾಗಿ ನೀಡಲಾಗಿದೆ. ಒಟ್ಟು ಉದರಿಯ ಶೇ. 40ಕ್ಕೂ ಹೆಚ್ಚು ಭಾಗ ಆದ್ಯತಾವಲಯಕ್ಕೆ ಹೋಗಿದೆ. ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಈಗ ಆರು ಲಕ್ಷಕ್ಕಿಂತಲೂ ಹೆಚ್ಚು ಉದ್ಯೋಗಿಗಳಿದ್ದಾರೆ. ಈ ಎಲ್ಲ ಉದ್ಯೋಗಿಗಳು ಪೂರ್ಣವಾಗಿ ಮತ್ತು ಅವರಿಂದ ನಿರೀಕ್ಷಿಸಿದಷ್ಟುಮಟ್ಟಿಗೆ ಅಗತ್ಯವಾದ ಸಮರ್ಪಣಭಾವ, ತಾದಾತ್ಮ್ಯ ಮತ್ತು ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸಲಿಲ್ಲ ಎಂದಿರಬಹುದು. ಅವರಲ್ಲಿ ತಕ್ಕಮಟ್ಟಿಗೆ ಕೆಲವರಾದರೂ ಸಂಪೂರ್ಣ ಪ್ರಾಮಾಣಿಕತೆಯಿಂದ ಅವಿಶ್ರಾಂತವಾಗಿ ದುಡಿದಿರಬಹುದು. ಇವರು ಈ ಉದ್ಯಮದಲ್ಲಿ ನಿಜಕ್ಕೂ ಸಾಧನಶೀಲ ಬ್ಯಾಂಕರುಗಳು. ಅವರ ಕೆಲಸವನ್ನು ಗುರುತಿಸದೆ ಇರುವುದು ಒಂದು ದೌರ್ಭಾಗ್ಯ.

ಬ್ಯಾಂಕರನ ಆತ್ಮಸ್ಥೈರ್ಯಕ್ಕೆ ಚೋದನೆ ಅಗತ್ಯ

ರಾಷ್ಟ್ರೀಯ ಅರ್ಥವ್ಯವಸ್ಥೆಯ ಬೆಳವಣಿಗೆ ದೇಶದಲ್ಲಿಯ ಬ್ಯಾಂಕಿಂಗ್ ವ್ಯವಸ್ಥೆಯನ್ನೇ ಬಹುವಾಗಿ ಅವಲಂಬಿಸಿದೆ. ವಸ್ತುಸ್ಥಿತಿ ಹೀಗಿರುವಾಗ ಎಲ್ಲ ಬ್ಯಾಂಕರುಗಳ ಮಾನಸಿಕ ಸ್ಥೈರ್ಯದ ವೃದ್ಧಿಗೆ ಸಾಧನ ಹಾಗೂ ತಂತ್ರವಾಗಿ ಸಾಧನಶೀಲ ಬ್ಯಾಂಕರುಗಳನ್ನು ಸನ್ಮಾನಿಸುವುದು ಅತ್ಯಂತ ಅಗತ್ಯ. ಜೀವನದ ಪ್ರತಿಯೊಂದು ಕ್ಷೇತ್ರದ ವ್ಯಕ್ತಿಗಳನ್ನು ಸಮುದಾಯಕ್ಕೆ ಅವರು ಸಲ್ಲಿಸಿದ ಅದ್ವಿತೀಯ ಸೇವೆಗಾಗಿ ಆಗಾಗ್ಗೆ ಸರ್ಕಾರದಿಂದ ಸಾರ್ವಜನಿಕವಾಗಿ ಬಿರುದುಗಳ ನೀಡಿಕೆಯ ರೂಪದಿಂದ ಕೂಡ ಗೌರವಿಸಲಾಗುತ್ತಿದೆ. ಆದರೆ 1969ರಿಂದ ಬ್ಯಾಂಕಿಂಗಿನಲ್ಲಿ ಆಗಿರುವ ಬೃಹತ್ ಬೆಳವಣಿಗೆಯ ನಿಟ್ಟಿನಲ್ಲಿ ಸಾಧನಶೀಲ ವೃತ್ತಿನಿರತ ಬ್ಯಾಂಕರುಗಳಿಗೆ ಮಾಡಿರುವ ಸನ್ಮಾನ ಏನೇನೂ ಸಾಲದು.

ಒಳ್ಳೆಯ ಕೆಲಸ ಮಾಡಿರುವ ಬ್ಯಾಂಕರುಗಳನ್ನು ಅವರು ಕಾರ್ಯಪ್ರವೃತ್ತರಾಗಿರುವ ಸ್ಥಳಗಳಲ್ಲಿಯ ಜನರು ಸನ್ಮಾನಿಸಿಲ್ಲ ಮತ್ತು ಗುರುತಿಸಿಲ್ಲ ಎಂದೇನೂ ಇದರ ಅರ್ಥವಲ್ಲ. ಬಹುತೇಕ ಶಾಖಾ ವ್ಯವಸ್ಥಾಪಕರು ವರ್ಗ ಹೊಂದಿದಾಗ ಅವರು ಸಿಬ್ಬಂದಿಯವರಿಂದ ಹಾರ್ದಿಕ ಬೀಳ್ಕೊಡುಗೆಯನ್ನು ಪಡೆಯುತ್ತಾರೆ. ಕೆಲವು ವೇಳೆ ಸಾರ್ವಜನಿಕರು ಕೂಡ ಇಂಥ ಬೀಳ್ಕೊಡುಗೆ ಸಮಾರಂಭದಲ್ಲಿ ಪಾಲ್ಗೊಳ್ಳುತ್ತಾರೆ. ಶಾಖಾ ವ್ಯವಸ್ಥಾಪಕರ ನಿವೃತ್ತಿಯ ಸಮಯದಲ್ಲೂ ಅಂಥ ಕಾರ್ಯಕ್ರಮಗಳನ್ನು ಸಂಘಟಿಸಲಾಗುತ್ತದೆ.

ನಿಜ ಸಾಧನಶೀಲರು

ಏನೇ ಇರಲಿ, ಇಂಥ ಸನ್ಮಾನ ಸಿಗುವುದು ಬಹುತೇಕ ಶಾಖಾ ವ್ಯವಸ್ಥಾಪಕರಿಗೇ. ಬ್ಯಾಂಕ್ ಉದ್ಯೋಗಿಗಳ ಕೆಳಸ್ತರದವರು ಬಹು ವಿರಳವಾಗಿ ಅಂಥ ಅವಕಾಶಗಳನ್ನು ಪಡೆಯುತ್ತಾರೆ. ರಫ್ತು, ಧನಪೋಷಣೆ, ಗ್ರಾಮೀಣ ಅಭಿವೃದ್ಧಿ, ಕೈಗಾರಿಕಾ ಹಣಕಾಸು ಅಥವಾ ಆದ್ಯತಾರಂಗದಲ್ಲಿ ಉತ್ತಮ ಕಾರ್ಯಪಾಲನೆ ಮಾಡಿದ ಬ್ಯಾಂಕುಗಳ ಮತ್ತು ಶಾಖೆಗಳ ಉನ್ನತ ವ್ಯಕ್ತಿಗಳನ್ನು ಮಾತ್ರ ಗೌರವಿಸುವುದರಿಂದ ಪ್ರಯೋಜನವಿಲ್ಲ. ಇದು ಬ್ಯಾಂಕುಗಳಲ್ಲಿರುವ ಸಿಬ್ಬಂದಿಯ ಮೇಲೆ ಯಾವ ಪ್ರಭಾವವನ್ನೂ ಬೀರುವುದಿಲ್ಲ, ಯಾರು ಕೆಳಗಿನ ಸ್ತರದ ದುಡಿಮೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೋ, ಯಾರು ನಿಜಕ್ಕೂ ದುಡಿಯುತ್ತಾರೋ, ಯಾರು ಉದ್ದೇಶಗಳನ್ನು ಮತ್ತು ಗುರಿಗಳನ್ನು ಸಾಧಿಸುತ್ತಾರೋ, ಅಂಥವರಿಗೆ ಗೌರವವನ್ನು ನೀಡಬೇಕು.

ವಾಸ್ತವವಾಗಿ ಈಚಿನ ವರ್ಷಗಳಲ್ಲಿ ಸಣ್ಣ ಕೈಗಾರಿಕೆ ಮತ್ತು ಕೃಷಿರಂಗದಲ್ಲಿ ಹಲವು ಮಂದಿ ಕ್ಷೇತ್ರಾಧಿಕಾರಿಗಳಿದ್ದಾರೆ. ಈ ಅಧಿಕಾರಿಗಳು ವ್ಯವಸ್ಥಾಪಕರ ಅಡಿಯಲ್ಲಿ ಕೆಲಸಮಾಡುತ್ತಿದ್ದಾಗ್ಯೂ ಗ್ರಾಹಕರೊಂದಿಗಿನ ತಮ್ಮ ನೇರ ಸಂಪರ್ಕದಿಂದಾಗಿ ಕ್ಷೇತ್ರದಲ್ಲಿ ನಿಜಕ್ಕೂ ಸಾಧನಶೀಲ ಬ್ಯಾಂಕರರು. ಕೆಲವು ಗ್ರಾಹಕರಿಗೆ ಇವರು ಅನಿರ್ವಾಹ ಮತ್ತು ಇವರಿಲ್ಲದೆ ಶಾಖೆ ಏನೂ ಅಲ್ಲ, ಇವರಿಬ್ಬರ ನಡುವೆ ಎಂಥ ಬಾಂಧವ್ಯ ಇದೆ ಎಂದರೆ, ಗ್ರಾಹಕರು ಆ ಶಾಖೆಗಳ ಬೆಳವಣಿಗೆಗೆ ಪೂರ್ಣ ಪ್ರೋತ್ಸಾಹ ನೀಡುತ್ತಾರೆ. ಬ್ಯಾಂಕಿನ ಈ ಕ್ಷೇತ್ರ ಸಿಬ್ಬಂದಿಯನ್ನು ಕೂಡ ಸನ್ಮಾನಿಸುವ ವ್ಯವಸ್ಥೆಯೊಂದು ಇರಬೇಕು. ಸದ್ಯದಲ್ಲಿ, ಪ್ರತಿ ವಲಯ ಅಥವಾ ಕ್ಷೇತ್ರದಲ್ಲಿರುವ ಉತ್ತಮ ಶಾಖೆಗಳಿಗೆ ಪ್ರಶಸ್ತಿ ನೀಡುವ ಪದ್ಧತಿ ಬಹುಮಟ್ಟಿಗೆ ಪ್ರತಿಯೊಂದು ಬ್ಯಾಂಕಿನಲ್ಲಿಯೂ ಇದೆ. ಅದೇ ರೀತಿ ಕೇಂದ್ರ ಕಛೇರಿಗಳು ಏರ್ಪಡಿಸುವ ಠೇವಣಿ ಆಂದೋಲನ ಮತ್ತು ಸ್ಪರ್ಧೆಗಳೂ ಇರಬಹುದು. ಇವುಗಳಲ್ಲಿ ಯಶಸ್ವಿಯಾದವರಿಗೆ ಶಾಖಾಮಟ್ಟದಲ್ಲಿ ಬಹುಮಾನ ಸಿಗುತ್ತದೆ. ಆದರೆ ಇದೆಲ್ಲವೂ ಒಂದು ಬ್ಯಾಂಕಿನ ಮಟ್ಟದಲ್ಲೇ ಇದೆ. ಸಾಧನಶೀಲ ಬ್ಯಾಂಕರುಗಳನ್ನುಗುರುತಿಸಿ ಅವರನ್ನು ರಾಷ್ಟ್ರಮಟ್ಟದಲ್ಲಿ ಗೌರವಿಸುವುದು ಅಗತ್ಯವಾಗಿದೆ. ಮೊದಲಿಗೆ ವ್ಯವಸ್ಥಾಪಕರು ಮತ್ತು ಕ್ಷೇತ್ರಾಧಿಕಾರಿಗಳನ್ನು ಈ ಯೋಜನೆಗೆ ಒಳಪಡಿಸಬಹುದು, ಎಲ್ಲಾ ಬ್ಯಾಂಕುಗಳಿಂದ ಬರುವ ಪ್ರವೇಶಪತ್ರದ ಮೂಲಕ ಆಯ್ಕೆ ನಡೆಯಬೇಕು. ಕಾರ್ಯನಿರ್ವಹಣೆಯ ಹರವುಗಳನ್ನೊಳಗೊಳ್ಳುವಂತೆ ಮಾರ್ಗದರ್ಶಕ ಸೂತ್ರಗಳನ್ನು ನೀಡಬೇಕು. ಮಾರ್ಗದರ್ಶಕ ಸೂತ್ರಗಳು ಮನೆವಾರ್ತೆ, ಮುಂಗಡಗಳ ಗುಣಮಟ್ಟ, ಠೇವಣಿ ಸಂಗ್ರಹಣೆ, ಗ್ರಾಮೀಣ ಅಭಿವೃದ್ಧಿ,ವಸೂಲಾತಿ, ಆದ್ಯತಾರಂಗದ ಸಾಲಿಗರು, ಕೈಗಾರಿಕಾ ಸಂಬಂಧಗಳು, ತರಬೇತಿ, ಗ್ರಾಹಕಸೇವೆ ಇತ್ಯಾದಿಗಳಿಗೆ ಒತ್ತು ಕೊಡಬೇಕು.

ಪ್ರತಿಯೊಂದು ಬ್ಯಾಂಕೂ ಪ್ರತಿ ವರ್ಷವೂ ಕೇಂದ್ರ ಕಛೇರಿಯಲ್ಲಿಯ ಸಮಾರಂಭವೊಂದರಲ್ಲಿ ಸಾಧನಶೀಲ ವ್ಯವಸ್ಥಾಪಕರುಗಳು ಮತ್ತು ಕ್ಷೇತ್ರಾಧಿಕಾರಿಗಳಿಗೆ ಪದಕಗಳು, ಬಹುಮಾನಗಳು ಮತ್ತು ಪ್ರಮಾಣಪತ್ರಗಳನ್ನು ಕೊಡಬಹುದು. ಈ ವಿಜೇತರು ಅಖಿಲಭಾರತ ಮಟ್ಟದಲ್ಲಿ ಪದಕಗಳು, ಬಹುಮಾನಗಳು ಮತ್ತು ಪ್ರಮಾಣಪತ್ರಗಳನ್ನು ಗೆಲ್ಲಲು ಸ್ಪರ್ಧಿಸಬಹುದು. ಭಾರತದ ರಿಸರ್ವ್ ಬ್ಯಾಂಕ್, ಭಾರತೀಯ ಬ್ಯಾಂಕರುಗಳ ಸಂಘ ಮತ್ತು ಹಣಕಾಸು ಸಚಿವಾಲಯಗಳ ಸದಸ್ಯರ ಸಮಿತಿಯೊಂದು ಆಯ್ಕೆಗಾಗಿ ಸ್ವೀಕರಿಸಲಾದ ಪ್ರವೇಶಗಳನ್ನು ಮರು ಪರಿಶೀಲಿಸಬಹುದು. ಇದು ಎಲ್ಲ ಬ್ಯಾಂಕುಗಳಿಂದ ಬಂದ ಸದಸ್ಯರಿಗೆ ಒಂದು ಸ್ಪರ್ಧೆಯಾಗುತ್ತದೆ. ಇದು ಒಂದು

[12ನೇ ಪುಟ ನೋಡಿ]

ಬೇನಾಮಿ ವ್ಯವಹಾರಗಳ ಸುಗ್ರೀವಾಜ್ಞೆ

ತೆರಿಗೆ ತಪ್ಪಿಸಿಕೊಳ್ಳುವ ಉದ್ದೇಶದಿಂದ ಅಥವಾ ಅವಿಭಕ್ತ ಕುಟುಂಬ ವ್ಯವಸ್ಥೆಯ ಕಾರಣದಿಂದಾಗಿ ಒಬ್ಬ ವ್ಯಕ್ತಿ ತನ್ನ ಹಣವನ್ನು ತೊಡಗಿಸಿ ಇನ್ನೊಬ್ಬನ ಹೆಸರಿನಲ್ಲಿ ಸ್ವತ್ತನ್ನು ಖರೀದಿಸುವ ಅಥವಾ ಖರೀದಿಯ ಅನಂತರ ಇನ್ನೊಬ್ಬನ ಹೆಸರಿಗೆ ವರ್ಗಾವಣೆ ಮಾಡುವ ದುರ್ವ್ಯವಹಾರದ ನಿರ್ಮೂಲನ ಪ್ರಯತ್ನ ಎಷ್ಟು ಸಫಲ?

ರಾಜಾರಾಮ ಹೆಗಡೆ

ಭಾರತೀಯ ಸ್ಟೇಟ್ ಬ್ಯಾಂಕ್
ಬನಶಂಕರಿ ಮೊದಲ ಹಂತ
ಬೆಂಗಳೂರು

ತೆರಿಗೆಗಳ್ಳತನವನ್ನು ತಪ್ಪಿಸುವ ಮುಖ್ಯ ಉದ್ದೇಶವನ್ನು ಹೊಂದಿ, ಕೇಂದ್ರ ಸರ್ಕಾರ ಇತ್ತೀಚೆಗೆ ಬೇನಾಮಿ ವ್ಯವಹಾರಗಳ ಸುಗ್ರೀವಾಜ್ಞೆಯೊಂದನ್ನು ಹೊರಡಿಸಿತು. ರಾಷ್ಟ್ರಪತಿಗಳು ಹೊರಡಿಸಿದ ಈ ಸುಗ್ರೀವಾಜ್ಞೆ 19ರ ಮೇ 1988ರಂದು ಜಾರಿಗೆ ಬಂದಿತು.

'ಬೇನಾಮಿ ವ್ಯವಹಾರ'ಗಳನ್ನು ಅಪರಾಧವೆಂದು ಘೋಷಿಸಬೇಕೆಂದೂ, ನಿಜವಾದ ಒಡೆಯ ತೋರಿಕೆಯ ಒಡೆಯನಿಂದ ಅಂತಹ ಸ್ವತ್ತನ್ನು ವಸೂಲು ಮಾಡುವ ಹಕ್ಕನ್ನು ಪ್ರತಿಬಂಧಿಸಬೇಕೆಂದೂ 1973ರ ಹಿಂದೆಯೇ ಕಾನೂನು ಆಯೋಗ ಶಿಫಾರಸು ಮಾಡಿದ್ದರೂ, ಈ ಬಗ್ಗೆ ನಿರ್ಧಾರ ಕೈಗೊಳ್ಳಲು ಸರ್ಕಾರ ಸುಮಾರು 15 ವರ್ಷಗಳನ್ನು ತೆಗೆದುಕೊಂಡಿತು.

ಯಾವುದೇ ಒಬ್ಬ ವ್ಯಕ್ತಿ ತನ್ನ ಹಣವನ್ನು ತೊಡಗಿಸಿ ಸ್ವತ್ತನ್ನು ಇನ್ನೊಬ್ಬರ ಹೆಸರಿನಲ್ಲಿ ಖರೀದಿಸಿದರೆ ಅಥವಾ ತದನಂತರ ಸ್ವತ್ತನ್ನು ಇನ್ನೊಬ್ಬ ವ್ಯಕ್ತಿಯ ಹೆಸರಿಗೆ ವರ್ಗಾಯಿಸಿದರೆ (ಅಂತಹ ವ್ಯಕ್ತಿಗೆ ಪ್ರಯೋಜನ ನೀಡುವ ಯಾವುದೇ ಇಚ್ಛೆಯಿಲ್ಲದೆ) ಅಂತಹ ವ್ಯವಹಾರ 'ಬೇನಾಮಿ' ಎಂದೆನಿಸಿಕೊಳ್ಳುತ್ತದೆ.

ತೆರಿಗೆಯನ್ನು ತಪ್ಪಿಸುವ ಉದ್ದೇಶದಿಂದಲೋ, ಅವಿಭಕ್ತ ಕುಟುಂಬಗಳ ವ್ಯವಸ್ಥೆಯಿರುವ ಕಾರಣಕ್ಕೋ, ಬೇನಾಮಿ ವ್ಯವಹಾರಗಳು ನಮ್ಮ ದೇಶದಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಹೀಗೆ ರೂಢಿಯಲ್ಲಿದ್ದು, ಪ್ರಬಲವಾಗಿ ಬೇರೂರಿದ್ದು, ಶಾಸನದ ಮಾನ್ಯತೆಯನ್ನೂ ಪಡೆದಿದ್ದ ಈ ಬಗೆಯ ವ್ಯವಹಾರಗಳು ಈ ಸುಗ್ರೀವಾಜ್ಞೆಯಿಂದ ಬುಡಮೇಲಾಗುವಂತಾಗಿದೆ. ಪರಿಣಾಮವಾಗಿ, ಬೇನಾಮಿದಾರ ಈಗ ಕೇವಲ ತೋರಿಕೆಯ ಒಡೆಯನಾಗಿರುವುದಿಲ್ಲ. ಕೇವಲ ಹಣವನ್ನು ತೊಡಗಿಸಿದ ಮಾತ್ರಕ್ಕೆ, ನಿಜವಾದ ಒಡೆಯ ಬೇನಾಮಿದಾರನಿಂದ ಅಂತಹ ಸ್ವತ್ತುಗಳನ್ನು ಇನ್ನು ಮುಂದೆ ವಸೂಲು ಮಾಡುವಂತಿಲ್ಲ.

ಚರಾಸ್ತಿ, ಸ್ಥಿರಾಸ್ತಿಗಳೇ ಆಗಲಿ, ಶಹರ, ಗ್ರಾಮೀಣ ಪ್ರದೇಶಗಳೇ ಆಗಲಿ, ಎಲ್ಲ ಆಸ್ತಿಗಳಿಗೂ ಈ ಸುಗ್ರೀವಾಜ್ಞೆ ಅನ್ವಯಿಸುತ್ತದೆ. ಜಮ್ಮು ಕಾಶ್ಮೀರವೊಂದನ್ನು ಬಿಟ್ಟು ದೇಶದ ಎಲ್ಲ ಭಾಗಗಳಿಗೆ ಇದು ಅನ್ವಯಿಸುತ್ತದೆ. ಆದರೆ ದಾಯಾದಿಗಳ ಹೆಸರಿನಲ್ಲಿರಬಹುದಾದ ಅವಿಭಕ್ತ ಕುಟುಂಬದ ಆಸ್ತಿಗಳು, ಮತ್ತೊಬ್ಬರ ಆಸ್ತಿಯ ಲಾಭಕ್ಕಾಗಿ ವಿಶ್ವಾಸಾವಲಂಬಿ ಸ್ಥಾನದಲ್ಲಿರುವವರು ಮತ್ತು ನ್ಯಾಸಧಾರಿ ಹೊಂದಿರಬಹುದಾದ ಆಸ್ತಿಗಳು ಈ ಸುಗ್ರೀವಾಜ್ಞೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ.

ಸುಗ್ರೀವಾಜ್ಞೆಯ ಪರಿಣಾಮಗಳು

ಕಾನೂನು ಇನ್ನು ಮುಂದೆ 'ತೋರಿಕೆಯ ಸ್ಥಿತಿ'ಯನ್ನೆ 'ನಿಜ ಸ್ಥಿತಿ'ಯೆಂದು ಪರಿಗಣಿಸುತ್ತದೆ. ಆಸ್ತಿ ಯಾರ ಹೆಸರಿನಲ್ಲಿ ಇರುತ್ತದೆಯೋ ಅವನೇ ಒಡೆಯನೆಂದು ಕಾನೂನು ತಿಳಿಯುತ್ತದೆ. ತೋರಿಕೆಯ ಒಡೆಯ ಆಸ್ತಿಯ ಸಂಪೂರ್ಣ ಹಕ್ಕುಗಳನ್ನು ಪಡೆಯುತ್ತಾನಲ್ಲದೆ, ನಿಜವಾದ ಒಡೆಯನ ಅನುಮತಿಯಿಲ್ಲದೆ ಸ್ವತ್ತನ್ನು ವರ್ಗಾಯಿಸಬಹುದು. ನಿಜವಾದ ಒಡೆಯನಿಂದ ಬಂದ ಪ್ರತಿಫಲವನ್ನು 'ಕಾಣಿಕೆ'ಯೆಂದು ಪರಿಗಣಿಸಲಾಗುವುದು.

ಪ್ರತಿಫಲವನ್ನು ತಾನು ನೀಡಿದ್ದೆನೆಂಬ ಕಾರಣವನ್ನೊಡ್ಡಿ, ನಿಜವಾದ ಒಡೆಯ ತೋರಿಕೆಯ ಒಡೆಯನಿಂದ ಆಸ್ತಿಯನ್ನು ಪಡೆಯಲಾಗುವುದಿಲ್ಲ.

ವಾಸ್ತವತೆಯನ್ನು ಬದಿಗೊತ್ತಿ ಹೊರತರಲಾದ ಈ ಸುಗ್ರೀವಾಜ್ಞೆಯಿಂದ ಆಗುವ ಪ್ರಮಾದಗಳನ್ನು ಅಲ್ಲಗಳೆಯುವಂತಿಲ್ಲ. ಪ್ರಸ್ತುತ ಸುಗ್ರೀವಾಜ್ಞೆ 'ನಿಜವಾದ ಒಡೆಯ' ಮತ್ತು 'ತೋರಿಕೆಯ ಒಡೆಯ' ಎನ್ನುವ ಭಾವರೂಪಗಳನ್ನೇ ರದ್ದುಪಡಿಸಿದೆ. ತೋರಿಕೆಯ ಸ್ಥಿತಿಯೇ ನಿಜವಾದ ಸ್ಥಿತಿಯೆನ್ನುವ ಕಾನೂನು ಇದಾಗಿದೆ.

ಬೆಂಗಳೂರಿನಂತಹ ಮಹಾನಗರಗಳಲ್ಲಿ ಕಾನೂನಿನ ತೊಡಕುಗಳಿಂದ ತಪ್ಪಿಸಿಕೊಳ್ಳುವ ಸಹಜ ಉದ್ದೇಶದಿಂದ ಮುಖ್ತ್ಯಾರನಾಮೆಗಳ ಮೂಲಕ ಸ್ವಾಧೀನತೆಯನ್ನ ನೀಡಿ, ಆ ಸ್ವತ್ತನ್ನು ವರ್ಗಾಯಿಸುವ ಪ್ರವೃತ್ತಿ ಹೆಚ್ಚಾಗಿ ಕಂಡುಬರುತ್ತಿದೆ. ಕಾನೂನಿನ ಪ್ರಕಾರ ಆಸ್ತಿಯ ಒಡೆತನವನ್ನು ನೊಂದಾಯಿತ ದಸ್ತಾವೇಜುಗಳ ಮುಖಾಂತರ ಮಾತ್ರ ವರ್ಗಾಯಿಸಬಹುದು. ಇಂಥ ವ್ಯವಹಾರಗಳ ಮೇಲೆ ಸುಗ್ರೀವಾಜ್ಞೆ ಸಾಕಷ್ಟು ಪರಿಣಾಮ ಬೀರಲಿದೆ. ಅದೇ ರೀತಿ ಪಾಲುದಾರಿಕೆ ಕರಾರುಗಳಿಗೂ ಇದರ ಬಿಸಿ ತಗಲಿದೆ.

ತೆರಿಗೆಗಳ್ಳತನವನ್ನು ತಪ್ಪಿಸುವುದು ಈ ಸುಗ್ರೀವಾಜ್ಞೆಯ ಮುಖ್ಯ ಉದ್ದೇಶ, ಈ ಸುಗ್ರೀವಾಜ್ಞೆಯಿಂದ ವರಮಾನ ತೆರಿಗೆ ಕಾನೂನಿನ ಪ್ರಕರಣ 281A ನಿರಸನಗೊಂಡಿದೆ. ಈ ಹಿಂದೆ ಈ ಮೇಲಿನ ಪ್ರಕರಣದ ರೀತ್ಯ ವ್ಯಕ್ತಿಗಳು ಬೇನಾಮಿ ವ್ಯವಹಾರಗಳ ಬಗ್ಗೆ ಸಂಬಂಧಿಸಿದ ಕಮಿಷನರರ ಬಳಿಯಲ್ಲಿ ಬಹಿರಂಗಪಡಿಸಿದ್ದರೆ ಅಂತಹವರೂ ಈ ಸುಗ್ರೀವಾಜ್ಞೆಯ ವ್ಯಾಪ್ತಿಯಲ್ಲಿ ಬರುವರೇ? ಪ್ರಸ್ತುತ ಸುಗ್ರೀವಾಜ್ಞೆ ಈಗಾಗಲೇ ಇರುವ ಕಾನೂನಿನ ಸ್ಥಿತಿಯನ್ನು ಎಷ್ಟರಮಟ್ಟಿಗೆ ಸುಧಾರಿಸಬಹುದು?

ವೈಫಲ್ಯ—ಕಾರಣಗಳು

ದೇಶದ ಅರ್ಥವ್ಯವಸ್ಥೆಯ ಮೇಲೆ ಗಂಭೀರ ಪರಿಣಾಮ ಬೀರಬಹುದೆಂಬ ಪ್ರಚಾರದೊಂದಿಗೆ ಹೊರಬಂದ ಈ ಸುಗ್ರೀವಾಜ್ಞೆಯ ಹಲವು ಉಪಬಂಧಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಅಂತಹ ಪ್ರಮುಖ ಬದಲಾವಣೆಗಳು ಆಗುವುದೆಂದು ಅನ್ನಿಸುವುದಿಲ್ಲ. ಕಾರಣ ಈ ಸುಗ್ರೀವಾಜ್ಞೆ ಬೇನಾಮಿ ವ್ಯವಹಾರಗಳನ್ನು 'ಕಾಯದೆಬಾಹಿರ'ವೆಂದು ಪರಿಗಣಿಸುವುದಿಲ್ಲ. ಪಕ್ಷಕಾರರ ಹಕ್ಕುಬಾಧ್ಯತೆಗಳನ್ನು ಬದಲಾಯಿಸಿಲ್ಲ. ಈ ಸುಗ್ರೀವಾಜ್ಞೆ ಕೇವಲ ಕಾನೂನು ರೀತಿ ಕೈಗೊಳ್ಳುವ ಕ್ರಮೋಪಾಯಗಳನ್ನೇ ಕಸಿದುಕೊಂಡಿದೆ. ನಿಜವಾದ ಒಡೆಯ ತೋರಿಕೆಯ ಒಡೆಯ ಅಥವಾ ಬೇರೆ ವ್ಯಕ್ತಿಯ ವಿರುದ್ಧ ಕೈಗೊಳ್ಳುವ ದಾವೆ, ಹಕ್ಕುಸಾಧನೆ, ಕ್ರಮಗಳಿಗಷ್ಟೆ ಇದರ ವ್ಯಾಪ್ತಿ ಸೀಮಿತವಾಗಿದೆ. ಬೇನಾಮಿದಾರನಾಗಲಿ, ಬೇರೆ ವ್ಯಕ್ತಿಗಳಾಗಲಿ ನಿಜವಾದ ಒಡೆಯನ ವಿರುದ್ಧ ಕೈಗೊಳ್ಳಬಹುದಾದ ದಾವೆ, ಹಕ್ಕುಸಾಧನೆ, ಕ್ರಮಗಳ ಬಗ್ಗೆ ಈ ಸುಗ್ರೀವಾಜ್ಞೆ ಸಂಪೂರ್ಣ ಮೌನತಾಳಿದೆ.

ಈ ಮೇಲಿನ ಕ್ರಮೋಪಾಯಗಳು ನಿಜವಾದ ಒಡೆಯನಿಗೆ ಇರಲಾರವು. ಆದರೆ ಅವನ ಮೂಲಕ ಹಕ್ಕು ಸಾಧಿಸಬಯಸುವ ಅವನ ವಾರಸುದಾರರಿ

ಬ್ಯಾಂಕ್ ವ್ಯವಹಾರದಲ್ಲಿ ಕನ್ನಡ

ಜನರೊಂದಿಗೆ ದಿನದಿನವೂ ವ್ಯವಹರಿಸುವ ಬ್ಯಾಂಕಿನಂಥ ಸಂಸ್ಥೆ ಜನರ ಭಾಷೆಯಲ್ಲಿ ವ್ಯವಹರಿಸುವುದು ಅಗತ್ಯವೆಂಬ ಮಾತನ್ನು ಪದೇ ಪದೇ ಹೇಳಲಾಗುತ್ತಲೇ ಇದೆ. ಆದರೆ ಅಧಿಕಾರವರ್ಗದವರಿಗೇಕೆ ಈ ಮಾತು ಅರ್ಥವಾಗುತ್ತಿಲ್ಲ? ಅರ್ಥಮಾಡಿಕೊಳ್ಳಬಯಸುವವರಿಗೆ ಇಲ್ಲಿದೆ— ವಿಚಾರ.

ಸಿಂಧುವಳ್ಳಿ ಬಾಲಸುಬ್ರಹ್ಮಣ್ಯಂ
ರೀಡರ್, ಡಿ. ಬನುಮಯ್ಯ ಕಾಲೇಜು
ಮೈಸೂರು

ಜನರ ಭಾಷೆಯಲ್ಲಿ ಆಡಳಿತವನ್ನು ನಡೆಸುವುದು ಪ್ರಜಾತಂತ್ರದ ಆವಶ್ಯಕತೆಗಳಲ್ಲೊಂದು. ಹಂತ ಹಂತವಾಗಿ ತಾಲ್ಲೂಕು ಮಟ್ಟದ ಎಲ್ಲಾ ಕಛೇರಿಗಳಲ್ಲಿ ಉಪವಿಭಾಗದ ಕಛೇರಿಗಳಲ್ಲಿ, ಅಂತೆಯೇ ಎಲ್ಲ ಕಛೇರಿಗಳಲ್ಲಿ ಕನ್ನಡ ಕಡ್ಡಾಯವಾಗಿ ಬಳಕೆ ಆಗಬೇಕೆಂಬ ಆದೇಶದ ಅನ್ವಯ ಕನ್ನಡ ರಾಜ್ಯ ಭಾಷೆಯಾಗಿ ಕಾರ್ಯನಿರ್ವಹಿಸುತ್ತಿದೆ. ರಾಜ್ಯ ಸರ್ಕಾರದ ಕಛೇರಿಗಳಲ್ಲಿ ಕನ್ನಡದ ಬಳಕೆ ಆಗುವುದು ವಿಶೇಷವೇನಲ್ಲ. ರಾಜ್ಯದಲ್ಲಿರುವ ಕೇಂದ್ರಸರ್ಕಾರದ ಕಛೇರಿಗಳಲ್ಲಿ ಕೂಡ ಕನ್ನಡದ ಬಳಕೆಯಾಗಬೇಕು, ಕೇಂದ್ರ ಸರ್ಕಾರದ ಕಛೇರಿಗಳು ಅಖಿಲಭಾರತ ವ್ಯಾಪ್ತಿಯುಳ್ಳವು, ನಿಜ. ಆದರೆ ಸ್ಥಳೀಯವಾಗಿ ಕಾರ್ಯನಿರ್ವಹಿಸುವ ಆ ಕಛೇರಿಗಳು ಹೆಚ್ಚಿನ ಜನಸಂಪರ್ಕ ಬೆಳೆಸಿಕೊಳ್ಳಬೇಕಾದರೆ ಕನ್ನಡದಲ್ಲಿ ವ್ಯವಹರಿಸುವುದು ಅನುಕೂಲಕರ. ಮೈಸೂರು ನಗರದಲ್ಲಿ ಕೇಂದ್ರಸರ್ಕಾರದ ಇಪ್ಪತ್ತು ಕಛೇರಿಗಳಿವೆ, ಸಂಸ್ಥೆಗಳಿವೆ. ಇವುಗಳಲ್ಲಿ ಎಲ್ಲವೂ ನೇರ ಜನಸಂಪರ್ಕ ಬೀರದಿರಬಹುದು. ಸಾಮಾನ್ಯ ಜನರಿಗೂ ಹತ್ತಿರವಾಗಿರುವ ಜೀವವಿಮಾ ನಿಗಮದಂತಹ ಸಂಸ್ಥೆಯಲ್ಲಿ ಮುಖಾಮುಖಿ ವ್ಯವಹಾರದಲ್ಲಿ ಆಗುವ ಕನ್ನಡದ ಬಳಕೆ ಬಿಟ್ಟರೆ ಆ ಸಂಸ್ಥೆ ಬಳಸುವ ನಮೂನೆಗಳು ಇಂಗ್ಲಿಷಿನಲ್ಲಿವೆ, ವಿಮೆ ಇಳಿಸಲಿಚ್ಛಿಸುವ ಅನಕ್ಷರಸ್ಥನೊಬ್ಬನಿಗೆ ಅಥವಾ ಇಂಗ್ಲಿಷ್ ಬಾರದವನಿಗೆ ಅರ್ಜಿ ನಮೂನೆಯಲ್ಲಿರುವ ವಿವರಗಳನ್ನು ತಿಳಿಸಲು ದುಬಾಷಿಯೊಬ್ಬ ಇರಲೇಬೇಕು, ಅಂತೆಯೇ ಕೇಂದ್ರ ಅಬ್ಕಾರಿ ಸುಂಕ ಕೊಡುವ ಸ್ಥಳೀಯ ವ್ಯಾಪಾರಿಗೆ ತಾನು ತುಂಬಿಕೊಡಬೇಕಾದ ನಮೂನೆಗಳು ಇಂಗ್ಲಿಷ್ ಅಥವಾ ಹಿಂದಿಯಲ್ಲಿರುವುದರ ಔಚಿತ್ಯವೇನು?

ಆಡಳಿತದಲ್ಲಿ ಕನ್ನಡ ಹೊಸದೇನಲ್ಲ. ತಾಲ್ಲೂಕು ಕಛೇರಿ ವ್ಯವಹಾರಗಳು ಬಹಳ ಕಾಲದಿಂದ ಕನ್ನಡದಲ್ಲೇ ನಡೆದುಬಂದಿವೆ. ಬ್ರಿಟಿಷರ ಕಾಲದಲ್ಲೂ ಆಡಳಿತಾನುಕೂಲದ ದೃಷ್ಟಿಯಿಂದ ಸ್ಥಳೀಯ ಭಾಷೆಗಳಿಗೆ ಅವಕಾಶವಿತ್ತು, ನಮೂನೆಗಳು ಕನ್ನಡದಲ್ಲಿರುತ್ತಿದ್ದುವು, ಭಾರತದಲ್ಲೇ ಬಹುಶಃ ಅತ್ಯಂತ ಹಳೆಯ ವಿಮಾ ಕಂಪೆನಿಯಾದ ಓರಿಯಂಟಲ್ ಇನ್‌ಶೂರೆನ್ಸ್ ಕಂಪೆನಿಯವರು ನಮೂನೆಗಳನ್ನು ವಿಮಾಕಂತಿನ ವಿವರಗಳ ಪುಸ್ತಕಗಳನ್ನು ಕನ್ನಡದಲ್ಲಿ ಮುದ್ರಿಸಿ ಬಳಕೆಯಲ್ಲಿಟ್ಟಿದ್ದರು. ಆದರೆ 1956 ರಲ್ಲಿ ಜೀವವಿಮಾ ನಿಗಮವಾದ ನಂತರ ಕನ್ನಡದ ನಮೂನೆಗಳೆಲ್ಲ ವ್ಯಯವಾದುವು. ತನ್ನ ಸಂಶೋಧನೆಗಳ ವಿವರಗಳನ್ನು ಕನ್ನಡಿಗರಿಗೆ ತಿಳಿಯಪಡಿಸು... ವಷ್ಟುಮಟ್ಟಿಗಾದರೂ ಕೇಂದ್ರ ಆಹಾರ ಸಂಶೋಧ... ನಾಲಯ ಕನ್ನಡದಲ್ಲಿ 'ಆಹಾರವಿಜ್ಞಾನ' ಪ್ರಕಟಿಸು... ತ್ತಿದೆ. ಇನ್ನು ದೂರವಾಣಿ, ಆದಾಯತೆರಿಗೆ ಇಲಾಖೆಗಳಲ್ಲಿ ಕನ್ನಡ ಹೆಚ್ಚಿಗೆ ಬಳಕೆಗೆ ಬಂದಿಲ್ಲ... ದಿರುವುದು ಕಾಣುತ್ತದೆ. ಕೆಲವು ಕೇಂದ್ರ ಸರ್ಕಾರ... ಕಛೇರಿಗಳು ಹಿಂದಿ ಇಂಗ್ಲಿಷ್‌ಗಳಲ್ಲಿ ನಾಮಫಲಕ... ತೂಗಿಸುತ್ತಿವೆ. ಕನ್ನಡ ಅವುಗಳನ್ನು ಇನ್ನೂ... ತಲಪಿಲ್ಲ.

ಒಂದು ದೇಶದ ಆರ್ಥಿಕತೆಯ ಅಗತ್ಯ ಪೂರೈಕೆ... ಯಲ್ಲಿ ಬ್ಯಾಂಕುಗಳು ಪ್ರಮುಖಸ್ಥಾನ ಪಡೆದಿವೆ. ಇಂದಿನ ದಿನಗಳಲ್ಲಿ ವಾಣಿಜ್ಯ ಬ್ಯಾಂಕು ಒಂದು ದೇಶ... ದಲ್ಲಿ ಅನಿವಾರ್ಯ ಸಂಸ್ಥೆಯಾಗಿದೆ. ಅಧಿಕ ಉತ್ಪಾದ... ನೆಯೇಗುರಿಯಾಗುಳ್ಳ ಇಂದಿನಉತ್ಪಾದನವ್ಯವಸ್ಥೆಗೆ... ಬ್ಯಾಂಕುಗಳು ಸಾಲ ಸೌಲಭ್ಯ ನೀಡದಿದ್ದಲ್ಲಿ, ಆ... ಗುರಿಯ ಸಾಧನೆಯಾಗುವುದು ಕಷ್ಟ. ಬ್ಯಾಂಕುಗಳ... ಸರ್ವತೋಮುಖ ಬೆಳವಣಿಗೆಯಲ್ಲಿ ಮಾನವ... ಸಂಬಂಧಗಳ ಪಾತ್ರ ಹಿರಿದು. ಗ್ರಾಹಕ ಹತ್ತಿರ... ವಾದಂತೆ ಸಂಸ್ಥೆಯ ಮೇಲೆ ಅವನಿಗೆ ಅಭಿಮಾನ... ಬೆಳೆಯುತ್ತದೆ. ಈ ದಿಸೆಯಲ್ಲಿ ಅವನಿಗೆ ತಿಳಿಯುವ... ಭಾಷೆಯಲ್ಲಿ ಬ್ಯಾಂಕುಗಳು ವ್ಯವಹರಿಸುವುದು... ಆವಶ್ಯಕ, ಬ್ಯಾಂಕಿಂಗ್ ಪರಿಸರದಲ್ಲಿ ಕನ್ನಡ... ಬೇರೂರಬೇಕು. ಸಾಮಾನ್ಯ ಜನತೆಗೆ, ಅದರಲ್ಲೂ... ಸ್ವಂತ ಉದ್ಯೋಗಿಗಳು, ಸಣ್ಣ ವ್ಯಾಪಾರಿಗಳು... ಕೃಷಿಕರು ಇವರೆಲ್ಲರಿಗೆ ನೆರವು ಒದಗಿಸುವ...

[11ನೇ ಪುಟದಿಂದ ಮುಂದುವರಿದುದು]

ಬೇನಾಮಿ ವ್ಯವಹಾರಗಳ ಸುಗ್ರೀವಾಜ್ಞೆ

ಗಾಗಲಿ, ಮರಣ ಶಾಸನದ ಮೂಲಕ ಸ್ವತ್ತು ಪಡೆಯುವವರಿಗಾಗಲೀದರಿಂದ ಧಕ್ಕೆಯುಂಟಾಗಿಲ್ಲ. ಬೆಲೆಯುಳ್ಳ ಪ್ರತಿಫಲ ನೀಡಿದ ಯಾವುದೇ ವರ್ಗಾವಣೆ ಸ್ವೀಕರ್ತ ಬೇನಾಮಿದಾರನ ವಿರುದ್ಧ ಹಕ್ಕು ಸಾಧಿಸಲು ಯಾವ ಆತಂಕವೂ ಇಲ್ಲ.

ಸಾಮಾನ್ಯವಾಗಿ ಬೇನಾಮಿದಾರನು(ಳು) ಹತ್ತಿರದ ಸಂಬಂಧಿಗಳೇ ಆಗಿರುವುದರಿಂದಲೂ ಈ ಸುಗ್ರೀವಾಜ್ಞೆ ನಿರೀಕ್ಷಿತ ಪರಿಣಾಮಗಳನ್ನು ನೀಡಲಾರದು. ಒಂದು ವೇಳೆ ಬೇನಾಮಿದಾರ ವಾಸ್ತವ ವ್ಯಕ್ತಿಯಾಗಿರದೇ ಕಾಲ್ಪನಿಕವಾಗಿದ್ದರೆ ಈ ಸುಗ್ರೀವಾಜ್ಞೆ ಅನ್ವಯವಾಗುವುದಿಲ್ಲ. ಬಹುಶಃ ಇದು ಕಾಲ್ಪನಿಕ ಬೇನಾಮಿದಾರರುಗಳನ್ನು ಸೃಷ್ಟಿಸುವ ದಿಸೆಯಲ್ಲಿ ಪ್ರೋತ್ಸಾಹ ನೀಡಿದಂತಾಗುವುದೋ ಏನೋ ? ಈ ಎಲ್ಲ ದೃಷ್ಟಿಯಿಂದ ಸುಗ್ರೀವಾಜ್ಞೆಯ ಮುಖ್ಯ ಉದ್ದೇಶವೇ ವಿಫಲವಾಗುವ ಸಾಧ್ಯತೆಗಳನ್ನು ಸಂಪೂರ್ಣವಾಗಿ ಅಲ್ಲಗಳೆಯುವಂತಿಲ್ಲ. ★

[10ನೇ ಪುಟದಿಂದ ಮುಂದುವರಿದುದು]

ಸಾಧನಶೀಲ ಬ್ಯಾಂಕರುಗಳಿಗೆ ಸನ್ಮಾನ

ವಾರ್ಷಿಕ ಕಾರ್ಯಕ್ರಮವಾಗಬೇಕು. ಸಾಧನಶೀಲ... ಬ್ಯಾಂಕರುಗಳ ಈ ರೀತಿಯ ಸನ್ಮಾನ ಹೊ... ಸಂಸ್ಕೃತಿಯಿಂದ ಕೂಡಿದ ಬ್ಯಾಂಕರುಗಳ ಹೊ... ವರ್ಗವೊಂದನ್ನು ಖಂಡಿತ ಸೃಷ್ಟಿಸುತ್ತದೆ, ವ್ಯ... ಸ್ಥಾಪಕರು ಮತ್ತು ಕ್ಷೇತ್ರ ಸಿಬ್ಬಂದಿ ಸನ್ಮಾ... ಪಡೆಯಲು ಅಗತ್ಯವಾದ ಮಾನಕಗಳನ್ನು ಪೂರ... ಸಲು ಯತ್ನಿಸುತ್ತಾರೆ. ಬೃಹತ್ ಪ್ರಮಾಣದ... ಈ ಜಾಗೃತಿಯನ್ನು ಉಂಟುಮಾಡಿದಾಗ ಗ್ರಾಹ... ಸೇವೆ ಉತ್ತಮಗೊಳ್ಳುತ್ತವೆ, ದೂರುಗಳು ಕಡಿಮೆ... ಯಾಗುತ್ತವೆ ಮತ್ತು ಬ್ಯಾಂಕ್ ಶಾಖೆಗಳು ದಕ್ಷ... ಯಿಂದ ಕೆಲಸ ಮಾಡುತ್ತವೆ. ★

ಸರ್ಕಾರದ ಯೋಜನೆಗಳಲ್ಲಿ ಸಹಭಾಗಿಯಾಗುವ ಬ್ಯಾಂಕುಗಳು, ಆ ವರ್ಗಕ್ಕೆ ಅರ್ಥವಾಗುವ ಭಾಷೆಯಲ್ಲಿ ವ್ಯವಹರಿಸಬೇಕಾದ್ದು ಅನಿವಾರ್ಯ, ಅನುಕೂಲ. ಬ್ಯಾಂಕಿನ ದಿನವಹಿ ವ್ಯವಹಾರಗಳಲ್ಲಿ ಬಳಕೆಯಾಗುವ ನಮೂನೆಗಳು, ಚಲನ್‌ಗಳು, ಚೆಕ್ಕುಗಳು, ಪಾಸು ಪುಸ್ತಕ ಕನ್ನಡದಲ್ಲಿರುವುದರ ಅನುಕೂಲಗಳನ್ನು ಯಾರೂ ಉತ್ಪ್ರೇಕ್ಷಿಸಬೇಕಿಲ್ಲ. ಇಂಗ್ಲಿಷಿನಲ್ಲಿರುವ ಪಾರಿಭಾಷಿಕ ಪದಗಳಿಗೆ ಕನ್ನಡ ಪದಗಳ ಸೃಷ್ಟಿಯಾಗಿ ಬಳಕೆಗೆ ಬರಬೇಕು.

ಪರಿಭಾಷೆ

ನಮ್ಮ ಬಹುಪಾಲು ಪದಗಳ ಪರಿಕಲ್ಪನೆಗಳ ಮೂಲ ಇಂಗ್ಲಿಷ್ ಭಾಷೆಯಲ್ಲಿದೆ. ಆ ಮೂಲ ಅರ್ಥವನ್ನು ಕನ್ನಡದಲ್ಲಿ ಔಚಿತ್ಯಪೂರ್ಣವಾಗಿ ಬಳಸಬೇಕು. ಕನ್ನಡವನ್ನು ಬದುಕಿನ ಎಲ್ಲ ಅಂಗಗಳಲ್ಲಿ ಸಮರ್ಥವಾಗಿ ಬಳಸುವ ಪ್ರಯತ್ನದಲ್ಲಿರುವ ನಮಗೆ ಇಂದು ಇಂಗ್ಲಿಷ್ ಪದಗಳಿಗೆ, ನುಡಿಗಟ್ಟುಗಳಿಗೆ ಮತ್ತು ಪರಿಶೀಲನೆಗಳಿಗೆ ಸರಿಸಮನಾದ ಪದಸಂಪತ್ತನ್ನು ಬಳಸುವುದುದು ಅನಿವಾರ್ಯ.

ತಜ್ಞರು ವಿಷಯವಿವರಣೆಗೆ, ಸಂವಹನಕ್ಕೆ ಬಳಸುವ ವಿಶಿಷ್ಟ ಪದಗಳು ಪಾರಿಭಾಷಿಕ ಪದಗಳು. ಅರ್ಥವೈಶಾಲ್ಯ, ಸ್ಪಷ್ಟತೆ, ನಿರ್ದುಷ್ಟತೆ, ಸರಳತೆ, ಸಾರ್ವಜನಿಕ ಸ್ವೀಕಾರ ಇವು ಇವುಗಳಲ್ಲಿರಬೇಕಾದ ಗುಣಗಳು. ಈ ದಿಸೆಯಲ್ಲಿ ಭಾಷೆಯ ಮರ್ಯಾದೆಗೆ ಭಂಗಬಾರದಂತೆ, ವಾಕ್ಯದ ಶಿಲ್ಪ ಕೆಡದಂತೆ, ಬೇರೆ ಭಾಷೆಗಳಿಂದ ಶಬ್ದ ಪಡೆಯಬಹುದು. ಈ ರೀತಿ ಪಡೆದ ಪದಗಳು ಮೂಲದ ಖಚಿತತೆಯನ್ನು ಉಳಿಸಿಕೊಳ್ಳುವುದರ ಜೊತೆಗೆ ಕನ್ನಡದ ಜಾಯಮಾನಕ್ಕೆ ಹೊಂದುವಂತಿರಬೇಕು.

ಪಾರಿಭಾಷಿಕ ಪದಗಳಿಗೆ ಕನ್ನಡದಲ್ಲಿ ಸಮಾನ ಪದಗಳನ್ನು ರೂಪಿಸುವುದು ಕಷ್ಟವಲ್ಲ. ಅನೇಕ ಸಹಕಾರಿ ಬ್ಯಾಂಕುಗಳು ತಮ್ಮ ಚಲನ್‌ಗಳು, ರಸೀತಿಗಳು, ಲೆಕ್ಕಪುಸ್ತಕಗಳನ್ನು ಕನ್ನಡದಲ್ಲೇ ರೂಪಿಸಿಕೊಂಡಿವೆ. ಸಹಕಾರಿ ಬ್ಯಾಂಕುಗಳ ವಿಧಾನವನ್ನೇ ರಾಜ್ಯದಲ್ಲಿ ಅನುಸರಿಸುವ ಬ್ಯಾಂಕುಗಳೂ ಇತರ ಸಂಸ್ಥೆಗಳೂ ರೂಪಿಸಿಕೊಳ್ಳಬಹುದು. ಈ ದಿಸೆಯಲ್ಲಿ ಭಾರತೀಯ ಸ್ಟೇಟ್ ಬ್ಯಾಂಕು ಮತ್ತು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಬಳಸುತ್ತಿರುವ ನಮೂನೆಗಳ ಮಾದರಿಗಳು ಅನುಕರಣೀಯವಾಗಿವೆ.

ಪಾರಿಭಾಷಿಕ ಶಬ್ದಗಳ ಸೃಷ್ಟಿಕಾರ್ಯ ಹೆಚ್ಚಿನ ತೊಡಕುಗಳನ್ನೊಡ್ಡುವುದಿಲ್ಲ. ಈ ಸಂದರ್ಭದಲ್ಲಿ ಮೂರು ಮಾತುಗಳು ಗಮನಾರ್ಹ. ಎಲ್ಲಿ ಈಗಾಗಲೇ ಪದಗಳು ನಮ್ಮಲ್ಲಿ ಬಳಕೆಯಲ್ಲಿವೆಯೋ ಅಲ್ಲಿ ಅವನ್ನೇ ಬಳಸುವುದು. ಎರಡನೆಯದಾಗಿ, ಜನರಲ್ಲಿ ರೂಢಿಯಲ್ಲಿರುವ ಪದಗಳನ್ನು ಸ್ವೀಕರಿಸಿ ಅವುಗಳಿಗೆ ಹೊಸ ಅರ್ಥಗಳನ್ನು ತುಂಬಿ ಚಲಾವಣೆಗೆ ತರುವುದು. ಇತರ ಭಾಷೆಗಳಿಂದ (ಹೆಚ್ಚಾಗಿ ಸಂಸ್ಕೃತದಿಂದ) ಪದಗಳನ್ನು ತೆಗೆದುಕೊಳ್ಳುವುದು ಮೂರನೇ ಮಾರ್ಗ. ಉರ್ದು, ಪರ್ಷಿಯನ್, ಹಿಂದಿ, ಮರಾಠಿ ಇಂಗ್ಲಿಷ್ ಪದಗಳು ಈಗಾಗಲೇ ಬಳಕೆಯಲ್ಲಿವೆ. ಚೆಕ್ಕು, ಡ್ರಾಫ್ಟು ಪಾಸ್‌ಪುಸ್ತಕ ಹೀಗೆ ಅನೇಕ ಪದಗಳು ಕನ್ನಡೀಕರಣಗೊಂಡಿವೆ.

ಮುಂಕ್ಕಣ್ಣ ರಾಗಬೇಕು

ಪಾರಿಭಾಷಿಕ ಪದಗಳನ್ನು ರೂಪಿಸುವಲ್ಲಿ ಸ್ಥಳೀಯ ದೃಷ್ಟಿಯ ಜೊತೆಗೆ ರಾಜ್ಯದ, ರಾಷ್ಟ್ರದ ಹಾಗೂ ಅಂತರರಾಷ್ಟ್ರೀಯ ದೃಷ್ಟಿ ಸಾಧ್ಯವಾದಷ್ಟುಮಟ್ಟಿಗೆ ಇಟ್ಟುಕೊಳ್ಳುವುದು ಅಗತ್ಯ. ರಾಜ್ಯದಲ್ಲಿರುವ ಬ್ಯಾಂಕುಗಳ ವ್ಯವಹಾರ ಭಾಷೆ ಕನ್ನಡವೇ ಆದಾಗ ದೊರೆಯುವ ಅನುಕೂಲಗಳ ಬಗ್ಗೆ ಎರಡು ಮಾತಿಲ್ಲ. ಕೇಂದ್ರ ಸರ್ಕಾರದ ನಿರ್ದೇಶನಾಲಯ ಪ್ರಕಟಿಸಿರುವ Consolidated Glossary of Technical Terms ನಿಂದ ಪದಗಳನ್ನು ಆಯ್ದುಕೊಳ್ಳುವುದರಲ್ಲಿ ತಪ್ಪಿಲ್ಲ. ಆದರೆ ಆಯ್ದುಕೊಂಡ ಪಾರಿಭಾಷಿಕ ಪದಗಳು ಕನ್ನಡದ ಜಾಯಮಾನಕ್ಕೆ ಹೊಂದಬೇಕಷ್ಟೆ. ಇಂಗ್ಲಿಷ್ ಪದಗಳನ್ನು ಕನ್ನಡಕ್ಕೆ ತರುವಾಗ ಕೆಲವು ಸಾರಿ ಬೇರೆ ಬೇರೆ ಪ್ರಯೋಗಗಳು ಕಂಡುಬರುತ್ತವೆ. ಈ ಪ್ರಯೋಗಗಳಲ್ಲಿ ಏಕರೂಪತೆ ಅಗತ್ಯ. ಇಂಗ್ಲಿಷಿನ ಎಷ್ಟೋ ಪಾರಿಭಾಷಿಕ ಪದಗಳಿಗೆ ಸೂಕ್ತ ಕನ್ನಡ ಪದಗಳು ಸಿಗದಿರಬಹುದು. ವಿವರಣಾತ್ಮಕ ಪ್ರಯೋಗ ಅನಿವಾರ್ಯ. ಏಕೆಂದರೆ ಪದಕ್ಕೆ ಪದ ಅರ್ಥ ನೀಡುವುದರ ಜೊತೆಗೆ ಒಂದು ಮೂಲಪದದ ಪರಿಕಲ್ಪನೆ ತಿಳಿಯಬೇಕು. 'ಬ್ಯಾಂಕ್' ಎಂಬ ಪದಕ್ಕೆ ಧನಕೋಠಿ ಎಂಬ ಪರ್ಯಾಯ ಪದ ನೀಡಿದರೆ ಬ್ಯಾಂಕಿನ ಕಲ್ಪನೆ ಸಂಪೂರ್ಣವಾಗಲಾರದು. ಹಣ ಶೇಖರಣೆಯಷ್ಟೇ ಬ್ಯಾಂಕು ಮಾಡುವ ಕೆಲಸವಲ್ಲ, ಆದ್ದರಿಂದ ಮೂಲಪದವಾದ 'ಬ್ಯಾಂಕ್'ನ ಪರಿಕಲ್ಪನೆಯನ್ನು, ಅರ್ಥವ್ಯಾಪ್ತಿಯನ್ನು ತಿಳಿಸಬೇಕಾದರೆ ಬ್ಯಾಂಕ್ ಪದ ಹಾಗೆಯೇ ಕನ್ನಡದಲ್ಲಿ ಬಳಕೆಯಾಗುತ್ತದೆ. ಕನ್ನಡದ ಜಾಯಮಾನಕ್ಕನುಗುಣವಾಗಿ 'ಬ್ಯಾಂಕು' ಎಂದಾಗಿದೆ. ಅಂತೆಯೇ ಚೆಕ್ ಎಂಬುದು ಕೇವಲ ಧನಾದೇಶವಲ್ಲ. ಅದು ಒಂದು ಪರಕ್ರಾಮ್ಯ ಸಂಲೇಖ, ಒಬ್ಬರಿಂದೊಬ್ಬರಿಗೆ ವರ್ಗಾವಣೆ ಮೂಲಕ ಕಾನೂನುಬದ್ಧ ಹಕ್ಕು ನೀಡುವ ಸಂಲೇಖ. ಆದ್ದರಿಂದ ಚೆಕ್ಕಿಗೆ ಪರ್ಯಾಯ ಪದ ಕನ್ನಡದಲ್ಲಿ 'ಚೆಕ್ಕು' ಆಗುತ್ತದೆ. ಹೀಗೆಂದು ನಾವು ಮೂಲಪದಗಳಿಗೆ ಉಕಾರ ಸೇರಿಸಿ ಕನ್ನಡದಲ್ಲಿ ಮೂಡಿಸಲು ಸಂವಾದಿಯಾದ ಪದಕ್ಕಾಗಿ ಚಿಂತನೆ ಮಾಡಬೇಕು, ತಿಣುಕಬೇಕು, ಹಾಗೂ ಸೂಕ್ತಪದ ಸಿಗದಿದ್ದರೆ ಮೂಲಪದವನ್ನೇ ಕನ್ನಡೀಕರಿಸಬಹುದು. ಉದಾಹರಣೆಗೆ ಪಾಸ್ ಬುಕ್, ಸಾಗಾಟ ಪುಸ್ತಕ ಎನಿಸಿಕೊಳ್ಳುವುದರ ಬದಲು ಪಾಸ್ ಪುಸ್ತಕವಾಗಬಹುದು.

ರೆಕರಿಂಗ್ ಡಿಪಾಸಿಟ್ ಸಂಚಿತ ಠೇವಣಿಯಾಗುತ್ತದೆ. ಎಂದರೆ ಕೂಡಿಕೊಳ್ಳುವುದು, ಸೇರಿಕೊಳ್ಳುವುದು, ಅಂದರೆ ಸಂಚಿತವಾಗುವುದು. ರೆಕರಿಂಗ್ ಡಿಪಾಜಿಟ್ ಕಾಲದಿಂದ ಕಾಲಕ್ಕೆ ಕೂಡಿಕೊಂಡು ಹೋಗುತ್ತದೆ. ಆದುದರಿಂದ ಅದು ಸಂಚಿತ ಠೇವಣಿ.

ಮೂಲಪದದ ಪರಿಕಲ್ಪನೆಯನ್ನು ಸುಲಭವಾಗಿ ವ್ಯಕ್ತಪಡಿಸುವ ಪದಗಳು ಸೃಷ್ಟಿಯಾಗುವುದುಂಟು. ಉದಾ: ಎಂಡಾರ್ಸ್‌ಮೆಂಟ್, 'ಎಂಡಾರ್ಸ್‌ಮ್' ಎಂದರೆ ಆನ್ ದಿ ಬ್ಯಾಕ್; ಅಂದರೆ ಬೆನ್ನು ಬರಹ ಅಥವಾ ಹಿಂಬರಹ. ಇದಕ್ಕಿಂತ ಸ್ಪಷ್ಟತೆ ಇನ್ನೇನು ಬೇಕು?

ಚಲನ್, ಜಮಾ ಚೀಟಿ ಅಥವಾ ಜಮಾ ಪತ್ರ ಎಂದಾಗ ಪರಿಪೂರ್ಣ ಅರ್ಥ ಕಾಣುತ್ತದೆ. ಚಲನ್‌ಗೆ ಇಲ್ಲದ ವಿಶೇಷ ಅರ್ಥ ನಾವು ಕಲ್ಪಿಸಲು ಹೋಗಬಾರದು. ಸಂಸ್ಥೆಗಳನ್ನು ಕನ್ನಡಿಸುವಾಗ ನಾನ್‌,—ಟ್ರೇಡಿಂಗ್ ಎನ್ನುವುದಕ್ಕೆ ಅವ್ಯಾಪಾರಿ ಎನ್ನುವ ಪದ ಹೇಳಬಹುದಾದರೂ ವ್ಯಾಪಾರೇತರ ಎನ್ನುವುದು ಹೆಚ್ಚು ಸಮರ್ಪಕ.

ಕನ್ನಡದಲ್ಲಿ ಪಾರಿಭಾಷಿಕ ಪದಗಳು ರೂಪುಗೊಂಡಾಗ ಸ್ವಲ್ಪ ವಿಚಿತ್ರ ಎನಿಸಿದರೂ ಬಳಕೆಯಾದಂತೆ ಅವು ಕನ್ನಡ ಭಾಷೆಗೆ ಹೊಂದಿಕೊಳ್ಳುತ್ತವೆ. ಸರ್ವೇ–ಸರ್ವೇಕ್ಷಣ, ನೆಗೋಷಿಯೆಬಲ್—ಪರಕ್ರಾಮ್ಯ. ಪೋಲಿಯೋ–ಪಾನು, ಟ್ರಸ್ಟ್–ನ್ಯಾಸ, ಇನ್ನೋವೇಷನ್–ನವೋನ್ಮೇಷ, ಜಜ್‌ಮೆಂಟ್ ಕ್ರೆಡಿಟರ್–ತೀರ್ಪುಸಾಲಿಗ, ಪೋಸ್ಟ್‌ಡೇಟೆಡ್–ಅನಾಗತ, ಕ್ಲಿಯರಿಂಗ್ ಹೌಸ್–ತೀರುವೆ ಮನೆ, ಲಿಕ್ವಿಡೇಷನ್–ಅವಸಾಯನ, ಸ್ಟ್ರಾಂಗ್ ರೂಂ–ಸುಭದ್ರ ಕೊಠಡಿ ಇತ್ಯಾದಿ.

ಚಿಂತನೆ ಯಾವ ಭಾಷೆಯಲ್ಲಿ?

ಬ್ಯಾಂಕಿಂಗ್ ಕ್ಷೇತ್ರ ಶಕ್ತಿಯುತವಾದ ಕ್ಷೇತ್ರ. ಬ್ಯಾಂಕಿಂಗ್ ಸೇವೆಗಳ ವ್ಯಾಪ್ತಿ ವಿಸ್ತಾರವಾಗುತ್ತಿದೆ, ವೈವಿಧ್ಯಮಯವಾಗುತ್ತಿದೆ. ಇವುಗಳನ್ನು ರಾಜ್ಯ ಭಾಷೆಯಲ್ಲಿ ವ್ಯಕ್ತಪಡಿಸಲು ಹೊಸಹೊಸ ಪಾರಿಭಾಷಿಕ ಪದಗಳು, ಪರಿಕಲ್ಪನೆಗಳು ಹುಟ್ಟಿಕೊಳ್ಳುತ್ತಿವೆ. ಈ ದಿಸೆಯಲ್ಲಿ ನಡೆಯುವಾಗ ಚಿಂತನೆ ಕನ್ನಡದಲ್ಲಿ ಆಗುವುದು ಅಗತ್ಯ. ವೈಜ್ಞಾನಿಕ ವಿಷಯಗಳಿಗೆ ಸಂಬಂಧಿಸಿದಂತೆ ಪಾರಿಭಾಷಿಕ ಪದಗಳನ್ನು ರೂಪಿಸುವ ರೀತಿಯಲ್ಲಿ ಬ್ಯಾಂಕು ವಿಷಯಗಳಿಗೆ ಸಂಬಂಧಿಸಿದ ಪಾರಿಭಾಷಿಕ ಪದಗಳನ್ನು ರೂಪಿಸುವುದು ಸಾಧ್ಯವಿಲ್ಲ. ವಿಷಯದ ಪರಿಕಲ್ಪನೆ, ಚಿಂತನೆ ನಮ್ಮ ಭಾಷೆಯಲ್ಲಿ ವ್ಯಕ್ತವಾದಾಗ ಮಾತ್ರ ಪಾರಿಭಾಷಿಕ ಶಬ್ದಗಳ ಸೃಷ್ಟಿ ಸುಲಭವಾಗುತ್ತದೆ.

ಅಧಿಕೃತ ಭಾಷೆಯೆಂದರೆ ಹಿಂದಿಯೊಂದೇ ಎಂಬ ಧೋರಣೆ ತಳೆಯುವ ಕೆಲವು ರಾಷ್ಟ್ರೀಕೃತ ಬ್ಯಾಂಕುಗಳು ಕೇಂದ್ರ ಸರ್ಕಾರವನ್ನು ಓಲೈಸಲು ಹಿಂದಿಯನ್ನು ಬಳಸಿ, ಕರ್ನಾಟಕದಲ್ಲಿ ಅನಗತ್ಯವಾದರೂ ನಮೂನೆಗಳನ್ನು ಹಿಂದಿಯಲ್ಲಿ ಅಚ್ಚು ಹಾಕಿಸಿ,

ಅಸ್ವಸ್ಥ ಕೈಗಾರಿಕಾ ಕಂಪನಿಗಳ [ವಿಶೇಷ ಉಪಬಂಧಗಳ] ಅಧಿನಿಯಮ 1985

ಭಾರತದಲ್ಲಿರುವ ಅಸ್ವಸ್ಥ ಕೈಗಾರಿಕಾ ಘಟಕಗಳನ್ನು ಕುರಿತ ಅಂಕಿ–ಅಂಶಗಳನ್ನು ಗಮನಿಸಿದರೆ ಯಾರಿಗೂ ಗಾಬರಿಯಾಗದಿರದು. ಇವುಗಳ ಶುಶ್ರೂಷೆಯ ಕಾರ್ಯದಲ್ಲಿ ಸರಿಯಾದ ನಿರ್ಧಾರಗಳನ್ನು ಶೀಘ್ರವಾಗಿ ತೆಗೆದುಕೊಳ್ಳಲು ಅನುವಾಗುವಂತೆ ಸರ್ಕಾರ ಜಾರಿಗೆ ತಂದಿರುವ ಅಧಿನಿಯಮದ ರೂಪರೇಷೆ

ಟಿ. ಕೆ. ರಂಗನಾಥ

ಭಾರತೀಯ ಸ್ಟೇಟ್ ಬ್ಯಾಂಕ್, ಬೆಂಗಳೂರು

ಹಿನ್ನೆಲೆ

1984ರ ಡಿಸೆಂಬರ್ ಅಂತ್ಯದ ವೇಳೆಗೆ ಅಖಿಲ ಭಾರತ ಮಟ್ಟದ ಹಣಕಾಸು ಸಂಸ್ಥೆಗಳಿಂದ ಹಣಕಾಸು ಸಹಾಯ ಪಡೆದ ಕೈಗಾರಿಕಾ ಸಂಸ್ಥೆಗಳ ಪೈಕಿ 447 ಕೈಗಾರಿಕಾ ಸಂಸ್ಥೆಗಳು ಅಸ್ವಸ್ಥವೆಂದು ಪರಿಗಣಿಸಲ್ಪಟ್ಟಿದ್ದು, ಆ ಸಂಸ್ಥೆಗಳಿಂದ ಬರಬೇಕಾಗಿದ್ದ ಹಣ 822 ಕೋಟಿ ರೂಗಳು. ಭಾರತೀಯ ಕೈಗಾರಿಕಾ ಪುನರ್ನಿರ್ಮಾಣ ಬ್ಯಾಂಕ್ 151 ಕೈಗಾರಿಕಾ ಘಟಕಗಳಿಗೆ ಪುನರ್ನಿರ್ಮಾಣಕ್ಕಾಗಿ ನೀಡಿರುವ ಸಹಾಯ ಸುಮಾರು 77 ಕೋಟಿ ರೂಗಳು. ವಾಣಿಜ್ಯ ಬ್ಯಾಂಕುಗಳಿಂದ ಹಣ ಸಹಾಯ ಪಡೆದ 93,282 ಕೈಗಾರಿಕಾ ಘಟಕಗಳು ಅಸ್ವಸ್ಥವೆಂದು ಗುರುತಿಸಲ್ಪಟ್ಟು ಅವುಗಳಿಂದ ಬ್ಯಾಂಕ್‌ಗಳಿಗೆ ಬರಬೇಕಾಗಿದ್ದ ಬಾಕಿ 3.638 ಕೋಟಿ ರೂಗಳು. 1986ರ ಜೂನ್ ಅಂತ್ಯದ ವೇಳೆಗೆ ಅಸ್ವಸ್ಥ ಕೈಗಾರಿಕಾ ಘಟಕಗಳ ಸಂಖ್ಯೆ 1,30,606ಕ್ಕೆ ಏರಿದ್ದು 4.665 ಕೋಟಿರೂಗಳಷ್ಟು ಹಣ ಅವುಗಳಲ್ಲಿ ತೊಡಗಿಸಲಾಗಿತ್ತು. ಇದು ಅಂದು ಬ್ಯಾಂಕುಗಳು ನೀಡಿದ್ದ ಒಟ್ಟು ಉದರಿಯ ಶೇ. 8.4ರಷ್ಟು ಹಾಗೂ ಕೈಗಾರಿಕಾ ಕ್ಷೇತ್ರಕ್ಕೆ ನೀಡಿದ ಉದರಿಯ ಶೇ. 17.1%ರಷ್ಟು ಆಗಿತ್ತು. ಭಾರತೀಯ ರಿಸರ್ವ್ ಬ್ಯಾಂಕ್‌ನ ಜೂನ್ 1988ರ ವಾರ್ಷಿಕ ವರದಿಯ ಪ್ರಕಾರ 1,60,000 ಅಸ್ವಸ್ಥ ಕೈಗಾರಿಕಾ ಘಟಕಗಳಿದ್ದು 5,737.88 ಕೋಟಿ ರೂಗಳಷ್ಟು ಬ್ಯಾಂಕುಗಳ ಹಣ ಅವುಗಳಲ್ಲಿ ತೊಡಗಿಸಲಾಗಿದೆ. ಈ ಘಟಕಗಳಲ್ಲಿ ಮಧ್ಯಮ ಮತ್ತು ದೊಡ್ಡ ಕೈಗಾರಿಕಾ ಘಟಕಗಳ ಸಂಖ್ಯೆ ಕೇವಲ 1.1ರಷ್ಟಿದ್ದಾಗ್ಯೂ ಅವುಗಳಲ್ಲಿ ತೊಡಗಿಸಿದ ಹಣ ಶೇ. 73.12ರಷ್ಟು ಎಂದು ತಿಳಿಸುತ್ತದೆ. ಈ ಅಂಕಿ ಸಂಖ್ಯೆಗಳು ಬ್ಯಾಂಕು ಗ್ರಾಹಕರಲ್ಲಿ ಗಾಬರಿಯನ್ನುಂಟುಮಾಡಿವೆ. ಭಾರತದ ಬ್ಯಾಂಕಿಂಗ್ ಸಂಸ್ಥೆಗಳು ಕರಡುಸಾಲಕ್ಕಾಗಿ ತೆಗೆದಿರಿಸಿದ ಮೀಸಲನ್ನು ರಹಸ್ಯವಾಗಿಡಲು ಶಾಸನ ಸಮ್ಮತಿ ಇರುವುದರಿಂದಾಗಿ ಬ್ಯಾಂಕ್ ಠೇವಣಿದಾರರಿಗೆ ಸರಿಯಾದ ಮಾಹಿತಿ ದೊರೆಯದೆ ಅವರಲ್ಲಿ ಬ್ಯಾಂಕುಗಳ ಜೀವಂತಿಕೆಯ ಬಗ್ಗೆ ಚಿಂತೆ ಮೂಡಿದೆ. ಅಸ್ವಸ್ಥ ಕೈಗಾರಿಕೆಗಳ ಶುಶ್ರೂಷೆಯಲ್ಲಿ ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳುವುದಕ್ಕೆ ಎಷ್ಟು ಮಹತ್ವವಿದೆಯೋ, ಶೀಘ್ರನಿರ್ಧಾರಗಳನ್ನು ತೆಗೆದುಕೊಳ್ಳುವುದಕ್ಕೆ ಅದಕ್ಕೂ ಹೆಚ್ಚು ಮಹತ್ವವಿದೆಯೆಂಬ ಅಂಶವನ್ನು ಹಲವರು ಮನಗಾಣದಿರಬಹುದು. ಇತ್ತೀಚೆಗೆ ಈ ನಿಟ್ಟಿನಲ್ಲಿ ಸರಕಾರ ತೆಗೆದುಕೊಂಡ ಕ್ರಮದ ಫಲವೇ "ಕೈಗಾರಿಕಾ ಕಂಪನಿಗಳ (ವಿಶೇಷ ಉಪಬಂಧಗಳ) ಅಧಿನಿಯಮ"ದ ಅಡಿಯಲ್ಲಿ "ಕೈಗಾರಿಕಾ ಹಾಗೂ ವಿತ್ತೀಯ ಪುನರ್ನಿರ್ಮಾಣ ಮಂಡಳಿ"ಯ ರಚನೆ. ಈ ಅಧಿನಿಯಮದ ಮಹತ್ವವನ್ನು ಹಾಗೂ ಮಂಡಳಿಯ ಕಾರ್ಯವಿಧಾನವನ್ನು ಪರಿಚಯಿಸುವುವೇ ಈ ಕಿರುಲೇಖನದ ಉದ್ದೇಶ.

ಪ್ರವೇಶ

ಈ ಅಧಿನಿಯಮದ ಪ್ರಸ್ತಾವನೆಯಲ್ಲಿ ಅಧಿನಿಯಮವನ್ನು ಜಾರಿಗೆ ತರುವುದರ ಉದ್ದೇಶವನ್ನು ಕೆಳಕಂಡಂತೆ ವಿವರಿಸಲಾಗಿದೆ:

"ಸಾರ್ವಜನಿಕ ಹಿತಾಸಕ್ತಿಯಿಂದ ಅಸ್ವಸ್ಥ ಹಾಗೂ ಅಂತಸ್ಥ ಅಸ್ವಸ್ಥತೆಯ (potentially sick) ಕೈಗಾರಿಕಾ ಘಟಕಗಳ ಮಾಲೀಕತ್ವವುಳ್ಳ ಕಂಪನಿಗಳನ್ನು ಸಕಾಲದಲ್ಲಿ ಪತ್ತೆಹಚ್ಚುವುದು ಹಾಗೂ ಆ ಕಂಪನಿಗಳಿಗೆ ಸಂಬಂಧಿಸಿದಂತೆ ಪರಿಣತರ ಮಂಡಳಿಯೊಂದರಿಂದ ನಿವಾರಕ (preventive), ಸುಧಾರಕ (Ameliorative) ಹಾಗೂ ಪರಿಹಾರಕ (remedial) ಹಾಗೂ ಇತರೇ ಕ್ರಮಗಳನ್ನು ಶೀಘ್ರವಾಗಿ ನಿರ್ಧರಿಸುವುದಲ್ಲದೇ ತತ್ಸಂಬಂಧವಾದ ಹಾಗೂ ಪ್ರಾಸಂಗಿಕವಾದ ಕ್ರಮಗಳನ್ನು ಶೀಘ್ರವಾಗಿ ಜಾರಿಗೊಳಿಸುವ ಉದ್ದೇಶದಿಂದ ಈ ಅಧಿನಿಯಮವನ್ನು ಜಾರಿಗೆ ತರಲಾಗಿದೆ.

ಆಗಸ್ಟ್ 1985ರಲ್ಲಿ ಸಂಸತ್ತಿನಲ್ಲಿ ಮಂಡಿತವಾದ ಮಸೂದೆ ಡಿಸೆಂಬರ್ 1985ರಲ್ಲಿ ಸಂಸತ್ತಿನಿಂದ ಅಂಗೀಕಾರವಾಗಿ ಜನವರಿ 8, 1986ರಂದು

[ಹಿಂದಿನ ಪುಟದಿಂದ]

ಸರ್ಕಾರದಿಂದ ಪಾರಿತೋಷಕ ಪಡೆದುದುಂಟು. ಹಿಂದಿಯಾಗಲಿ, ಬೇರೆ ಯಾವುದೇ ಭಾಷೆಯಾಗಲಿ ಅದರ ಬಗ್ಗೆ ನಮಗೆ ದ್ವೇಷವಿಲ್ಲ. ಆದರೆ ಕನ್ನಡ ನಮ್ಮ ರಾಜ್ಯದಲ್ಲಿ ವ್ಯವಹಾರ ಭಾಷೆಯಾಗಬೇಕು. ರಾಜ್ಯ ಸರ್ಕಾರದ ಕಛೇರಿಗಳಲ್ಲಿ, ರಾಜ್ಯದಲ್ಲಿರುವ ಕೇಂದ್ರ ಸರ್ಕಾರದ ಕಛೇರಿಗಳಲ್ಲಿ, ಬ್ಯಾಂಕು ಮತ್ತಿತರ ಸಾರ್ವಜನಿಕ ಸೇವಾ ಸಂಸ್ಥೆಗಳಲ್ಲಿ ಕನ್ನಡ ಹೆಚ್ಚಾಗಿ ಬಳಕೆಯಾಗಬೇಕು ಎಂದು ಕಾರ್ಯನಿರತರಾದವರಿಗೆ ಸರ್ಕಾರ ಬೆಂಬಲ ನೀಡುವುದು ಅಗತ್ಯ. ಜೊತೆಗೆ ಬ್ಯಾಂಕುಗಳಲ್ಲಿನ ಸಿಬ್ಬಂದಿ ಕೂಡ ಕನ್ನಡ ಬಳಕೆಯಲ್ಲಿ ಆಸಕ್ತಿ ತೋರಬೇಕು. ಈ ದಿಸೆಯಲ್ಲಿ ಭಾರತೀಯ ಸ್ಟೇಟ್ ಬ್ಯಾಂಕಿನ ಸಮನ್ವಯ ಸಮಿತಿ ನಡೆಸುವ ದ್ವೈವಾರ್ಷಿಕ ಕಮ್ಮಟಗಳು, ಪ್ರಕಟಿಸಿರುವ ಬ್ಯಾಂಕಿಂಗ್ ನಿಘಂಟು, ತ್ರೈಮಾಸಿಕ 'ಬ್ಯಾಂಕಿಂಗ್ ಪತ್ರಿಕೆ' ಏಕಮೇವಾದ್ವಿತೀಯ ಎನಿಸಿಕೊಳ್ಳುತ್ತಿವೆ. ಬ್ಯಾಂಕೊಂದರ ಕೇಂದ್ರ ಕಛೇರಿ ಅಥವಾ ಆಡಳಿತ ಕಛೇರಿ ದೇಶದ ಯಾವುದೇ ಭಾಗದಲ್ಲಿದ್ದರೂ, ಬ್ಯಾಂಕಿನ ಶಾಖೆಗಳು ಕರ್ನಾಟಕದಲ್ಲಿ ಇರುವಾಗ, ಅಲ್ಲಿ ಕನ್ನಡ ವ್ಯವಹಾರ ಭಾಷೆಯಾಗಲೇಬೇಕು. ಬ್ಯಾಂಕನ್ನು ಶ್ರೀಸಾಮಾನ್ಯನ ಮನೆಬಾಗಿಲಿಗೆ ಕೊಂಡೊಯ್ಯುವ ಇಂದಿನ ಬದಲಾದ ಪರಿಸರದಲ್ಲಿ ಕನ್ನಡ ಸುಲಭ ಸಂವಹನ ಶಕ್ತಿಯಾಗಿ ಬೆಳೆಯುವುದು ಅಗತ್ಯ. ಕನ್ನಡ ಬಾರದ ಅಧಿಕಾರಿಗಳನ್ನು ಕರ್ನಾಟಕದ ಶಾಖೆಗಳಲ್ಲಿ ತಂದು ಕೂರಿಸುವುದು ಒಳ್ಳೆಯದೇನಲ್ಲ. ರಾಜ್ಯವೊಂದರ ಅಧಿಕೃತ ಭಾಷೆಯನ್ನು ಬ್ಯಾಂಕುಗಳಲ್ಲಿ ಆಡಳಿತ ಹಾಗೂ ವ್ಯವಹಾರಗಳ ಭಾಷೆಯಾದರೆ ನಮ್ಮ ರಾಷ್ಟ್ರೀಯ ಮನೋಭಾವಕ್ಕೆ ಕುಂದೇನೂ ಆಗುವುದಿಲ್ಲ.

★

ರಾಷ್ಟ್ರಪತಿಗಳಿಂದ ಅಂಗೀಕಾರ ಪಡೆದರೂ ಶಾಸನ ಸಂಪೂರ್ಣವಾಗಿ ಜಾರಿಗೆ ಬಂದುದು 15–3–1987 ರಂದು. ಆದರೆ ಪ್ರಕರಣ 15ರಿಂದ 34ನ್ನುಳಿದು ಇತರ ಪ್ರಕರಣಗಳು 12–1–1987ರಂದೇ ಜಾರಿಗೊಳಿಸಲ್ಪಟ್ಟವು. ಈ ಅಧಿನಿಯಮದ ವೈಶಿಷ್ಟ್ಯಗಳನ್ನು ಹೀಗೆ ಪಟ್ಟಿಮಾಡಬಹುದು :

(ಅ) ಉನ್ನತಾಧಿಕಾರವುಳ್ಳ ''ಕೈಗಾರಿಕಾ ಹಾಗೂ ಹಣಕಾಸು ಪುನರ್ನಿರ್ಮಾಣ ಮಂಡಳಿ''ಯ ರಚನೆ (ಕೈಹಪುಮಂ)

(ಆ) ಅಸ್ವಸ್ಥ ಕೈಗಾರಿಕಾ ಕಂಪನಿಗಳು 'ಕೈಹಪುಮಂ'ಗೆ ಕಡ್ಡಾಯವಾಗಿ ದರದಿ ಸಲ್ಲಿಸಲು ನಿರ್ದೇಶನ.

(ಇ) ಅಂತಸ್ಥ ಅಸ್ವಸ್ಥತೆಯ ಕೈಗಾರಿಕಾ ಘಟಕಗಳು ಸಹ 'ಕೈಹಪುಮಂ'ಗೆ ಕಡ್ಡಾಯವಾಗಿ ನಿರ್ದಿಷ್ಟ ವರದಿ ಸಲ್ಲಿಸಲು ನಿರ್ದೇಶನ.

(ಈ) ವಿಚಾರಣೆಯನಂತರ ಕಂಪನಿಯೊಂದು ಅಸ್ವಸ್ಥವೆಂದು ಕೈಹಪುಮಂ ನಿರ್ಧರಿಸಿದರೆ ಉಚಿತ ಅವಧಿ (reasonable time)ಯೊಳಗೆ ತನ್ನ ನಿವ್ವಳ ಸ್ವತ್ತನ್ನು (net worth) ಇತ್ಯಾತ್ಮಕಗೊಳಿಸಲು ಕಾಲಾವಕಾಶ ನೀಡಲು ಅಧಿಕಾರ.

(ಉ) 'ಕೈಹಪುಮಂ' ಪ್ರಕಾರ ಕಂಪನಿಯೊಂದು ತನ್ನ ನಿವ್ವಳ ಸ್ವತ್ತನ್ನು ಉಚಿತ ಅವಧಿಯೊಳಗೆ ಇತ್ಯಾತ್ಮಕಗೊಳಿಸುವುದು ಕಾರ್ಯಸಾಧ್ಯವಲ್ಲವೆಂದು ತೀರ್ಮಾನಿಸಿದರೆ ಈ ಕೆಳಗಿನ ಯಾವುದೇ ಕ್ರಮ ತೆಗೆದುಕೊಳ್ಳಲು ಅಧಿಕಾರ :

(1) ಅಸ್ವಸ್ಥ ಕೈಗಾರಿಕಾ ಕಂಪನಿಯ ಪುನಶ್ಚೇತನ (Rehabilitation), ಪುನರ್‌ರಚನೆ (Reconstruction), ಪುನರುಜ್ಜೀವನ(revival) ಕಾರ್ಯಕ್ರಮ ರೂಪಿಸುವುದು.
(2) ಯೋಗ್ಯ ವ್ಯವಸ್ಥಾಪನ ವ್ಯವಸ್ಥೆ ಒದಗಿಸಲು ವ್ಯವಸ್ಥಾಪನೆಯ ಪರಿಗ್ರಹಣ (take over)
(3) ಬೇರೆ ಕೈಗಾರಿಕಾ ಕಂಪನಿಯೊಡನೆ ವಿಲೀನ.
(4) ಅಸ್ವಸ್ಥ ಕೈಗಾರಿಕಾ ಕಂಪನಿಯ ಪೂರ್ಣ ಅಥವಾ ಭಾಗಶಃ ಮಾರಾಟ ಅಥವಾ ಗುತ್ತಿಗೆ ನೀಡುವಿಕೆ.
(5) ತನಗೆ ಸರಿಕಂಡಂತೆ ಅಸ್ವಸ್ಥತೆಯ ನಿವಾರಕ, ಸುಧಾರಕ, ಪರಿಹಾರಕ ಕ್ರಮಗಳನ್ನು ಸೂಚಿಸುವುದು.
(6) ಮೇಲೆ ಹೇಳಿದ ಕ್ರಮಗಳನ್ನು ತೆಗೆದುಕೊಳ್ಳಲು ಅಗತ್ಯ ಮತ್ತು ಯುಕ್ತ, ಅಥವಾ ಉದ್ದೇಶಗಳಿಗೆ ಪ್ರಾಸಂಗಿಕ, ಅನುಗಾಮಿ ಅನುಬಂಧಿ ಎನಿಸುವ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುವುದು.

(ಊ) ಕಂಪನಿಯೊಂದರ ವ್ಯವಹಾರಗಳನ್ನು ನೋಡಿಕೊಳ್ಳುವ ಜವಾಬ್ದಾರಿ ಹೊಂದಿರುವ ಯಾವುದೇ ವ್ಯಕ್ತಿ ಕಂಪನಿಯ ಹಿತಕ್ಕೆ ದಕ್ಕೆ ಬರುವಂತೆ ನಿಧಿಗಳ ದಿಕ್ಚ್ಯುತಿಗೆ (Diversion of funds)ಗೆ ಹೊಣೆಗಾರನೆಂದು ಕೈವಿಪುಮಂಗೆ ಮನವರಿಕೆಯಾದರೆ ಆ ವ್ಯಕ್ತಿಗೆ ಅಥವಾ ಆ ವ್ಯಕ್ತಿ ಭಾಗಿದಾರನಾದ ಯಾವುದೇ ಸಂಸ್ಥೆಗೆ ಅಥವಾ ಆತ ನಿರ್ದೇಶಕನಾಗಿರುವ ಯಾವುದೇ ಕಂಪನಿಗೆ ಹತ್ತು ವರ್ಷಗಳ ಕಾಲ ಧನಸಹಾಯ ನೀಡದಂತೆ ಬ್ಯಾಂಕುಗಳು ಹಾಗೂ ಹಣಕಾಸು ಸಂಸ್ಥೆಗಳಿಗೆ ಆದೇಶ ನೀಡಲು ಅಧಿಕಾರ.

(ಋ) 'ಕೈಹಪುಮಂ' ನೀಡಿದ ಆದೇಶಗಳ ಮೇಲೆ ಮೇಲ್ಮನವಿಗಳನ್ನು ಪರಿಶೀಲಿಸಲು ಕೈಗಾರಿಕಾ ಹಣಕಾಸು ಪುನರ್ನಿರ್ಮಾಣ ಅಪೀಲು ಪ್ರಾಧಿಕರಣ ಒಂದರ ಸ್ಥಾಪನೆಗೆ ಅವಕಾಶ. 'ಕೈಹಪುಮಂ' ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಬೇಕಾದ ಸಹಾಯ ಒದಗಿಸಲು ಕೆಲವು ಹಣಕಾಸು ಸಂಸ್ಥೆಗಳ ಸಹಾಯ ಪಡೆಯಲೂ ಅವಕಾಶವಿದೆ.

ವ್ಯಾಪ್ತಿ ಹಾಗೂ ಕಾರ್ಯವಿಧಾನ

ಈ ಅಧಿನಿಯಮದಡಿ ಅಸ್ವಸ್ಥ ಕೈಗಾರಿಕಾ ಕಂಪನಿ ಎಂದರೆ, ಏಳು ವರುಷಗಳಿಗೆ ಕಡಿಮೆ ಇಲ್ಲದೆ ನೋಂದಾಯಿತವಾಗಿರುವ ಕಂಪನಿಯಾಗಿದ್ದು, ಯಾವುದೇ ಹಣಕಾಸು ವರ್ಷಾಂತ್ಯದಲ್ಲಿ ತನ್ನ ಸಂಚಿತ ನಷ್ಟ ನಿವ್ವಳ-ಸ್ವತ್ತಿಗೆ ಸಮ ಅಥವಾ ಅದಕ್ಕಿಂತ ಹೆಚ್ಚಿರುವ ಹಾಗೂ ಆ ಹಣಕಾಸು ವರ್ಷ ಹಾಗೂ ಅದರ ಹಿಂದಿನ ಹಣಕಾಸು ವರ್ಷದಲ್ಲಿ ನಗದು ನಷ್ಟ (cash loss) ಹೊಂದಿರುವ ಕಂಪನಿ. ಪ್ರಕರಣ 3(O)ನಲ್ಲಿ ಈ ವ್ಯಾಖ್ಯೆ ನೀಡಲಾಗಿದೆ. ಇದನ್ನು ಉದಾಹರಣೆಯೊಂದಿಗೆ ವಿವರಿಸುವುದಾದರೆ, 31-3-1988ಕ್ಕೆ ವರ್ಷಾಂತ್ಯವುಳ್ಳ ಕಂಪನಿಯೊಂದು 31–3–1987 ಹಾಗೂ 31–3–1988ಕ್ಕೆ ಮುಗಿದ ವರ್ಷಗಳಲ್ಲಿ ನಗದು ನಷ್ಟ ಹೊಂದಿದ್ದು ಅದರ ಒಟ್ಟು ಸಂಚಿತ ನಷ್ಟ 31–3–1988ಕ್ಕೆ ನಿವ್ವಳ ಸ್ವತ್ತಿಗೆ ಸಮ ಅಥವಾ ಅದಕ್ಕಿಂತ ಹೆಚ್ಚಿದ್ದು ಆ ಕಂಪನಿ 31–3–1981 ಅಥವಾ ಅದಕ್ಕಿಂತ ಮುಂಚೆ ನೋಂದಣಿಯಾಗಿದ್ದಲ್ಲಿ ಈ ಅಧಿನಿಯಮದ ಅನ್ವಯ 'ಅಸ್ವಸ್ಥ ಕಂಪನಿ'ಯಾಗುತ್ತದೆ.

ಈ ಅಧಿನಿಯಮದಡಿ ಕಂಪನಿ ಎಂದರೆ 'ಕಂಪನಿ ಅಧಿನಿಯಮ 1956'ರಲ್ಲಿ ಪ್ರಕರಣ 3ರಲ್ಲಿ ವ್ಯಾಖ್ಯಿಸಿರುವ ಕಂಪನಿ ಎಂದೂ, ''ಕೈಗಾರಿಕಾ ಕಂಪನಿ'' ಎಂದರೆ ಒಂದು ಅಥವಾ ಹೆಚ್ಚು ಕೈಗಾರಿಕಾ ಉದ್ಯಮದ ಸ್ವಾಮ್ಯ ಪಡೆದ ಯಾವುದೇ ಕಂಪನಿ ಎಂದೂ, 'ಕೈಗಾರಿಕಾ ಉದ್ಯಮ' ಎಂದರೆ 'ಕೈಗಾರಿಕಾ (ಅಭಿವೃದ್ಧಿ ಹಾಗೂ ವಿನಿಯಮನ) ಅಧಿನಿಯಮ 1981ರ ಮೊದಲನೆ ಅನುಸೂಚಿಯಲ್ಲಿ ಸೂಚಿತವಾಗಿರುವ ಹಡಗು ಅಥವಾ ಇತರ ಸಮುದ್ರ ಸಾಗಣೆ ಸಂಬಂಧಿ ಉದ್ಯಮವನ್ನು, ಸಣ್ಣ ಕೈಗಾರಿಕೆಗಳನ್ನು, ಪೂರಕ ಕೈಗಾರಿಕೆಗಳನ್ನು ಹೊರತುಪಡಿಸಿ ಇತರ ಎಲ್ಲಾ ಕೈಗಾರಿಕೆಗಳಿಗೂ ಅನ್ವಯಿಸುವುದೆಂದು ಹೇಳಲಾಗಿದೆ.

ಅಕೈಕಂ ಅಧಿನಿಯಮದ ಪ್ರಕರಣ 4ರ ಅನ್ವಯ ಅಧ್ಯಕ್ಷ ಹಾಗೂ ಕನಿಷ್ಠ 2, ಗರಿಷ್ಠ 14 ಮಂದಿ ಸದಸ್ಯರನ್ನುಳ್ಳ 'ಕೈಗಾರಿಕಾ ಹಾಗೂ ಹಣಕಾಸು ಪುನರ್ನಿರ್ಮಾಣ ಮಂಡಳಿ'ಯೊಂದನ್ನು ರಚಿಸುವ ಅಧಿಕಾರವನ್ನು ಕೇಂದ್ರ ಸರಕಾರ ಪಡೆದಿದೆ. ಈ ಮಂಡಳಿಯ ಸದಸ್ಯರು ಉನ್ನತ ನ್ಯಾಯಾಲಯದ ನ್ಯಾಯಾಧೀಶರಾಗಿ ಸೇವೆ ಸಲ್ಲಿಸುತ್ತಿರುವವರು, ಅಥವಾ ಸೇವೆ ಸಲ್ಲಿಸಲು ಅರ್ಹರಾಗಿರುವವರು, ಸೇವೆ ಸಲ್ಲಿಸಿದವರು, ಅಥವಾ ವಿಜ್ಞಾನ, ತಂತ್ರಜ್ಞಾನ, ಅರ್ಥಶಾಸ್ತ್ರ, ಬ್ಯಾಂಕಿಂಗ್ ಉದ್ಯಮ, ಕಾನೂನು, ಕಾರ್ಮಿಕ ವಿಚಾರ, ಕೈಗಾರಿಕಾ ಹಣಕಾಸು, ಕೈಗಾರಿಕಾ ವ್ಯವಸ್ಥಾಪನೆ, ಕೈಗಾರಿಕಾ ಪುನರ್ನಿರ್ಮಾಣ, ಆಡಳಿತ ನಿರ್ವಹಣೆ, ವಿನಿಯೋಜನ ಲೆಕ್ಕಶಾಸ್ತ್ರ, ಮಾರಾಟಗಾರಿಕೆ, ಅಥವಾ ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ಮಂಡಳಿಗೆ ಉಪಯೋಗವಾಗಬಹುದು ಎಂದೆನಿಸುವ ವಿಶೇಷ ಜ್ಞಾನ ಅಥವಾ 15 ವರ್ಷಕ್ಕೆ ಕಡಿಮೆ ಇಲ್ಲದ ಅನುಭವ ಹೊಂದಿದವರಾಗಿರಬೇಕಲ್ಲದೆ ಸಾಮರ್ಥ್ಯಶಾಲಿಗಳೂ ಪ್ರಾಮಾಣಿಕರೂ ಆಗಿರಬೇಕು.

ಈ ಮಂಡಳಿ ನೀಡಿದ ಆದೇಶಗಳ ಮೇಲೆ ಮೇಲ್ಮನವಿಯನ್ನು ಪರಿಶೀಲಿಸುವ ಅಧಿಕಾರವಾದ ಮೇಲ್ಮನವಿ ಪ್ರಾಧಿಕಾರ ಒಬ್ಬರು ಅಧ್ಯಕ್ಷರು ಹಾಗೂ ಗರಿಷ್ಠ 3 ಮಂದಿ ಸದಸ್ಯರನ್ನು ಒಳಗೊಂಡಿರುತ್ತದೆ. ಅಧ್ಯಕ್ಷರು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ಅಥವಾ ಮಾಜಿ ನ್ಯಾಯಾಧೀಶರು ಅಥವಾ 5 ವರ್ಷಗಳ ಕಾಲ ಉನ್ನತ ನ್ಯಾಯಾಲಯದ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿರುವವರಾಗಿರಬೇಕು. ಇತರ ಸದಸ್ಯರು ಉನ್ನತ ನ್ಯಾಯಾಲಯದ ನ್ಯಾಯಾಧೀಶರು ಅಥವಾ ಭಾರತ ಸರಕಾರದ ಕಾರ್ಯದರ್ಶಿಗೆ ಕಡಿಮೆ ಇಲ್ಲದ ದರ್ಜೆಯ ಅಧಿಕಾರಿ ಅಥವಾ 'ಕೈಹಪುಮಂ'ನಲ್ಲಿ ಸದಸ್ಯರಾಗಿ ಕನಿಷ್ಠ 3 ವರ್ಷ ಸದಸ್ಯರಾಗಿ ಸೇವೆ ಸಲ್ಲಿಸಿದವರಾಗಿರಬೇಕು. 12–1–1987ರಂದು ಭಾರತ ಸರಕಾರ ಅಧಿಸೂಚನೆಯೊಂದನ್ನು ಹೊರಡಿಸಿ, ಶ್ರೀ ಆರ್. ಗಣಪತಿ ಅವರು ಅಧ್ಯಕ್ಷರಾಗುಳ್ಳ ಇತರ ಐವರು ಸದಸ್ಯರನ್ನೊಳಗೊಂಡ ಮಂಡಳಿಯೊಂದನ್ನು ರಚಿಸಿತು. ಮಂಡಳಿಯ ಸದಸ್ಯರು ತಮಗೆ 65 ವರ್ಷ ವಯಸ್ಸಾಗುವವರೆಗೆ ಅಥವಾ ಅಧಿಕಾರ ಸ್ವೀಕರಿಸಿದಂದಿನಿಂದ 5 ವರ್ಷಗಳ ಕಾಲ, ಎಂದರೆ ಯಾವುದು ಮೊದಲೋ ಅಲ್ಲಿಯವರೆಗೆ. ಸದಸ್ಯರಾಗಿ ಸೇವೆ ಸಲ್ಲಿಸುವರು. ಮಂಡಳಿಯ ಕಾರ್ಯಾಲಯ ದೆಹಲಿಯಲ್ಲಿದೆ. ಇತ್ತೀಚೆಗೆ ಮಂಡಳಿಯ ಕೆಲವು ಪೀಠಗಳು ಬೊಂಬಾಯಿ ಹಾಗೂ ಬೆಂಗಳೂರಿನಲ್ಲೂ ತಮ್ಮ ವಿಚಾರಣೆಯನ್ನು ನಡೆಸಿವೆ.

ಈ ಮೊದಲೇ ತಿಳಿಸಿದಂತೆ ಎಲ್ಲಾ ಅಸ್ವಸ್ಥ ಕೈಗಾರಿಕಾ ಕಂಪನಿಗಳು ತಾವು ಅಸ್ವಸ್ಥವೆಂದು ಪರಿಗಣಿಸಲ್ಪಡುವ ಹಣಕಾಸು ವರ್ಷದ ಅಂತ್ಯದ ಲೆಕ್ಕಪತ್ರಗಳು ಪರಿಶೋಧಿತವಾದಂದಿನಿಂದ 60 ದಿನಗಳೊಳಗೆ ನಮೂನೆ 'ಎ'ಯನ್ನು ಮಂಡಳಿಗೆ

ಸಲ್ಲಿಸುವುದು ಪ್ರಕರಣ 15(1)ರ ಪ್ರಕಾರಕಡ್ಡಾಯ. ಯಾವುದೇ ಅಸ್ವಸ್ಥ ಕಂಪನಿಯ ಲೆಕ್ಕಗಳು ಪೂರ್ಣವಾಗಿ ತಯಾರಿರದಿದ್ದಾಗ್ಯೂ ಆ ಕಂಪನಿಯ ನಿರ್ದೇಶಕರ ಮಂಡಳಿಗೆ ತಮ್ಮ ಕಂಪನಿ ಅಸ್ವಸ್ಥ ಕಂಪನಿ ಎಂಬ ಅಭಿಪ್ರಾಯಕ್ಕೆ ಬರಲು ಸಾಕಷ್ಟು ಕಾರಣಗಳಿದ್ದಾಗ ನಮೂನೆ 'ಎ' ಸಲ್ಲಿಸುವುದು ನಿರ್ದೇಶಕ ಮಂಡಳಿಯ ಕರ್ತವ್ಯವಾಗಿದೆ. ಹೀಗಾಗಿ ಯಾವುದೇ ಕಂಪನಿಯ ನಿರ್ದೇಶಕರು ಮಂಡಳಿಯ ಹಿಡಿತದಿಂದ ತಪ್ಪಿಸಿಕೊಳ್ಳಲು ಲೆಕ್ಕ ಸಮಾಪನ ಗೊಂಡಿಲ್ಲವೆಂಬ, ಪರಿಶೋಧನೆಯಾಗಿಲ್ಲವೆಂಬ ನೆವ ಹೇಳಲು ಅವಕಾಶವಿಲ್ಲ.

ಕೇಂದ್ರ ಸರಕಾರ. ಭಾರತೀಯ ರಿಸರ್ವ್ ಬ್ಯಾಂಕ್, ರಾಜ್ಯಸರಕಾರ, ಸಾರ್ವಜನಿಕ ಹಣಕಾಸು ಸಂಸ್ಥೆ, ಅಥವಾ ಯಾವುದೇ ಅನುಸೂಚಿತ ಬ್ಯಾಂಕು ಯಾವುದೇ ಕೈಗಾರಿಕಾ ಕಂಪನಿ ಅಸ್ವಸ್ಥವೆಂದು ಪರಿಗಣಿಸಲು ಸಾಕಷ್ಟು ಆಧಾರಗಳಿದ್ದಾಗ ನಿರ್ದಿಷ್ಟ ನಮೂನೆ 'ಬಿ'ಯನ್ನು ಮಂಡಳಿಗೆ ಸಲ್ಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಪ್ರಾರ್ಥಿಸಬಹುದು. ಆದರೆ ರಾಜ್ಯ ಸರಕಾರ ಅರ್ಜಿ ಸಲ್ಲಿಸಬೇಕಾದರೆ ಆ ಅಸ್ವಸ್ಥ ಕೈಗಾರಿಕಾ ಕಂಪನಿಯ ಎಲ್ಲಾ ಅಥವಾ ಯಾವುದೇ ಕೈಗಾರಿಕಾ ಉದ್ಯಮ ಆ ರಾಜ್ಯದಲ್ಲಿರಬೇಕು. ಸಾರ್ವಜನಿಕ ಹಣಕಾಸು ಸಂಸ್ಥೆ/ರಾಜ್ಯ ಮಟ್ಟದ ಸಂಸ್ಥೆ/ಅನುಸೂಚಿ ಬ್ಯಾಂಕ್ ಅರ್ಜಿ ಸಲ್ಲಿಸಬೇಕಾದರೆ ಅವು ಆ ಕಂಪನಿಗೆ ಹಣಸಹಾಯ ಮಾಡಿರಬೇಕು ಇಲ್ಲವೇ ಅರ್ಥಿಕ ಹೊಣೆ ಹೊರುವ ಜವಾಬ್ದಾರಿ ಹೊಂದಿರಬೇಕು.

ಅಂತಸ್ಥ ಅಸ್ವಸ್ಥ ಕಂಪನಿಗಳು

ಯಾವುದೇ ಕೈಗಾರಿಕಾ ಕಂಪನಿಯ ಸರಾಸರಿ ನಷ್ಟ ಅದರ ಹಿಂದಿನ ಐದು ವರ್ಷಗಳಲ್ಲಿನ ಗರಿಷ್ಟ ನಿವ್ವಳ ಸ್ವತ್ತಿನ ಶೇ. 50 ಅಥವಾ ಅದಕ್ಕಿಂತ ಹೆಚ್ಚಿನದಾಗಿದ್ದಲ್ಲಿ ಪ್ರಕರಣ 23ರ ಅನ್ವಯ ಮಂಡಳಿಗೆ ನಮೂನೆ 'ಸಿ'ಯಲ್ಲಿ ಆ ಹಣಕಾಸು ವರ್ಷದ ಲೆಕ್ಕಪರಿಶೋಧನೆಯಾದಂದಿನಿಂದ 60 ದಿನಗಳೊಳಗೆ ವರದಿ ಸಲ್ಲಿಸುವುದಲ್ಲದೆ, ಅದೇ ಕಾಲಾವಧಿಯೊಳಗೆ 21 ದಿನಗಳ ಮುನ್ಸೂಚನೆ ನೀಡಿ ಷೇರುದಾರರ ಸಭೆ ಕರೆದು ನಿವ್ವಳ ಸ್ವತ್ತಿನ ಸೋರಿಕೆಯ ಬಗ್ಗೆ ಸಕಾರಣ ವರದಿ ಸಲ್ಲಿಸುವುದು ನಿರ್ದೇಶಕ ಮಂಡಳಿಯ ಕರ್ತವ್ಯ. ಕರ್ತವ್ಯ ಲೋಪಕ್ಕೆ ಎರಡು ವರ್ಷಗಳಿಗೆ ಮೀರದ ಆರು ತಿಂಗಳಿಗೆ ಕಡಿಮೆ ಇಲ್ಲದ ಸೆರೆವಾಸದ ಶಿಕ್ಷೆ ವಿಧಿಸಲು ಅವಕಾಶವಿದೆ.

ವಿಚಾರಣೆ

ಯಾವುದೇ ಕೈಗಾರಿಕಾ ಕಂಪನಿಯ ಅಸ್ವಸ್ಥತೆಯ ಬಗ್ಗೆ ವರದಿ ಬಂದ ತಕ್ಷಣ ವಿಚಾರಣೆ ನಡೆಸಬೇಕೆಂಬ, ನಡೆಸಲೇಬೇಕೆಂಬ ಕಡ್ಡಾಯವೇನೂ ಇಲ್ಲ. ಅದು ಮಂಡಳಿಯ ವಿವೇಚನೆಗೆ ಬಿಟ್ಟಿದೆ. ಯಾವುದೇ ಕಂಪನಿಯ ಅಸ್ವಸ್ಥತೆಯ ಬಗ್ಗೆ ಮಂಡಳಿ

(ಅ) ಕಂಪನಿಯು ಅಸ್ವಸ್ಥ ಕೈಗಾರಿಕಾ ಕಂಪನಿಯೇ ? ಎಂಬುದನ್ನು ನಿರ್ಧರಿಸಲು ವಿಚಾರಣೆಯೊಂದನ್ನು ನಡೆಸಬಹುದು.

(ಆ) ವಿಚಾರಣೆಯನ್ನು ತ್ವರಿತಗೊಳಿಸಲು "ನಿರ್ವಹಣಾ ಅಭಿಕರಣ"ಕ್ಕೆ (Operating Agency) ತನ್ನ ಆದೇಶದಲ್ಲಿ ಸೂಚಿಸುವ ವಿಷಯಗಳ ಬಗ್ಗೆ ವಿಚಾರಣೆ ನಡೆಸುವಂತೆ ಆದೇಶ ಹೊರಡಿಸಬಹುದು. ಕೇಂದ್ರ ಸರಕಾರ 27-5-87 ರಂದು ಹೊರಡಿಸಿದ ಅಧಿಸೂಚನೆಯನ್ವಯ ಭಾರತ ಕೈಗಾರಿಕಾಭಿವೃದ್ಧಿ ಬ್ಯಾಂಕ್, ಭಾರತದ ಕೈಗಾರಿಕಾ ಹಣಕಾಸು ನಿಗಮ, ಭಾರತದ ಕೈಗಾರಿಕಾ ಉದರಿ ಹಾಗೂ ವಿನಿಯೋಜನ ನಿಗಮ ಹಾಗೂ ಭಾರತದ ಕೈಗಾರಿಕಾ ಪುನನಿರ್ಮಾಣ ಬ್ಯಾಂಕುಗಳನ್ನು ಆಚರಣಾ ಅಭಿಕರಣಗಳೆಂದು ನೇಮಕಾತಿ ಮಾಡಿದೆ. ಇತ್ತೀಚೆಗೆ ಭಾರತೀಯ ಸ್ಟೇಟ್ ಬ್ಯಾಂಕ್ ಜೊತೆಗೆ ಕೆಲವು ರಾಷ್ಟ್ರೀಕೃತ ಬ್ಯಾಂಕುಗಳೂ ಆಚರಣಾ ಅಭಿಕರಣಗಳೆಂದು ನೇಮಿಸಲ್ಪಟ್ಟಿವೆ.

ಈ ಅಭಿಕರಣಗಳು ಕ್ಷಿಪ್ರವಾಗಿ ಅಧ್ಯಯನ ನಡೆಸಿ ವಿಚಾರಣೆ ಪ್ರಾರಂಭವಾದಂದಿನಿಂದ 6 ದಿನಗಳೊಳಗೆ ತಮ್ಮ ಅಧ್ಯಯನವನ್ನು ಮುಗಿಸಿ ತಮ್ಮ ವರದಿ ಸಲ್ಲಿಸಬೇಕು. ಮಂಡಳಿ ವಿಚಾರಣೆಗೆ ತೆಗೆದುಕೊಂಡ ಯಾವುದೇ ಕೈಗಾರಿಕಾ ಕಂಪನಿಯ ಹಣಕಾಸು ಹಾಗೂ ಇತರ ಆಸಕ್ತಿಗಳನ್ನು ರಕ್ಷಿಸಲು ಒಂದು ಅಥವಾ ಅದಕ್ಕಿಂತ ಹೆಚ್ಚು ಜನ ನಿರ್ದೇಶಕರನ್ನು ಅಸ್ವಸ್ಥ ಕೈಗಾರಿಕಾ ಕಂಪನಿಯ ನಿರ್ದೇಶಕ ಮಂಡಳಿಗೆ ನಾಮಕರಣ ಮಾಡುವ ಅಧಿಕಾರ 'ಕೈಹಪುಮಂ'ಗಿದೆ. ಅಧ್ಯಯನದಲ್ಲಿ ಕಂಪನಿಯು ಅಸ್ವಸ್ಥವೆಂದು ಪರಿಗಣಿಸುವುದರ ಜೊತೆಗೆ ಉಚಿತ ಸಮಯದಲ್ಲಿ ತನ್ನ ನಿವ್ವಳ ಸ್ವತ್ತನ್ನು ಇತ್ಯಾತ್ಮಕಗೊಳಿಸಲು ಸಾಧ್ಯವೆಂದು ಮನವರಿಕೆಯಾದರೆ ಸೂಕ್ತ ಷರತ್ತು/ನಿಬಂಧನೆಗಳನ್ನುಳ್ಳ ಆದೇಶವನ್ನು ಕೈಹಪುಮಂ ಹೊರಡಿಸುತ್ತದೆ. ಕಂಪನಿ ಅಸ್ವಸ್ಥವೆಂದು ರುಜುವಾತಾಗುವುದರ ಜೊತೆಗೆ ಉಚಿತ ಸಮಯದಲ್ಲಿ ನಿವ್ವಳಸ್ವತ್ತು ಇತ್ಯಾತ್ಮಕವಾಗುವುದು ಕಾರ್ಯಸಾಧ್ಯವಲ್ಲ ಎನಿಸಿದರೆ ಆಚರಣಾ ಅಭಿಕರಣ ನಿರ್ದಿಷ್ಟ ಮಾರ್ಗಸೂಚಿ ನೀಡಿ ಪುನರ್ ರಚನೆ, ಸಂಯೋಜನೆ, ಮಾರಾಟ, ಗುತ್ತಿಗೆಗಳನ್ನೊಳಗೊಂಡ ಯೋಜನೆಯೊಂದನ್ನು ಆಚರಣಾ ಅಭಿಕರಣ ರೂಪಿಸುವಂತೆ 'ಕೈಹಪುಮಂ' ಆದೇಶ ನೀಡುತ್ತದೆ.

ನಿವ್ವಳ ಸ್ವತ್ತನ್ನು ಇತ್ಯಾತ್ಮಕಗೊಳಿಸಲು ಆದೇಶ ಪಡೆದ ಯಾವುದೇ ಕಂಪನಿ ವಿಧಿಸಿದ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಆ ಬಗ್ಗೆ ಸಾರ್ವಜನಿಕ ಹಣಕಾಸು ಸಂಸ್ಥೆಗಳಿಂದ, ರಾಜ್ಯಮಟ್ಟದ ಹಣಕಾಸು ಸಂಸ್ಥೆಗಳಿಂದ, ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ, ರಾಜ್ಯ/ಕೇಂದ್ರ ಸರಕಾರದಿಂದ ವರದಿ ಸಲ್ಲಿಸಲ್ಪಟ್ಟಾಗ 'ಕೈಹಪುಮಂ' ಯೋಜನೆಯನ್ನು ಮಾರ್ಪಡಿಸುವಂತೆ ಆಚರಣಾ ಅಭಿಕರಣಕ್ಕೆ 90 ದಿನಗಳೊಳಗಾಗಿ ಕೆಳಕಂಡ ಕ್ರಮಗಳನ್ನೊಳಗೊಂಡ ಯೋಜನೆಯನ್ನು ಸಲ್ಲಿಸುವಂತೆ ಆಚರಣಾ ಅಭಿಕರಣಕ್ಕೆ ಆದೇಶಿಸುತ್ತದೆ:

(ಅ) ಪುನಶ್ಚೇತನ / ಪುನರ್‌ರಚನೆ / ಪುನರುಜ್ಜೀವನ,
(ಆ) ವ್ಯವಸ್ಥಾಪನ ವರ್ಗದ ಬದಲಾವಣೆ,
(ಇ) ಸಂಯೋಜನೆ/ವಿಲೀನ,
(ಈ) ಪೂರ್ಣ/ಭಾಗಶಃ ಮಾರಾಟ ಗುತ್ತಿಗೆ,
(ಉ) ಇತರೇ ಸೂಕ್ತ ನಿವಾರಕ, ಸುಧಾರಕ, ಪರಿಹಾರಕ ಕ್ರಮಗಳು.

ಈ ಕರಡು ಯೋಜನೆಯನ್ನು ಮಂಡಳಿ ಅಸ್ವಸ್ಥ ಕಂಪನಿಗೆ, ಸಂಯೋಜನೆಗೆ ಒಪ್ಪಿರುವ ಕಂಪನಿಗೆ, ಕಂಪನಿಗಳ ಉದ್ಯೋಗಿಗಳಿಗೆ, ಷೇರುದಾರರಿಗೆ, ಸಾಲಗಾರರಿಗೆ, ಸಲ್ಲಿಸಿ ಅವರು ಸಲಹೆ ಆಕ್ಷೇಪಣೆಗಳನ್ನು ನಿರ್ದಿಷ್ಟ ಅವಧಿಯೊಳಗೆ ಸಲ್ಲಿಸುವಂತೆ ಸೂಚಿಸುತ್ತದೆ. ಅವರು ನೀಡುವ ಸಲಹೆ ಆಕ್ಷೇಪಣೆಗಳನ್ನು ಗಣನೆಗೆ ತೆಗೆದುಕೊಂಡು ಯೋಜನೆಯಲ್ಲಿ ಸೂಕ್ತ ಮಾರ್ಪಾಟುಗಳನ್ನು ಮಾಡಿ ಯೋಜನೆಯ ಜಾರಿಯ ದಿನಾಂಕ ಗೊತ್ತುಪಡಿಸುತ್ತದೆ. ಯೋಜನೆಯನ್ನು ಆಗಿಂದಾಗ್ಗೆ ಬದಲಾಯಿಸುವ ಅಧಿಕಾರವೂ ಮಂಡಳಿಗಿದೆ.

ಅಸ್ವಸ್ಥ ಕಂಪನಿಯ ಪುನರ್ವಸತಿಯಲ್ಲಿ ಹಣಕಾಸು ಸಹಾಯ ನೀಡಬೇಕಾದ ಸಂದರ್ಭಗಳಲ್ಲಿ ಹಣಕಾಸು ಸಹಾಯ ನೀಡಬೇಕಾದ ಸಂಸ್ಥೆಗೂ ಯೋಜನೆಯ ಪ್ರತಿಯೊಂದನ್ನು ಕಳುಹಿಸಿ 60 ದಿನಗಳೊಳಗೆ ಅದರ ಸಮ್ಮತಿ/ಅಸಮ್ಮತಿ ತಿಳಿಸುವಂತೆ ಕೋರುತ್ತದೆ. ಸಮ್ಮತಿ ಸ್ವೀಕರಿಸಿದ ನಂತರವೇ ಯೋಜನೆಯನ್ನು ಜಾರಿಗೆ ತರುವುದರ ಬಗ್ಗೆ ಮಂಡಳಿ ನಿರ್ಧರಿಸುತ್ತದೆ. ಸಮ್ಮತಿ ದೊರೆಯದ ಸಂದರ್ಭದಲ್ಲಿ ಅವಸಾಯನವೂ ಸೇರಿದಂತೆ ಸೂಕ್ತ ಕ್ರಮ ತೆಗೆದುಕೊಳ್ಳುವ ಅಧಿಕಾರ 'ಕೈಹಪುಮಂ'ಗೆ ಇದೆ. ಸಂಬಂಧಿಸಿದ ಎಲ್ಲ ಸಂಗತಿಗಳನ್ನು ಪರಿಗಣಿಸಿ, ಸನ್ನಿವೇಶಗಳನ್ನು ಪರಿಶೀಲಿಸಿ, ಎಲ್ಲ ಕಕ್ಷಿಗಾರರನ್ನೂ ಕೇಳಿ ಕೈಗಾರಿಕಾ ಕಂಪನಿಯ ಅವಸಾಯನವೇ (Liquidation) ನ್ಯಾಯಸಮ್ಮತವೂ (just) ಧರ್ಮಸಮ್ಮತವೂ ಎಂದು ತೀರ್ಮಾನಿಸಿದರೆ ಆ ತೀರ್ಮಾನವನ್ನು ಉನ್ನತ ನ್ಯಾಯಾಲಯಕ್ಕೆ ತಿಳಿಸುತ್ತದೆ. ಉನ್ನತ ನ್ಯಾಯಾಲಯ ಕಂಪನಿ ಅಧಿನಿಯಮ 1956ರ ಅನ್ವಯ 'ಅವಸಾಯನದ ಆಜ್ಞೆ' ಹೊರಡಿಸುತ್ತದೆ. ಕೆಲವು ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದಂತೆ ಮಂಡಳಿಗೆ ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಹಾಗೂ ಮಂಡಳಿಯ ನಡುವಳಿಕೆಗೆ 'ನ್ಯಾಯಿಕ ನಡವಳಿಕೆಗಳ' ಸ್ಥಾನವನ್ನು ನೀಡಲಾಗಿದೆ.

ಕಾರ್ಯ ವಿವೇಚನೆ

ಈ ಅಧಿನಿಯಮದ ಜಾರಿಯಿಂದಾಗಿ ಅಸ್ವಸ್ಥ ಘಟಕಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಬಹುದೆ ? ಅಸ್ವಸ್ಥ ಘಟಕಗಳಿಗೆ ಸೂಕ್ತ ಸಮಯದಲ್ಲಿ ಶುಶ್ರೂಷೆ ದೊರಕೀತೆ ? ಅಸ್ವಸ್ಥ ಘಟಕಗಳಲ್ಲಿ ಸಿಕ್ಕಿಹಾಕಿಕೊಂಡಿರುವ ಕೋಟ್ಯಂತರ ರೂಪಾಯಿಗಳು ಮತ್ತೆ ಉತ್ಪಾದನ ಕಾರ್ಯಕ್ಕೆ ಉಪಯುಕ್ತವಾಗಿ, ಅವುಗಳು ಬಡ್ಡಿಯೊಡನೆ ಮರು ಸಂದಾಯವಾದವೇ ? ಎನ್ನುವ ಪ್ರಶ್ನೆಗಳಿಗೆ ಉತ್ತರ ಇನ್ನೂ ದೊರೆತಿಲ್ಲ.

ನಮ್ಮಲ್ಲಿನ ಬಹಳಷ್ಟು ಅಸ್ವಸ್ಥ ಕೈಗಾರಿಕೆಗಳು ಸಣ್ಣ ಕೈಗಾರಿಕೆಗಳ ವರ್ಗಕ್ಕೆ ಸೇರಿದಂಥವು. ತಮ್ಮ ಪರಿಮಿತ ಬಂಡವಾಳ, ಉದ್ಯಮಶೀಲತೆಯ ಕೊರತೆ, ಸರಕಾರದ ಸಹಾಯಧನ ನೀಡಿಕೆಯಲ್ಲಿ ವಿಳಂಬ, ಗ್ರಾಹಕರ ವಿಳಂಬ, ಪಾವತಿ ನೀತಿಗಳಿಂದಾಗಿ ಬಾಲಗ್ರಹ ಪೀಡೆಗೆ ತುತ್ತಾಗಿ ಬೆಳೆಯುತ್ತಾ ವ್ಯಾಧಿ ಉಲ್ಬಣಿಸುತ್ತಿದೆ. ಸರಕಾರಿ ವಲಯದ ಕೈಗಾರಿಕಾ ಕಂಪನಿಗಳಂತೂ ಆಜನ್ಮ ಅಸ್ವಸ್ಥವೆಂದು ಪರಿಗಣಿಸಲ್ಪಟ್ಟು, ಅದಕ್ಕೆ ಸರಕಾರದ ಬೆಲೆ ನೀತಿ, ವಾಣಿಜ್ಯ ಸಂಸ್ಥೆಯಂತೆ ನಿರ್ಧಾರ ತೆಗೆದುಕೊಳ್ಳಲು ವ್ಯವಸ್ಥಾಪನವರ್ಗಕ್ಕೆ ಸ್ವಾಯತ್ತತೆಯ ಅಭಾವ, ಕಡಿಮೆ ಉತ್ಪಾದಕತೆ, ಅನಿಯಂತ್ರಿತ ವೆಚ್ಚ ಕಾರಣಗಳೆಂಬುದು ಗುಟ್ಟಾಗೇನೂ ಉಳಿದಿಲ್ಲ. ಈ ಎರಡೂ ತೆರನ ಅಸ್ವಸ್ಥ ಕೈಗಾರಿಕಾ ಘಟಕಗಳನ್ನು ಅಧಿನಿಯಮದ ವ್ಯಾಪ್ತಿಯಿಂದ ಹೊರಗುಳಿಸಿರುವುದರಿಂದ ಸಾಧಿಸುವುದಾದರೂ ಏನನ್ನು ? ನೀರ್ಗಲ್ಲಿನ ತುದಿಯನ್ನು ಚಿವುಟಿಹಾಕಿದರೆ ನೀರ್ಗಲ್ಲು ಮಾಯವಾದೀತೆ ? ಕೈಹಪುಮಂ ನ ಅಧ್ಯಕ್ಷರು ಮಂಡಳಿಯ ಸಮರ್ಪಕ ಕಾರ್ಯ ನಿರ್ವಹಣೆಗೆ ಕೆಳಗಿನವುಗಳು ಅಡ್ಡಿಯಾಗಿವೆಯೆಂದು ತಿಳಿಸಿದ್ದಾರೆ:

1 ಮಿತ ಸಿಬ್ಬಂದಿ,

2 ಕೈಹಪುಮಂ ಸಮ್ಮತಿ ನೀಡಿದ ಪುನರುಜ್ಜೀವನ ಯೋಜನೆಗಳ ಜಾರಿಯ ಮೇಲ್ವಿಚಾರಣೆಗೆ ಅವಕಾಶ ಇರದಿರುವುದು,

3 ಯೋಜನೆ ಜಾರಿಗೆ ತಂದಿರುವುದನ್ನು ಅಥವಾ ತರದಿರುವುದನ್ನು ಪತ್ತೆಹಚ್ಚಲು ಸೂಕ್ತ ವ್ಯವಸ್ಥೆಯ ಅಭಾವ,

4 ಇಡೀ ಕೈಗಾರಿಕೆಯೇ ಅಸ್ವಸ್ಥವಾಗಿರುವಾಗ (ಉದಾ: ಜವಳಿ, ಸೆಣಬು, ಕಾಗದ), ಅದರ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೆ, ನಿರ್ದಿಷ್ಟ ಕೈಗಾರಿಕಾ ಕಂಪನಿಗಳ ಬಗ್ಗೆ ಕ್ರಮ ತೆಗೆದುಕೊಳ್ಳುವುದರಿಂದ ಪರಿಹಾರ ದೊರಕದು.

ಅಸ್ವಸ್ಥ ಕಂಪನಿಗೆ ಸಂಬಂಧಿಸಿದಂತೆ ಅಧಿಕಾರ ಚಲಾಯಿಸಲು 'ಕೈಹಪುಮಂ'ಗೆ ಕಂಪನಿಗಳ ಅಧಿನಿಯಮ ಅಡ್ಡಿ ಬರದಂತೆ ವ್ಯಾಪಕ ಅಧಿಕಾರ ನೀಡಲಾಗಿದೆ. ನಗರ ಭೂಮಿತಿ ಅಧಿನಿಯಮ 1975 ಹಾಗೂ ವಿದೇಶಿ ವಿನಿಮಯ ನಿಯಂತ್ರಣ ಅಧಿನಿಯಮ 1973ರ ಕೆಲವು ಪ್ರಕರಣಗಳನ್ನು ಮೀರಲು ಅಧಿಕಾರವಿಲ್ಲದಿರುವುದರಿಂದ ಮಂಡಳಿಯ ಕಾರ್ಯ ಕುಂಠಿತಗೊಂಡಿದೆಯೆಂದು ಕಾನೂನು ತಜ್ಞರು ಅಭಿಪ್ರಾಯಪಡುತ್ತಾರೆ. ಸದ್ಯದ ಪರಿಸ್ಥಿತಿಯಲ್ಲಿ ಮಂಡಳಿ ಮಾಹಿತಿಯ ತೀರುವೆ ಮನೆಯಾಗಿ ಕಾರ್ಯ ನಿರ್ವಹಿಸುತ್ತಿದೆಯೆಂದೂ ಅದನ್ನು ಉಪಕರಣಗಳಿಲ್ಲದ ವೈದ್ಯನೆಂದೂ ಕರೆದಿದ್ದಾರಾದರೂ ಈ ಮಂಡಳಿಯಿಂದ ಉಂಟಾದ ಲಾಭ/ನಷ್ಟದ ಅರಿವಾಗುವುದು ಹಲವು ವರುಷಗಳ ನಂತರವೇ.

'ಕೈಹಪುನಂ' ಸಾಧನೆ

ಸೆಪ್ಟೆಂಬರ್ 1988ಕ್ಕೆ 1 ವರ್ಷ ತುಂಬಿದ 'ಕೈಹಪುಮಂ' ಸಾಧನೆ ಹೀಗಿದೆ: 160 ಅಸ್ವಸ್ಥ ಕೈಗಾರಿಕಾ ಕಂಪನಿಗಳ ಪುನರುಜ್ಜೀವನದ ಬಗ್ಗೆ ಅಧ್ಯಯಿಸಲು ಮಂಡಳಿ ಆಚರಣಾ ಅಭಿಕರಣಗಳನ್ನು ಕೇಳಿದೆ. ಅವುಗಳಲ್ಲಿ ಸುಮಾರು 100 ಕಂಪನಿಗಳ ಬಗ್ಗೆ ಯೋಜನೆಗಳು ಮಂಡಳಿಗೆ ಸಲ್ಲಿಸಲ್ಪಟ್ಟಿವೆ. ಹಾಗೂ ಅವುಗಳನ್ನು ಪರಿಶೀಲನೆಗೆ ಒಳಪಡಿಸಲಾಗಿದೆ. ಸುಮಾರು 30 ಪುನರುಜ್ಜೀವನ ಯೋಜನೆಗಳ ಕರಡನ್ನು ಪ್ರಕಟಿಸಲಾಗಿದ್ದು, 10 ಪುನರುಜ್ಜೀವನ ಯೋಜನೆಗಳನ್ನು ಮಂಜೂರು ಮಾಡಲಾಗಿದೆ. ಅವುಗಳಲ್ಲಿ 2 ಯೋಜನೆಗಳು ಸ್ವಸ್ಥ ಕೈಗಾರಿಕಾ ಘಟಕಗಳೊಡನೆ ಸಮತೋಲನ ಮಾಡುವಂತಹುವಾಗಿದ್ದು ಎರಡು ಘಟಕಗಳಿಗೆ ಸಂಬಂಧಿಸಿದಂತೆ, ವ್ಯವಸ್ಥಾಪಕ ವರ್ಗದ ಬದಲಾವಣೆಗೆ ಆದೇಶಿಸಲಾಗಿದೆ. ಸುಮಾರು 40 ಪ್ರಕರಣಗಳಲ್ಲಿ ಕಂಪನಿಗಳು ತಮ್ಮ ಸ್ವಪ್ರಯತ್ನದಿಂದ ಹಾಗೂ ಈಗಾಗಲೆ ಜಾರಿಯಲ್ಲಿರುವ ತಮ್ಮ ನಿವ್ವಳಸ್ವತ್ತನ್ನು ಇತ್ಯಾತ್ಮಕಗೊಳಿಸಬಹುದೆಂದು ಕಂಡುಬಂದದ್ದರಿಂದ ಆ ಯೋಜನೆಗಳಿಗೆ ಮಂಜೂರಾತಿ ನೀಡಲಾಗಿದೆ. ★

ಯೂರೋ-ಕರೆನ್ಸಿ ಸಾಲಗಳು

ನಮ್ಮ ಉದ್ಯಮವನ್ನು ಅತ್ಯಾಧುನಿಕಗೊಳಿಸಿ ಇತರ ದೇಶಗಳೊಂದಿಗೆ ನಮ್ಮ ದೇಶ ಸ್ಪರ್ಧಿಸುವುದು ಸಾಧ್ಯವಾಗಬೇಕಾದರೆ ಅಧುನಾತನ ತಂತ್ರಜ್ಞಾನವೇ ಮುಂತಾದವುಗಳ ಆಮದು ಆವಶ್ಯಕ. ಇದಕ್ಕೆ ಬೇಕಾದ ವಿದೇಶಿ ವಿನಿಮಯ ಯಾವುದೇ ಮೂಲದಿಂದ ಲಭ್ಯವಿರದಿದ್ದಾಗ ಅಂತಿಮವಾಗಿ ಏನು ಮಾಡಬೇಕು ?

ವೇ. ಕೃ. ಅನಂತಸ್ವಾಮಿ

ವ್ಯವಸ್ಥಾಪಕರು, ಇಂಜಿನಿಯರಿಂಗ್ ವಿಭಾಗ
ಕೈಗಾರಿಕಾ ಶಾಖೆ
ಭಾರತೀಯ ಸ್ಟೇಟ್ ಬ್ಯಾಂಕ್, ಬೆಂಗಳೂರು

ಉನ್ನತ ತಂತ್ರಜ್ಞಾನವನ್ನು ಬಳಸಿಕೊಳ್ಳುವ ಉದ್ದೇಶವಿರುವ ಯಾವುದೇ ಕೈಗಾರಿಕಾ ಪರಿಯೋಜನೆಗೆ ವಿದೇಶಿ ಯಂತ್ರೋಪಕರಣಗಳ ಮತ್ತು ತಂತ್ರಜ್ಞಾನದ ಅಗತ್ಯವಿದೆ ಎಂಬುದು ನಿರ್ವಿವಾದ. ಸ್ವದೇಶಿ ಯಂತ್ರೋಪಕರಣಗಳ ಗುಣಮಟ್ಟ ಸುಧಾರಿಸುತ್ತಿರುವುದರಿಂದ ಹಲವಾರು ಸಂಕೀರ್ಣ ಉತ್ಪಾದನ ಕಾರ್ಯಗಳಿಗೆ ನಮ್ಮ ಯಂತ್ರಗಳನ್ನೇ ಉಪಯೋಗಿಸಬಹುದಾಗಿದೆ. ಆದಾಗ್ಯೂ, ವಿದೇಶಿ ತಂತ್ರಜ್ಞಾನವನ್ನು ಬಳಸಿ ತಯಾರಿಸಿದ ವಸ್ತುಗಳ ತಾಳಿಕೆ–ಬಾಳಿಕೆ ಸ್ವದೇಶಿ ವಸ್ತುಗಳಿಗಿಂತ ಉತ್ತಮ ಎನ್ನುವ ಅರಿವು ಎಲ್ಲೆಡೆಯೂ ಇದೆ. ಅಪ್ಪಟ ಸ್ವದೇಶಿ ತಂತ್ರಜ್ಞಾನ ಇನ್ನೂ ಬೆಳೆಯಬೇಕಾಗಿದೆ, ನಮ್ಮಲ್ಲಿ ದೊರೆಯುವ ಸ್ವದೇಶಿ ತಂತ್ರಜ್ಞಾನ ವಿದೇಶಿ ತಂತ್ರಜ್ಞಾನದ ನಕಲು ಎನ್ನುವ ನಿದರ್ಶನಗಳು ಹಲವಾರು.

ವಿದೇಶಿ ತಂತ್ರಜ್ಞಾನದಿಂದ ಪಡೆಯಬಹುದಾದ ಅಧಿಕ ಉತ್ಪಾದಕತೆ, ಉತ್ಪಾದನೆ, ತಾಂತ್ರಿಕ ಗುಣಮಟ್ಟ, ಕಾರ್ಯಕ್ಷಮತೆ ಮುಂತಾದವುಗಳ ಲಾಭ ಪಡೆಯಲು ಸರ್ಕಾರ ಈಚೀಚೆಗೆ ತನ್ನ ಆಮದು ನೀತಿಯನ್ನು ಸಡಿಲಗೊಳಿಸಿದೆ. ಕಂಪ್ಯೂಟರ್, ಮೋಟಾರು ವಾಹನಗಳು, ಮುಂತಾದ ಹಲವಾರು ಕ್ಷೇತ್ರಗಳಲ್ಲಿ ವಿದೇಶಿ ಸಹಯೋಗಗಳಿಗೆ ಸರ್ಕಾರ ಅಮಮತಿ ನೀಡಿ ಆ ರಂಗಗಳಲ್ಲಿ ಕ್ರಾಂತಿಕಾರಿ ಬದಲಾವಣೆಗಳಾಗಿವೆ. ಮಾರುತಿ ಕಾರು ಸಹ ಇಂತಹ ಸಹಯೋಗದ ಒಂದು ಕೂಸು. ಬಳಕೆದಾರನ ಹಿತ ದೇಶದ ಹಿತವಲ್ಲವೆ ?

ಈ ರೀತಿಯ ವಿದೇಶಿ ತಂತ್ರಜ್ಞಾನದ ಆಮದಿಗೆ ವಿದೇಶಿ ವಿನಿಮಯದ ಅಗತ್ಯ ಹೆಚ್ಚುತ್ತ ಹೋಗುವುದು ಸಹಜ. ಈ ಹೆಚ್ಚು ಹೆಚ್ಚು ಪರಿಮಾಣದ

ವಿದೇಶಿ ವಿನಿಮಯದ ಪೂರೈಕೆ ಕೆಳಗಿನ ಆದ್ಯತಾ ಕ್ರಮದಲ್ಲಿ ಮಾಡಲಾಗುವುದು :

1 ಮುಕ್ತ ವಿದೇಶಿ ವಿನಿಮಯ

ಯಾವುದೇ ಯಂತ್ರೋಪಕರಣಗಳ ಆಮದಿಗೆ ಅಗತ್ಯವಿರುವ ವಿದೇಶಿ ವಿನಿಮಯವನ್ನು ಆದಷ್ಟು ಮಟ್ಟಿಗೆ ತನ್ನ ಮುಕ್ತ ವಿದೇಶಿ ವಿನಿಮಯ ಮೀಸಲುಗಳಿಂದ ಪೂರೈಸಲು ಸರ್ಕಾರ ಪ್ರಯತ್ನಿಸುತ್ತದೆ. ಮುಕ್ತ ಮೀಸಲುಗಳಿಂದ ವಿದೇಶಿ ವಿನಿಮಯವನ್ನು ಒದಗಿಸಿದಲ್ಲಿ, ಪರಿಯೋಜನೆಗೆ ಬೇಕಾದ ಹಣಕಾಸನ್ನು ಅಖಿಲ ಭಾರತ ಅವಧಿ ಸಾಲ ನೀಡಿಕೆಯ ಸಂಸ್ಥೆಗಳು ಮತ್ತು ವಾಣಿಜ್ಯ ಬ್ಯಾಂಕುಗಳಿಂದ ರೂಪಾಯಿ ಸಾಲದ (Rupee Loan) ರೂಪದಲ್ಲಿ ಪಡೆದುಕೊಳ್ಳಬಹುದು. ಮುಕ್ತ ಮೀಸಲುಗಳ ಮಟ್ಟ ಸಮಾಧಾನಕರವಾಗಿದ್ದಲ್ಲಿ ಸರ್ಕಾರ ಮುಕ್ತ ವಿದೇಶಿ ವಿನಿಮಯವನ್ನೇ ಬಿಡುಗಡೆ ಮಾಡುತ್ತದೆ.

2 ವಿದೇಶಿ ಸರ್ಕಾರಗಳ ನೆರವು/ಸಾಲ

ಮುಕ್ತ ಮೀಸಲುಗಳನ್ನು ಯಂತ್ರೋಪಕರಣಗಳ ಆಮದಿಗೆ 'ಪೋಲು'' ಮಾಡಲಾಗದು ಎಂದಾದಲ್ಲಿ, ಸರ್ಕಾರ ತೆರೆದಿಡುವ ಎರಡನೆಯ ಪರ್ಯಾಯವೆಂದರೆ ವಿದೇಶಿ ಸರ್ಕಾರಗಳು ನಮ್ಮ ಸರ್ಕಾರಕ್ಕೆ ಒದಗಿಸುವ ನೆರವು ಅಥವಾ ಸಾಲಗಳು. ಈ ರೀತಿಯ ನೆರವು ಅಥವಾ ಸಾಲದ ಆಡಿಯಲ್ಲಿ ಯಂತ್ರೋಪಕರಣಗಳ ಆಮದು ಸಾಧ್ಯ.

3 ಅಂತರರಾಷ್ಟ್ರೀಯ ಅಭಿವೃದ್ಧಿ ಅಭಿಕರಣ ಮುಂತಾದವುಗಳಿಂದ ಸುಲಭ ಸಾಲಗಳು

ಮೇಲೆ ಪ್ರಸ್ತಾಪಿಸಿದ ಮುಕ್ತ ವಿದೇಶಿ ವಿನಿಮಯ ಮೀಸಲುಗಳು ಅಥವಾ ವಿದೇಶಿ ಸರ್ಕಾರದ ನೆರವು ಸಾಲಗಳು ದುರ್ಲಭವಾಗಿದ್ದಲ್ಲಿ, ಅಂತರರಾಷ್ಟ್ರೀಯ ಅಭಿವೃದ್ಧಿ ಅಭಿಕರಣ (IDA), ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಮುಂತಾದ ಸಂಸ್ಥೆಗಳಿಂದ ದೊರೆಯುವ ಸಾಲಗಳ ಮುಖಾಂತರ ಸರ್ಕಾರ ಪರಿಯೋಜನೆಗಳಿಗೆ ವಿದೇಶಿ ವಿನಿಮಯ ಮಂಜೂರು ಮಾಡುತ್ತದೆ.

4 ವಿಶ್ವಬ್ಯಾಂಕ್ ಮುಂತಾದ ಸಂಸ್ಥೆಗಳಿಂದ ರಿಯಾಯಿತಿ ಸಾಲಗಳು

ವಿಶ್ವಬ್ಯಾಂಕ್ ಮೊದಲಾದ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳು ರಾಷ್ಟ್ರಗಳಿಗೆ ರಿಯಾಯಿತಿ ದರದಲ್ಲಿ ಸಾಲಗಳನ್ನು ನೀಡುತ್ತವೆ. ಅಂತಹ ಸಾಲಗಳ ಮುಖಾಂತರ ದೊರೆಯುವ ವಿದೇಶಿ ವಿನಿಮಯವನ್ನು, ಮೇಲೆ ಚರ್ಚಿಸಿದ ಮೂರು ಮಾರ್ಗಗಳು ಲಭ್ಯವಿಲ್ಲದಿದ್ದಲ್ಲಿ, ಯಂತ್ರೋಪಕರಣಗಳ ಆಮದಿಗೆ ಮಂಜೂರು ಮಾಲಾಗುವುದು.

5 ವಿಶ್ವಬ್ಯಾಂಕ್ ಮುಂತಾದ ಸಂಸ್ಥೆಗಳಿಂದ ವಾಣಿಜ್ಯ ದರದ ಸಾಲಗಳು

ವಿಶ್ವಬ್ಯಾಂಕ್ ಮುಂತಾದ ಸಂಸ್ಥೆಗಳು ಸರ್ಕಾರಗಳಿಗೆ ವಾಣಿಜ್ಯ ದರದಲ್ಲಿ ಕೂಡ ಸಾಲಗಳನ್ನು ಒದಗಿಸುತ್ತವೆ. ಅಗತ್ಯವಿದ್ದಲ್ಲಿ ಈ ಸಾಲಗಳ ಮುಖಾಂತರವೂ ವಿದೇಶಿ ವಿನಿಮಯವನ್ನು ಸರ್ಕಾರ ಮಂಜೂರು ಮಾಡುವುದು.

6 ಮುಕ್ತ ಮಾರುಕಟ್ಟೆ ಸಾಲಗಳು (ಯೂರೋ-ಕರೆನ್ಸಿ ಸಾಲಗಳು)

ಅನ್ಯಮಾರ್ಗವೇ ಇಲ್ಲ ಎನ್ನುವ ಸಂದರ್ಭದಲ್ಲಿ, ಯಂತ್ರೋಪಕರಣಗಳ ಆಮದಿಗಾಗಿ ತಗಲುವ ವಿದೇಶಿ ವಿನಿಮಯವನ್ನು ಮುಕ್ತಮಾರುಕಟ್ಟೆಯಲ್ಲಿ ಪಡೆದುಕೊಳ್ಳಲು ಸರ್ಕಾರ ಅನುಮತಿ ನೀಡುವುದು. ಇಂತಹ ಸಾಲಗಳನ್ನು ಯೂರೋ-ಕರೆನ್ಸಿ ಸಾಲಗಳೆಂದು ಕರೆಯಲಾಗುವುದು. ಸಾಕಷ್ಟು ಚಾಲ್ತಿಯಲ್ಲಿರುವ ಯೂರೋ-ಕರೆನ್ಸಿ ಸಾಲಗಳ ಬಗ್ಗೆ ಈಗ ಸ್ಥೂಲ ಪರಿಚಯ ಮಾಡಿಕೊಳ್ಳೋಣ.

ಯೂರೋ-ಕರೆನ್ಸಿ ಎಂದರೇನು ?

ತನ್ನದೇ ಆದ ನೆಲದಿಂದ ಹೊರಗೆ ಮಾರುಕಟ್ಟೆ ಲಭ್ಯವಿರುವ ಮತ್ತು ವಹಿವಾಟಿಗೆ ಒಳಪಡುವ ಕರೆನ್ಸಿಯನ್ನು ಯೂರೋ-ಕರೆನ್ಸಿ ಎನ್ನಬಹುದು. ಅಮೆರಿಕದ ಡಾಲರುಗಳನ್ನು ಲಂಡನ್ನಿನಲ್ಲಿ ಇಟ್ಟಾಗ ಅವು ಯೂರೋ-ಡಾಲರುಗಳಾಗುತ್ತವೆ. ಜರ್ಮನಿಯ ಮಾರ್ಕುಗಳನ್ನು ಅಮೆರಿಕದಲ್ಲಿಟ್ಟಲ್ಲಿ ಅವು ಯೂರೋ-ಮಾರ್ಕುಗಳು ಎನಿಸಿಕೊಳ್ಳುತ್ತವೆ. ಜಪಾನಿನ ಯೆನ್, ಬ್ರಿಟನ್ನಿನ ಪೌಂಡ್ ಸ್ಟರ್ಲಿಂಗ್, ಸ್ವಿಸ್ ಫ್ರಾಂಕುಗಳು ಮತ್ತು ಫ್ರೆಂಚ್ ಫ್ರಾಂಕುಗಳು ಇತರ ಪ್ರಮುಖ ಪ್ರಬಲಯೂರೋ-ಕರೆನ್ಸಿಗಳು.

ಯೂರೋ-ಕರೆನ್ಸಿ ಮಾರುಕಟ್ಟೆ

ಇದೊಂದು ಅಂತರರಾಷ್ಟ್ರೀಯ ಋಣದ ಮಾರುಕಟ್ಟೆ. ಯೂರೋ—ಬ್ಯಾಂಕುಗಳು ಸ್ವೀಕಾರಾರ್ಹವಾದ ಯೂರೋ—ಕರೆನ್ಸಿಗಳಲ್ಲಿ ಠೇವಣಿಗಳನ್ನು ಸ್ವೀಕರಿಸಿ ಸಾಲಗಳನ್ನುನೀಡುತ್ತವೆ. ತಮ್ಮ ಠೇವಣಿ ನಿಧಿಗಳಿಗೆ ಸಾಲಗಾರರನ್ನು ವಿಶ್ವದಾದ್ಯಂತ ಪಡೆದುಕೊಳ್ಳಬಲ್ಲ ಕೌಶಲ ಯೂರೋ-ಬ್ಯಾಂಕುಗಳಿಗಿವೆ.

ಯೂರೋ-ಠೇವಣಿಗಳು ಚಾಲ್ತಿ ಠೇವಣಿಗಳಲ್ಲ. ಅವು ಮೂರು, ಆರು ಅಥವಾ ಹನ್ನೆರಡು ತಿಂಗಳುಗಳ ಅವಧಿಯ ಸಾವಧಿ ಠೇವಣಿಗಳು. ಸಾಲಗಳನ್ನು 3/6 ತಿಂಗಳಿಗೊಮ್ಮೆ ಆವರ್ತಗೊಳಿಸುವುದರ (rolling over) ಮೂಲಕ, ಠೇವಣಿಗಳು ಅಲ್ಪಾವಧಿಯವಾದರೂ ಸಾಲಗಾರನಿಗೆ ದೀರ್ಘಾವಧಿ ಸಾಲ ಲಭ್ಯ. ಸಾಧಾರಣವಾಗಿ ಸಾಲದ ಕನಿಷ್ಠ ಮೊತ್ತ 10 ಲಕ್ಷ ಡಾಲರುಗಳು.

ಯೂರೋ-ಕರೆನ್ಸಿ ಸಾಲಗಳ ಬಡ್ಡಿ, ಇತರ ವೆಚ್ಚಗಳು

ಆಂತರಿಕ ಸಾಲಗಳಿಗೆ ಹೋಲಿಸಿದಲ್ಲಿ, ಯೂರೋ-ಕರೆನ್ಸಿ ಸಾಲಗಳ ಬಡ್ಡಿ ದರಗಳು ಕಡಿಮೆ. ಬಡ್ಡಿಯನ್ನು ಸಾಧಾರಣವಾಗಿ LIBORಗೆ (ಲೈಬೋರ್: London Inter-Bank Offered Rate) (ಲಂಡನ್ ಅಂತರ-ಬ್ಯಾಂಕ್ ನೀಡಿಕೆ ದರ) ಬಂಧಿಸಲಾಗುವುದು.— "LIBORಗಿಂತ ಶೇ. 1 ಅಧಿಕ", "LIBORಗಿಂತ ಶೇ. ½ ಕಡಿಮೆ", ಇತ್ಯಾದಿ.

ಈ ದರವನ್ನು 3/6 ತಿಂಗಳಿಗೊಮ್ಮೆ ಆವರ್ತಿಸಲಾಗುವುದು. ಬದಲಾಗುವ ಬಡ್ಡಿದರದ ಸಾಲಗಳಲ್ಲದೆ, ಸ್ಥಿರ ಬಡ್ಡಿದರದ ಸಾಲಗಳೂ ಲಭ್ಯ.

ಯೂರೋ ಕರೆನ್ಸಿ ಸಾಲಗಳಿಗೆ ವಿಧಿಸಲ್ಪಡುವ ಇತರ ಶುಲ್ಕಗಳು ಹೀಗಿವೆ :

1 ಬದ್ಧತಾ ಶುಲ್ಕ (Commitment fee)
ತಡವಾಗಿ ಹಿಂಪಡೆವ ಕಂತುಗಳ ಮೇಲೆ ಈ ಶುಲ್ಕವನ್ನು ವಿಧಿಸಲಾಗುವುದು. (ಶೇ. 1 ರಷ್ಟಿರುವುದು)

2 ಅಭಿಕರಣ ಶುಲ್ಕ
ಹಲವಾರು ಬ್ಯಾಂಕುಗಳ ಪರವಾಗಿ ಬ್ಯಾಂಕೊಂದು ಯೂರೋ-ಸಾಲವನ್ನು ವ್ಯವಸ್ಥೆಮಾಡಿ, ನಿರ್ವಹಣೆ ಮಾಡಿದ ಪಕ್ಷದಲ್ಲಿ ಈ ಶುಲ್ಕವನ್ನು ವಿಧಿಸಲಾಗುವುದು.

(ಶೇ. ½ದಿಂದ 1ರಷ್ಟಿರುವುದು)

3 ದಸ್ತಾವೇಜು ಶುಲ್ಕ
ಒಟ್ಟಾರೆ ಇಷ್ಟೆಂದು ದಸ್ತಾವೇಜು ಶುಲ್ಕ ವಿಧಿಸಲಾಗುವುದು. ಇದು 10,000 ಡಾಲರುಗಳಷ್ಟಾಗಬಹುದು.

ಈ ಶುಲ್ಕಗಳು ಮತ್ತು ಬಡ್ಡಿ ಸೇರಿಯೂ ಯೂರೋ-ಕರೆನ್ಸಿ ಸಾಲಗಳ ಮೇಲಣ ಒಟ್ಟು ವೆಚ್ಚ ಆಂತರಿಕ ಸಾಲಗಳ ಮೇಲಣ ಬಡ್ಡಿಗಿಂತ ಕಡಿಮೆಯಾಗಿರುತ್ತದೆ.

ಮರುಪಾವತಿ

ಯೂರೋ-ಕರೆನ್ಸಿ ಸಾಲಗಳ ಮರುಪಾವತಿಗೆ ಸುಮಾರು 10 ಅರ್ಧ-ವಾರ್ಷಿಕ ಕಂತುಗಳ ಸೌಲಭ್ಯ ಇರುತ್ತದೆ.

ಬ್ಯಾಂಕ್ ಖಾತರಿಗಳು

ವಿದೇಶಿ ಬ್ಯಾಂಕುಗಳು ನೀಡುವ ಯೂರೋ-ಕರೆನ್ಸಿ ಸಾಲಗಳಿಗೆ ಬ್ಯಾಂಕ್ ಖಾತರಿಯ ಅಗತ್ಯ ಬೀಳಬಹುದು. ಅಂತಹ ಬ್ಯಾಂಕ್ ಖಾತರಿಗಳನ್ನು ವಾಣಿಜ್ಯ ಬ್ಯಾಂಕುಗಳು ನೀಡಬೇಕಾಗುತ್ತದೆ.

ಸರ್ಕಾರದ ನೀತಿಯ ಪ್ರಕಾರ ಯೂರೋ-ಕರೆನ್ಸಿ ಸಾಲಗಳಿಗೆ ಅನುಮತಿ ದೊರೆಯುವುದು

ಬ್ಯಾಂಕುಗಳಲ್ಲಿ ಲಾಭಗಳಿಕೆಗೆ ಹೊಸ ಸೂತ್ರ: ವಹಿವಾಟಿನಲ್ಲಿ ವೈವಿಧ್ಯ

ದೇಶದಲ್ಲಿರುವ ಬಡತನದ ನಿರ್ಮೂಲನ, ತಾಂತ್ರಿಕ ಮುನ್ನಡೆಯಿಂದ ಇಪ್ಪತ್ತೊಂದನೆಯ ಶತಮಾನಕ್ಕೆ ಜಿಗಿತ—ಈ ಎರಡೂ ಸವಾಲುಗಳನ್ನು ಯಶಸ್ವಿಯಾಗಿ ಎದುರಿಸಿ ಲಾಭಪ್ರದತೆಯನ್ನು ಹೆಚ್ಚಿಸಿಕೊಂಡು ಬದುಕಲು ಬ್ಯಾಂಕುಗಳು ಏನು ಮಾಡಬೇಕೆಂಬುದನ್ನು ವಿವರಿಸುತ್ತದೆ, ಈ ಲೇಖನ

ಹೇಮಚಂದ್ರ

ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್
ರಾಯಚೂರು

ಕಳೆದೆರಡು ದಶಕಗಳಲ್ಲಿ ಭಾರತದ ವಾಣಿಜ್ಯ ಬ್ಯಾಂಕುಗಳ ಬೆಳವಣಿಗೆ, ಭೌಗೋಲಿಕವಾಗಿ ಹಾಗೂ ವ್ಯಾವಹಾರಿಕವಾಗಿ, ಜಾಗತಿಕ ಬ್ಯಾಂಕಿನ ಇತಿಹಾಸದಲ್ಲಿ ಅದ್ವಿತೀಯವಾಗಿದೆ. ಈ ಎರಡು ದಶಕಗಳಲ್ಲಿ ಬ್ಯಾಂಕುಗಳು ತಮ್ಮ ಶಾಖೆಗಳ ಜಾಲದ ಜೊತೆಗೇ ನೂತನ ಬ್ಯಾಂಕಿಂಗ್ ಸೌಲಭ್ಯಗಳನ್ನು ಭಾರತದ ಉದ್ದಗಲಕ್ಕೂ ವಿಸ್ತರಿಸಿದುವು. ಬ್ಯಾಂಕುಗಳ ಬಹುಮುಖ ಬೆಳವಣಿಗೆಯಾಗಿದೆ. ಠೇವಣಿ ಹಾಗೂ ಉದರಿ ಪ್ರಮಾಣದಲ್ಲಿ ಹೆಚ್ಚಳವಲ್ಲದೆ, ಗ್ರಾಮೀಣ ಬಡಜನರು, ಸ್ವಯಂ ಉದ್ಯೋಗಿಗಳು, ಅಲ್ಪ ವರಮಾನದ ಜನರು ಹೀಗೆ ಎಲ್ಲರಿಗೂ ಸಾಲ ನೀಡಿಕೆಯ ಸೌಲಭ್ಯ ಒದಗಿಸುವದರ ಮೂಲಕ ಸಾಮಾಜಿಕ ಬ್ಯಾಂಕಿಂಗ್ ಕ್ಷೇತ್ರದಲ್ಲಿ (Social Banking) ದಿಟ್ಟ ಹೆಜ್ಜೆಯನ್ನಿಟ್ಟಿವೆ. ಹೀಗೆ ಬ್ಯಾಂಕುಗಳ ಬಹುಮುಖ ಬೆಳವಣಿಗೆ ರೂಢಿಗತ ಬ್ಯಾಂಕಿಂಗ್ ವ್ಯವಹಾರಕ್ಕಿಂತ ತುಸು ಭಿನ್ನವಾದರೂ, ಕೇವಲ ಕೆಲವೇ ವರ್ಗದವರಿಗಿಂತ ಎಲ್ಲರಿಗೂ ಬ್ಯಾಂಕಿಂಗ್ ಸೌಲಭ್ಯ ನೀಡುವುದು ಅನೇಕ ತೊಂದರೆಗಳನ್ನು ತಂದೊಡ್ಡಿದೆ. ಇವು ಮುಂದಿನ ದಶಕಗಳಲ್ಲಿ ಬ್ಯಾಂಕುಗಳ ಬೆಳವಣಿಗೆಗೆ ಮಾರಕವಾಗಬಲ್ಲವು: ಲಾಭದಲ್ಲಿ ಇಳಿಮುಖ, ಹೆಚ್ಚುತ್ತಿರುವ ಮೇಲ್ವೆಚ್ಚಗಳು (ovreheads) ಗ್ರಾಹಕ ಸೇವೆಯಲ್ಲಿ ಕೊರತೆಗಳು, ಆಡಳಿತ ನಿರ್ವಹಣೆಯಲ್ಲಿ ಶಾಖಾ ಜಾಲದ ಗಾತ್ರವೇ ತಂದೊಡ್ಡಿದ ಆಡಳಿತ ಸಮಸ್ಯೆಗಳು—ಇತ್ಯಾದಿ.

ಲಾಭದ ಸವೆತ

70ರ ಹಾಗೂ 80ರ ದಶಕಗಳಲ್ಲಿ ಸಾಮಾಜಿಕ ಹಾಗೂ ಆರ್ಥಿಕ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿದ ಬ್ಯಾಂಕುಗಳ ಮುಂದೆ ದೇಶದ ಎರಡು ಸವಾಲುಗಳಿವೆ :

(1) ಬಡತನ ನಿರ್ಮೂಲನೆ, (2) ತಾಂತ್ರಿಕತೆಯಿಂದ 21ನೇ ಶತಮಾನಕ್ಕೆ ಜಿಗಿತಕ್ಕೆ ಸಹಾಯ ಪಡೆಯುವುದು. ದೇಶದ ಮುಂದಿರುವ ಈ ಎರಡು ಸವಾಲುಗಳನ್ನು ಎದುರಿಸುವ ಮೊದಲು ಬ್ಯಾಂಕುಗಳು ತಮ್ಮಲ್ಲಿ ಆಳವಾಗಿ ಬೇರುಬಿಟ್ಟಿರುವ ತೊಂದರೆಗಳನ್ನು ಈಗಲೇ ನಿವಾರಿಸಿಕೊಳ್ಳಬೇಕು. ಅವುಗಳಲ್ಲಿ ಲಾಭದ ಸವೆತ (profit erosion). ವೈಯಕ್ತಿಕವಾಗಿ ಬ್ಯಾಂಕುಗಳ ಮೇಲೆ ತಮ್ಮ ತಮ್ಮ ಲಾಭ ಹೆಚ್ಚಿಸಿಕೊಳ್ಳಲು ಒತ್ತಡ ಬರಬಹುದು. ಇದಕ್ಕಾಗಿ ಬ್ಯಾಂಕುಗಳು ತಮ್ಮ ಸಂಸ್ಥೆಯನ್ನು ಸುಸ್ಥಿತವಾಗಿ ಇಟ್ಟುಕೊಳ್ಳಬೇಕಲ್ಲದೆ ತಮ್ಮ ಗಳಿಕೆಯನ್ನು ಹೆಚ್ಚಿಸಲು ಅನೇಕ ದಿಕ್ಕುಗಳಲ್ಲಿ ಕಾರ್ಯತತ್ಪರವಾಗಬೇಕು — ವ್ಯಾವಹಾರಿಕ ದಕ್ಷತೆ, ಆಡಳಿತ ಶೈಲಿಯಲ್ಲಿ ಬದಲಾವಣೆ, ಇದಲ್ಲದೆ ಬ್ಯಾಂಕುಗಳು ವ್ಯವಹಾರೋನ್ನತಿ ಹಾಗೂ ನಿರ್ವಹಣ ಶೈಲಿಗೆ ಹೊಸ ಜೀವ ತುಂಬಬೇಕಾಗಿದೆ. ಈ ಎರಡು ದಶಕಗಳಲ್ಲಿ ಬ್ಯಾಂಕುಗಳು ಕಲಿತ ಮುಖ್ಯ ಪಾಠವೇನೆಂದರೆ, ಕೇವಲ ಬಡ್ಡಿದರದ ಬದಲಾವಣೆಗಳಿಂದ ತಮ್ಮ ಲಾಭದಲ್ಲಿ ಹೆಚ್ಚು ಕಡಿಮೆ ಮಾಡಲು ಸಾಧ್ಯವಿಲ್ಲವೆಂಬುದು.

ಲಾಭದ ಸವೆತದ ಕಡೆಗೆ ಬ್ಯಾಂಕುಗಳು ಗಮನ ಹರಿಸದಿದ್ದಲ್ಲಿ ಬ್ಯಾಂಕುಗಳೇ ಮುಂದೆ ಒಂದು ದಿನ ಅಸ್ವಸ್ಥ ಕೈಗಾರಿಕೆಗಳ ಸಾಲಿಗೆ ಸೇರಬೇಕಾಗುವದೇನೋ !

ಶಾಖಾಮಟ್ಟದಲ್ಲಿ ಯೋಜನೆ

ಲಾಭಗಳಿಕೆಯ ಇಳಿಮುಖವನ್ನು ಗಮನಿಸಿ ಈಗ ಬ್ಯಾಂಕುಗಳ ಶಾಖೆಗಳ ವಿಸ್ತರಣೆಗೆ ಕಡಿವಾಣ ಹಾಕಲಾಗಿದೆ. ಸಧ್ಯದ ಶಾಖೆಗಳ ವಿಸ್ತರಣೆಯು ಪರವಾನಗಿ ನೀತಿಯನ್ನು ಗಮನದಲ್ಲಿಟ್ಟುಕೊಂಡರೆ, ಬ್ಯಾಂಕುಗಳ ಬೆಳವಣಿಗೆಯು ಸಧ್ಯ ಇರುವ ಶಾಖೆಗಳ ವ್ಯವಹಾರ ಸಾಮರ್ಥ್ಯವನ್ನೇ ಅವಲಂಬಿಸಿವೆಯೆಂದರೆ ತಪ್ಪಾಗಲಾರದು. ಆದಕ್ಕಾಗಿ ಶಾಖೆಯ ಮಟ್ಟದಲ್ಲಿ ಮೊದಲು ನಾವು ಚಿಂತಿಸಬೇಕಾಗುತ್ತದೆ. ಪ್ರತಿಯೊಂದು ಶಾಖೆಯೂ ಸ್ವತಂತ್ರವಾಗಿ, ಸ್ವಲ್ಪಮಟ್ಟಿಗಾದರೂ, ತನ್ನ ವ್ಯವಹಾರದ ರೂಪು–ರೇಷೆಗಳನ್ನು ಹಾಕಿಕೊಳ್ಳಬೇಕು. ಇದಕ್ಕಾಗಿ ಬ್ಯಾಂಕುಗಳು ತಮ್ಮ ಯೋಜನಾ ಪದ್ಧತಿಯನ್ನು ಬದಲಾಯಿಸಬೇಕು. ಈಗಿರುವ ಇಳಿಕೆ ಕ್ರಮದ ಬದಲಾಗಿ, ಏರಿಕೆ ಕ್ರಮಕ್ಕೆ ಹೆಚ್ಚು

[ಹಿಂದಿನ ಪುಟದಿಂದ]

ಕೊಟ್ಟಕೊನೆಯಲ್ಲಿ—ಅಂದರೆ, ಇತರ ಉದರಿ ಹರಿವು ಮಾರ್ಗಗಳಿಲ್ಲದಿದ್ದಾಗ (lines of credit). ಆದರೆ ಸಾಲ ಪಡೆಯುವ ಕಂಪೆನಿಗಳಿಗೆ ಯೂರೋ–ಕರೆನ್ಸಿ ಸಾಲಗಳು ಅತ್ಯಾಕರ್ಷಕ.

ಯೂರೋ ಕರೆನ್ಸಿ ಸಾಲಗಳಿಗೆ ಸರ್ಕಾರದ ಅನುಮತಿ ದೊರಕಿಸಿಕೊಳ್ಳುವುದು ಸರಳವಲ್ಲ. ಪ್ರಪ್ರಥಮವಾಗಿ ಪರಿಯೋಜನೆಗಳ ಅಂಗೀಕಾರ ಮಂಡಲಿಗೆ (Projects Approval Board) (ವಿದೇಶಿ ಸಹಯೋಗವಿದ್ದಲ್ಲಿ) ಅಥವಾ ಬಂಡವಾಳ ಸರಕುಗಳ ಸಮಿತಿಗೆ (Capital Goods Committee) (ವಿದೇಶಿ ಸಹಯೋಗವಿಲ್ಲದಿದ್ದಲ್ಲಿ) ಅರ್ಜಿ ಸಲ್ಲಿಸಬೇಕು. ಮಂಡಲಿ/ಸಮಿತಿಯಿಂದ ಒಪ್ಪಿಗೆ ದೊರೆತ ಅನಂತರ ಹಣಕಾಸು ಸಚಿವಾಲಯದ ಆರ್ಥಿಕ ವ್ಯವಹಾರಗಳ ಇಲಾಖೆಗೆ (Department of Economic Affairs) ಯೂರೋ–ಕರೆನ್ಸಿ ಸಾಲವೆತ್ತಲು ಅನುಮತಿ ಕೋರಿ ಅರ್ಜಿ ಸಲ್ಲಿಸಬೇಕು. ಒಪ್ಪಿಗೆ ಬಂದ ಅನಂತರ, ಭಾರತೀಯ ರಿಸರ್ವ್ ಬ್ಯಾಂಕಿಗೆ FERA ಅಧಿನಿಯಮದ ಅಡಿಯಲ್ಲಿ ಒಪ್ಪಿಗೆಗಾಗಿ ಅರ್ಜಿ ಸಲ್ಲಿಸಬೇಕು.

ವಾಣಿಜ್ಯ ಬ್ಯಾಂಕುಗಳ ಮೂಲಕ ವಿದೇಶಿ ಕರೆನ್ಸಿ ಸಾಲ ಪಡೆಯಬೇಕಾದಲ್ಲಿ ಪರಿಯೋಜನೆಗಳ ಅಂಗೀಕಾರ ಮಂಡಲಿಯ ವಿಶೇಷ ಅನುಮತಿ ಅಗತ್ಯ. ಇಲ್ಲದಿದ್ದಲ್ಲಿ ಸಾಲವನ್ನು ಹಣಕಾಸು ಸಂಸ್ಥೆಗಳ ಮೂಲಕ ಮಾತ್ರ ಪಡೆದುಕೊಳ್ಳಬೇಕು.

ಯೂರೋ – ಕರೆನ್ಸಿ ಸಾಲಗಳನ್ನು ವ್ಯವಸ್ಥೆ ಮಾಡುವಲ್ಲಿ ಭಾರತದಲ್ಲಿ ಶಾಖೆಗಳನ್ನು ಹೊಂದಿರುವ ವಿದೇಶಿ ಬ್ಯಾಂಕುಗಳು ಮೇಲುಗೈ ಹೊಂದಿವೆ. ಹೆಚ್ಚು ಸಂಪನ್ಮೂಲಗಳು, ತೆರಿಗೆ ಸವಲತ್ತಿನಿಂದ ಕಡಿಮೆ ಬಡ್ಡಿದರ ನೀಡಿಕೆ ಮುಂತಾದ ಕಾರಣಗಳಿಂದ ಅವು ಭಾರತದ ವಾಣಿಜ್ಯ ಬ್ಯಾಂಕುಗಳಿಗೆ ತೀವ್ರ ಪೈಪೋಟಿ ಒಡ್ಡುತ್ತಿವೆ. ಆದಾಗ್ಯೂ, ಭಾರತದ ಬ್ಯಾಂಕುಗಳು ಯೂರೋ–ಕರೆನ್ಸಿ ಸಾಲ ಕ್ಷೇತ್ರದಲ್ಲಿ ಗಣನೀಯ ಪ್ರಗತಿ ಸಾಧಿಸಿವೆ. ★

ಪ್ರಾಶಸ್ತ್ಯ ನೀಡಬೇಕು. 1989 ಜನವರಿಯಿಂದ ಪ್ರಾರಂಭವಾಗುವ ಸೇವಾಕ್ಷೇತ್ರ ಅಭಿಗಮನ ಪದ್ಧತಿ ಎಷ್ಟರ ಮಟ್ಟಿಗೆ ಫಲಕಾರಿಯಾಗುತ್ತದೆ ಎಂಬುದನ್ನು ಕಾದುನೋಡಬೇಕು (Service Area Approach). ಶಾಖಾವ್ಯವಸ್ಥಾಪಕರುಗಳಿಗೆ ಇನ್ನೂ ಹೆಚ್ಚುಹೆಚ್ಚಾಗಿ ಠೇವಣಿ ಸಂಗ್ರಹಣೆ, ಉದರಿ ನಿರ್ವಹಣೆ ಹಾಗೂ ಇತರೇ ವ್ಯವಹಾರಗಳ ಬೆಳವಣಿಗೆಯ ಬಗ್ಗೆ ಸೂಕ್ತ ತರಬೇತಿ ಹಾಗೂ ಪ್ರೋತ್ಸಾಹ ನೀಡಬೇಕು. ಮೇಲಧಿಕಾರಿಗಳು ಶಾಖೆಯ ಮಾಸಿಕ ಪ್ರಗತಿಯನ್ನು ಅವಲೋಕಿಸುವದಲ್ಲದೆ ಯಾವುದೇ ಗ್ರಾಹಕರ ವಿಶೇಷ ಸೇವೆಯೇನಾದರೂ ಇದ್ದರೆ ಅದಕ್ಕೆ ಅನುವುಮಾಡಿಕೊಡಬೇಕು.

ಪ್ರಚಾರ

ಶಾಖಾಮಟ್ಟದಲ್ಲೇ ಯೋಜನೆಯನ್ನು ರೂಪಿಸುವಾಗ. ಶಾಖೆ ಇರುವ ಪ್ರದೇಶದ ಎಲ್ಲಾ ಅಂಶಗಳನ್ನೂ ಗಣನೆಗೆ ತೆಗೆದುಕೊಳ್ಳಬೇಕು. ಹಾಗೂ ಬ್ಯಾಂಕುಗಳ ಶಾಖೆಗಳು ಠೇವಣಿ ಸಂಗ್ರಹಣೆಗಾಗಿ ವಿಶೇಷ ಯೋಜನೆಗಳನ್ನು ರೂಪಿಸಿ ಅವು ಫಲಕಾರಿಯಾಗುವಂತೆ ಮಾಡಲು ಸಾಕಷ್ಟು ಹೆಣಗಬೇಕಾಗುತ್ತದೆ. ಯಾಕೆಂದರೆ ಇತ್ತೀಚೆಗೆ ಅನೇಕ ಸಂಸ್ಥೆಗಳು ಆಕರ್ಷಕ ಬಡ್ಡಿ ದರ, ಬಡ್ಡಿ ಜೊತೆ ಇತರ ಸೌಲಭ್ಯಗಳನ್ನೊಳಗೊಂಡ ಸೇವೆಯಿಂದ ಬ್ಯಾಂಕುಗಳಿಗೆ ಬರಬಹುದಾಗಿದ್ದ ಠೇವಣಿಯನ್ನು ತಮ್ಮೆಡೆಗೆ ಸೆಳೆಯುತ್ತಿವೆ. ಇತ್ತೀಚಿನ ಅಧ್ಯಯನವೊಂದರ ಪ್ರಕಾರ ಬ್ಯಾಂಕುಗಳಲ್ಲಿ ಗ್ರಾಹಕಸೇವೆ ತೃಪ್ತಿಕರವಾಗಿದ್ದರೂ ಬ್ಯಾಂಕುಗಳ ನಾನಾ ರೀತಿಯ ಠೇವಣಿಯೋಜನೆಗಳ ಮಾಹಿತಿ ಎಲ್ಲ ವರ್ಗದ ಜನರಿಗೆ ಸರಿಯಾಗಿ ತಲುಪಿಲ್ಲ. ನಗರವಾಸಿ ಸುಶಿಕ್ಷಿತ ಜನರಿಗೂ ಸಹ ಠೇವಣಿ ಯೋಜನೆಗಳು ಹಾಗೂ ಬ್ಯಾಂಕು ನೀಡುವ ಸೇವಾ–ಸೌಲಭ್ಯಗಳ ಸರಿಯಾದ ಕಲ್ಪನೆ ಇಲ್ಲ.

ಗ್ರಾಹಕಸೇವೆ, ಸೌಲಭ್ಯ

ಜಗತ್ತಿನೆಲ್ಲೆಡೆ ಬ್ಯಾಂಕುಗಳು ಹಣಕಾಸಿನ ಮಹಾಮಾರುಕಟ್ಟೆಗಳಾಗಿವೆ (Financial Super-Market). ಭಾರತದ ಪಾರಂಪರಿಕ ಬ್ಯಾಂಕಿಂಗ್‌ನಿಂದ ಹೊರತಾದ ಅನೇಕ ಬಗೆಯ ಸೇವೆ ಸೌಲಭ್ಯಗಳನ್ನು ಇವು ನೀಡುತ್ತಿವೆ. ನಮ್ಮ ದೇಶದಲ್ಲೂ ಸಹ ಗ್ರಾಹಕರ ಬೇಡಿಕೆಗಳು ಹೆಚ್ಚು ಹೆಚ್ಚು ಸಂಕೀರ್ಣವಾಗುತ್ತಿವೆ, ಸೂಕ್ಷ್ಮವಾಗುತ್ತಿವೆ. ನಾಜೂಕಿನವಾಗುತ್ತಿವೆ. ಗ್ರಾಹಕನ ಆವಶ್ಯಕತೆಗೆ ತಕ್ಕಂತೆ ವ್ಯವಹಾರವನ್ನು ಹೊಂದಿಸುವ ಕೆಲಸ ಬ್ಯಾಂಕುಗಳ ಮುಂದಿದೆ. ಗ್ರಾಮಾಂತರ ಪ್ರದೇಶದ ಶಾಖೆಗಳ ವ್ಯವಸ್ಥಾಪಕರುಗಳಿಗೆ ಸ್ಥಳೀಯ ವಸ್ತುಗಳ ಬಳಕೆ ಹಾಗೂ ಸ್ಥಳದ ಆರ್ಥಿಕ–ಸಾಮಾಜಿಕ ಬೆಳವಣಿಗೆಗೆ ಹೊಂದಿಕೆಯಾಗುವಂತಹ ವಿಶೇಷ ಉದರಿ ಯೋಜನೆಗಳನ್ನು (ಕೆಲವು ಸಲ) ರೂಪಿಸಲು ಪರವಾನಗಿ ನೀಡಬೇಕು.

ಭಾರತೀಯ ಬ್ಯಾಂಕ್‌ಗಳ ಸಂಘದ ಅಧ್ಯಕ್ಷರು 1987ರ ವಾರ್ಷಿಕ ವರದಿಯಲ್ಲಿ ತಿಳಿಸಿರುವಂತೆ, ''ಗ್ರಾಮಾಂತರ ಬ್ಯಾಂಕಿಂಗ್ ಆಗಲಿ, ನಗರ ಬ್ಯಾಂಕಿಂಗ್ ಆಗಲಿ, ಗ್ರಾಹಕರ ಆವಶ್ಯಕತೆಗಳು ಹಾಗೂ ಅನುಕೂಲಗಳಿಗೆ ತಕ್ಕಂತೆ ಬ್ಯಾಂಕಿಂಗ್ ಸೌಲಭ್ಯಗಳನ್ನು ನೀಡಬೇಕು. ಸದ್ಯದ ಪರಿಸ್ಥಿತಿಯಲ್ಲಿ ಬ್ಯಾಂಕುಗಳಿಗಿರುವ ಕಡಿಮೆ ಸ್ವಾತಂತ್ರ್ಯವನ್ನು ಅಸುಲಕ್ಷಿಸಿ ಬ್ಯಾಂಕುಗಳು ತಾವು ನೀಡುವ ಸೇವೆಯಲ್ಲಿ ದಕ್ಷತೆಯ ಕಡೆ ಹೆಚ್ಚು ಗಮನ ನೀಡಬೇಕು.

ನಷ್ಟಕಾರಿಗಳು

ವರ್ಷದಿಂದ ವರ್ಷಕ್ಕೆ ಬ್ಯಾಂಕಿನ ಹೆಚ್ಚು ಹೆಚ್ಚು ಶಾಖೆಗಳು ನಷ್ಟ ಅನುಭವಿಸುತ್ತಿದ್ದಾಗ್ಯೂ ಬ್ಯಾಂಕಿನ ವರಿಷ್ಠ ಅಧಿಕಾರಿಗಳು ದ್ರವತ್ವ ವ್ಯವಸ್ಥಾಪನ (Liquidity Management), ವಿನಿಯೋಜನೆ ವ್ಯವಸ್ಥಾಪನ (investment Management). ಸಾಲ ನೀಡಿಕೆಯಲ್ಲಿ ವಿವಿಧೀಕರಣ, ವೆಚ್ಚ ನಿಯಂತ್ರಣ— ಇವುಗಳಿಂದ ಬ್ಯಾಂಕಿನ ಲಾಭ ಹೆಚ್ಚಿಸುವ ಯತ್ನ ಅಷ್ಟು ಫಲಕಾರಿಯಾಗುವದಿಲ್ಲ.

1986ರ ಕೊನೆಯವರೆಗೆ ವಾಣಿಜ್ಯ ಬ್ಯಾಂಕುಗಳ 53,364 ಶಾಖೆಗಳ ಪೈಕಿ 12,814 ಶಾಖೆಗಳು ನಷ್ಟದಲ್ಲಿದ್ದುವು. ಇದರಲ್ಲಿ 6,228 ಶಾಖೆಗಳು ಕಳೆದ ಐದು ವರ್ಷಗಳಿಂದ ಅಸ್ತಿತ್ವದಲ್ಲಿದ್ದು ಕೊನೆಯ 3 ವರ್ಷ ನಷ್ಟವನ್ನು ಅನುಭವಿಸಿವೆ. 12,814 ಶಾಖೆಗಳ ನಷ್ಟದ ಒಟ್ಟು ಮೊತ್ತ ರೂ. 267 ಕೋಟಿ. ಆದರೆ 6.228 ಶಾಖೆಗಳ ನಷ್ಟದ ಒಟ್ಟು ಮೊತ್ತ ರೂ. 175 ಕೋಟಿ. ಸಂಖ್ಯಾ ಪ್ರಮಾಣದದೃಷ್ಟಿಯಿಂದ ಗ್ರಾಮಾಂತರ ಹಾಗೂ ಅರೆಪಟ್ಟಣ ಪ್ರದೇಶದಲ್ಲಿ ಇರುವ ಶಾಖೆಗಳು ನಷ್ಟವನ್ನು ಅನುಭವಿಸುವಲ್ಲಿ ಮುಂದಿವೆಯಾದರೆ, ಒಟ್ಟು ಮೊತ್ತದ ಶೇ. 70ರಷ್ಟರಲ್ಲಿ ಪಟ್ಟಣ ಪ್ರದೇಶದ ಶಾಖೆಗಳ ಪಾಲಿದೆ.

ವ್ಯವಹಾರದ ದಿಕ್ಕು ಬದಲಿಕೆ

ಸದ್ಯ ನಷ್ಟದಲ್ಲಿರುವ ಶಾಖೆಗಳು ಲಾಭ ಗಳಿಸುವಂತಾಗಬೇಕಾದರೆ, ಶಾಖೆಗಳು ಸ್ವಲ್ಪಮಟ್ಟಿಗೆ ತಮ್ಮ ವ್ಯವಹಾರದ ದಿಕ್ಕನ್ನೇ ಬದಲಾಯಿಸಬೇಕಾಗಬಹುದು. ಪಟ್ಟಣಪ್ರದೇಶದ ಶಾಖೆಗಳು ಬಡ್ಡಿರಹಿತ ಚಾಲ್ತಿ ಖಾತೆಗಳು, ಬಡ್ಡಿದರ. ವೆಚ್ಚ ನಿಯಂತ್ರಣದಲ್ಲಿಡಲು ಅಲ್ಪಾವಧಿ ಠೇವಣಿಗಳು ಇತ್ಯಾದಿಗಳಿಗೆ ಹೆಚ್ಚು ಒತ್ತು ಕೊಡಬೇಕು. ಸಿಬ್ಬಂದಿವರ್ಗ ಮಾರುಕಟ್ಟೆ ಸರ್ವೇಕ್ಷಣೆ ನಡೆಸಿ ಬೇರೆ ಬೇರೆ ತರಹದ ಗ್ರಾಹಕರ ಆವಶ್ಯಕತೆಗಳನ್ನು ಕಂಡುಕೊಳ್ಳಬೇಕು. ಅವರಿಗೆ ವಿವಿಧ ರೀತಿಯ ಬ್ಯಾಂಕಿಂಗ್ ಸೌಲಭ್ಯ ದೊರಕಿಸಿಕೊಡುವುದರ ಜೊತೆಗೆ ಎಲ್ಲ ರೀತಿಯ ಸೇವೆಗಳನ್ನು ಬ್ಯಾಂಕು ಸಮರ್ಥವಾಗಿ ನೀಡಬಲ್ಲದು ಎಂಬುದರ ಬಗ್ಗೆ ಖಾತ್ರಿ ಮಾಡಿಕೊಡಬೇಕು.

ಪಟ್ಟಣ ಪ್ರದೇಶಗಳ ಶಾಖೆಗಳ ಶಾಖಾ ವ್ಯವಸ್ಥಾಪಕರುಗಳು ತಮ್ಮ ಪ್ರದೇಶದಲ್ಲಿ ಯಾರಿಗಾದರೂ ಔದ್ಯೋಗಿಕ ಪರವಾನಗಿ ದೊರೆತರೆ, ಅವರ ವಾಸಸ್ಥಾನಕ್ಕೆ ಅಥವಾ ಕಾರಖಾನೆಗೆ ಹೋಗಿ ಅವರನ್ನು ಭೇಟಿಯಾಗಿ ಅವರಿಗೆ ತಾವು ನೀಡಬಹುದಾದ ಸವಲತ್ತುಗಳನ್ನು ವಿವರಿಸಿ ತಿಳಿಸಬೇಕು. ಇದರಿಂದ ಠೇವಣಿ ಜೊತೆಗೆ ದೊಡ್ಡ ಪ್ರಮಾಣದ ಉದರಿ ಹಾಗೂ ಇತರೇ ಬ್ಯಾಂಕಿಂಗ್ ವ್ಯವಹಾರಕ್ಕೆ ಚಾಲನೆ ದೊರೆಯುವದು. ಸಿಬ್ಬಂದಿವರ್ಗ ಮನೆಯಿಂದ ಮನೆಗೆ ಬ್ಯಾಂಕಿನ ವಿವಿದೋದ್ದೇಶ ಠೇವಣಿ ಯೋಜನೆಗಳ ಪ್ರಚಾರ ಕೈಗೊಳ್ಳಬೇಕು. ಇತ್ತೀಚಿನ ಭಾರತೀಯ ಸ್ಟೇಟ್ ಬ್ಯಾಂಕಿನ ಮಹಾಖರೀದಿ (Big buy) ಯೋಜನೆ ಸ್ವಾಗತಾರ್ಹ.

ಗ್ರಾಮಾಂತರ ಹಾಗೂ ಅರೆಪಟ್ಟಣ ಪ್ರದೇಶಗಳಲ್ಲಿ ಬ್ಯಾಂಕುಗಳ ಶಾಖೆಗಳ ಜಾಲ ಹಬ್ಬಿದೆಯೇ ಹೊರತು ಅಲ್ಲಿನ ಠೇವಣಿ ಸಂಗ್ರಹಣೆ ಹಾಗೂ ಉದರಿ ಪ್ರಮಾಣ ಶಾಖೆಗಳ ಸಂಖ್ಯೆಗೆ ಅನುಗುಣವಾಗಿಲ್ಲ.

ಗ್ರಾಮೀಣ ಬ್ಯಾಂಕಿಂಗ್ ಅರ್ಥಸಾಧ್ಯವಲ್ಲದ್ದು ಎಂಬ ತಪ್ಪು ಗ್ರಹಿಕೆ ಇದೆ. ಈ ಮೊದಲೇ ತಿಳಿಸಿರುವಂತೆ 1986ರಲ್ಲಿ ಶೇ. 70ರಷ್ಟು ನಷ್ಟಕ್ಕೆ ಪಟ್ಟಣಪ್ರದೇಶದ ಶಾಖೆಗಳೇ ಹೊಣೆಯಾಗಿದ್ದುವು. ಇದರ ಜೊತೆಗೇ ಸಾಮಾಜಿಕ ಬ್ಯಾಂಕಿಂಗ್ ಸಹ ಹೆಚ್ಚುತ್ತಿರುವ ನಷ್ಟಕ್ಕೆ ಕಾರಣ ಎಂಬುದರಲ್ಲಿ ಹುರುಳಿಲ್ಲ.

ಸಾಮಾಜಿಕ ಬ್ಯಾಂಕಿಂಗ್ ಹಾಗೂ ಲಾಭಗಳಿಕೆಗೆ ಯಾವುದೇ ಪೂರ್ವಪಕ್ಷೀಯ ಪರಿಗಣನೆಯಿಲ್ಲ. ಗ್ರಾಮಾಂತರ ಪ್ರದೇಶದ ಶಾಖೆಗಳು ನಷ್ಟ ಅನುಭವಿಸುತ್ತಿವೆ. ತಮ್ಮ ಶಾಖೆಗೆ ನಿಗದಿಪಡಿಸಿದ ಗುರಿ ತಲುಪುವಲ್ಲಿ ಶಾಖಾ ವ್ಯವಸ್ಥಾಪಕರು ಹೆಚ್ಚು ಸಾಲಗಾರರಿಗೆ ಹಣವನ್ನು ಮಾತ್ರ ನೀಡಿದ್ದಾರೆ. ಇನ್ನು ಮುಂದಾದರೂ ಗ್ರಾಮಾಂತರ ಪ್ರದೇಶದಲ್ಲಿ ಸಾಲಗಾರ – ಗ್ರಾಹಕರಿಗೆ ಬರೀ ಹಣದ ನೆರವು ನೀಡುವದಲ್ಲದೇ ಅದನ್ನು ಸರಿಯಾಗಿ ಉಪಯೋಗಿಸುವಂತೆ ನೋಡಿಕೊಳ್ಳಬೇಕು. ಬ್ಯಾಂಕಿನ ನೆರವಿನಿಂದ ಹೆಚ್ಚು ಹೆಚ್ಚು ಗಳಿಸುವಂತಾದಾಗ ಮಾತ್ರ ಇದು ಸಾರ್ಥಕವಾಗುತ್ತದೆ. ಸಾಲ ನೀಡಿದ ಮೇಲೆ ಸರಿಯಾದ ಮರುಪಾವತಿ ವೇಳಾಪಟ್ಟಿ, ಸಾಲಗಾರರ ಮೇಲೆ ವೈಯುಕ್ತಿಕ ನಿಗಾವಹಿಸುವಿಕೆ ಮತ್ತು ಹಣದ ವಹಿವಾಟಿನಲ್ಲಿ ಉಪದೇಶ ನೀಡುವಿಕೆ ಇತ್ಯಾದಿ ಕ್ರಮುಗಳನ್ನು ಕೈಗೊಳ್ಳಬೇಕು.

ಮುಂದಿನ ದಶಕಗಳಲ್ಲಿ

ಮುಂದಿನ ಎರಡು ದಶಕಗಳಲ್ಲಿ ಕೇಂದ್ರ ಸರ್ಕಾರ ಹಾಗೂ ಯೋಜನಾ ಆಯೋಗ ನಿರುದ್ಯೋಗ

ಮತ್ತು ಬಡತನ ನಿರ್ಮೂಲನೆಗೆ ಹೆಚ್ಚು ಪ್ರಾಶಸ್ತ್ಯ ನೀಡಿದೆ. 7ನೆಯ ಪಂಚವಾರ್ಷಿಕ ಯೋಜನೆಯಲ್ಲಿ ಈ ಅನುಪಾತವನ್ನು 38% ರಿಂದ 26%ಕ್ಕೆ, 8ನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇದನ್ನು ಶೇ. 10ಕ್ಕೆ ಇಳಿಸುವ ಗುರಿ ಇದೆ. 7ನೆಯ ಪಂಚವಾರ್ಷಿಕ ಯೋಜನೆಯ ಪ್ರಕಾರ ಈ ಶತಮಾನದ ಕೊನೆಯ ವೇಳೆಗೆ ಭಾರತದಿಂದ ಬಡತನ ತೊಲಗಬೇಕು. ಈ ನಿಟ್ಟಿನಲ್ಲಿ ಬ್ಯಾಂಕು ಬಡತನ ನಿರ್ಮೂಲನೆ ಕಾರ್ಯದಲ್ಲಿ ಹೆಚ್ಚು ಹೆಚ್ಚು ಭಾಗಿಯಾಗಬೇಕಾಗುತ್ತದೆ. ಈಗಾಗಲೇ ಬ್ಯಾಂಕುಗಳು ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಅಡಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿವೆ. ಇದರಲ್ಲಿ ಈಗಾಗಲೇ ಕಂಡುಬಂದಿರುವ ನ್ಯೂನತೆಗಳನ್ನು ಸರಿಪಡಿಸಿಕೊಂಡು ಇನ್ನೂ ಹೆಚ್ಚುಹೆಚ್ಚಾಗಿ ಈ ಕಾರ್ಯದಲ್ಲಿ ಭಾಗಿಗಳಾಗಬೇಕು.

70 ಹಾಗೂ 80ರ ದಶಕಗಳಲ್ಲಿ ನಮ್ಮ ದೇಶ ಅನೇಕ ಬಾರಿ ಬರಗಾಲಕ್ಕೆ ತುತ್ತಾದರೂ, ಸಾಕಷ್ಟು ಆಹಾರದ ದಾಸ್ತಾನು ಇದ್ದುದರಿಂದ ಅದನ್ನು ನಿಭಾಯಿಸಲಾಯಿತು. ಇತ್ತೀಚಿನ ಅನುಭವಗಳಂತೆ ಒಂದರಮೇಲೊಂದರಂತೆ ಹೀಗೆ 3 ಸಾರಿ ಬರಗಾಲ ಬಂದರೆ ನಮ್ಮಲ್ಲಿಯ ಆಹಾರದ ದಾಸ್ತಾನೆಲ್ಲವೂ ಖಾಲಿಯಾಗುವ ಸಂಭವ ಇದೆ. ಕಾರಣ ಮುಂದಿನ ದಶಕಗಳಲ್ಲಿ ಆಹಾರದ ದಾಸ್ತಾನು ಯಾವಾಗಲೂ ಇರುವಂತೆ ಬ್ಯಾಂಕುಗಳು ನೀರಾವರಿ, ಬೆಳೆ ಸಂರಕ್ಷಣೆ, ಹೊಸ ತಳಿಗಳ ಶೋಧನೆ ಇತ್ಯಾದಿ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು.

ಜಗತ್ತಿನೆಲ್ಲೆಡೆ ಬ್ಯಾಂಕುಗಳು ತಮ್ಮ ಠೇವಣಿ ಹಾಗೂ ಉದರಿ ನೀತಿಯನ್ನು ಕಾಲಕಾಲಕ್ಕೆ ಮಾರ್ಪಾಟು ಮಾಡಿಕೊಂಡು ಎಲ್ಲ ಮಟ್ಟದ ಸಾಮಾಜಿಕ–ಆರ್ಥಿಕ ಜನಕ್ಕೆ ಹಾಗೂ ಎಲ್ಲ ತರಹದ ಸೇವೆಗಳಿಗೆ ಅನ್ವಯವಾಗುವಂತೆ ನೀತಿಯನ್ನು ರೂಪಿಸಿಕೊಂಡಿವೆ. ಭಾರತದ ಮಟ್ಟಿಗೆ ರೈತರು, ಸ್ವಉದ್ಯೋಗಿಗಳು, ಚಿಲ್ಲರೆ ವ್ಯಾಪಾರಿಗಳು ಹೀಗೆ ಎಲ್ಲರ ಅಗತ್ಯಗಳನ್ನು ಪೂರೈಸಬೇಕಾದರೆ ಬ್ಯಾಂಕುಗಳು ಸ್ವಲ್ಪ ಮಟ್ಟಿಗೆ ದೊಡ್ಡ ಕೈಗಾರಿಕೆಗಳನ್ನು ಕೈಬಿಡಬೇಕು. ಇದು ಈಗಾಗಲೇ ಜಾರಿಗೆ ಬಂದಿದ್ದು, ಕೈಗಾರಿಕೆಗಳು ತಮ್ಮ ಬಂಡವಾಳಕ್ಕಾಗಿ ಶೇರು ಪೇಟೆಯನ್ನು ಹೆಚ್ಚುಹೆಚ್ಚಾಗಿ ಅವಲಂಬಿಸುತ್ತಿವೆ. ಬ್ಯಾಂಕುಗಳೂ ಸಹ ಈ ಕಾರ್ಯಕ್ಕೆ ಅನುವುಮಾಡಿಕೊಡಲು 'ವರ್ತಕ ಬ್ಯಾಂಕಿಂಗ್, ವಣಿಕ ಬ್ಯಾಂಕಿಂಗ್' ವಿಭಾಗಗಳನ್ನು ಹೊಂದಿವೆ.

ಸರಕಾರ ತನ್ನ ಆರ್ಥಿಕ ನೀತಿಯನ್ನು ಸಡಿಲಗೊಳಿಸಿರುವುದರಿಂದ ಕೈಗಾರಿಕೆಗಳಲ್ಲಿ ಪೈಪೋಟಿ ಹೆಚ್ಚಾಗುತ್ತಿದೆ. ಈ ಪೈಪೋಟಿಯನ್ನು ಮೀರಿ ನಿಲ್ಲಬಲ್ಲ ಕೈಗಾರಿಕೆಗಳು ಮಾತ್ರ ಬದುಕುಳಿಯಬಲ್ಲವು.

ಹೀಗಿರುವಾಗ ಕೈಗಾರಿಕೆಗಳಲ್ಲಿ ಬ್ಯಾಂಕುಗಳು ಹಣ ಹೂಡಬೇಕಾದಲ್ಲಿ ಸಾಕಷ್ಟು ಎಚ್ಚರ ವಹಿಸಬೇಕಾಗುತ್ತದೆ. ಬ್ಯಾಂಕುಗಳು ಹೊಸ ಪ್ರದೇಶಗಳಲ್ಲಿನ ಹೊಸ ಉದ್ಯಮಗಳಿಗೆ ಪ್ರೋತ್ಸಾಹ ನೀಡಬೇಕು. ಉತ್ತಮ ತಾಂತ್ರಿಕತೆಯಿಂದ ಹೆಚ್ಚು ಹೆಚ್ಚು ಉತ್ಪಾದಿಸುವ ಘಟಕಗಳಿಗೆ ಉತ್ತೇಜನ ನೀಡಬೇಕು.

ಗ್ರಾಮೀಣ ಹಾಗೂ ಅರೆಪಟ್ಟಣ ಪ್ರದೇಶದಲ್ಲಿ ಸಣ್ಣ ಕೈಗಾರಿಕೆಗಳು, ವ್ಯವಸಾಯ ಹಾಗೂ ವ್ಯವಸಾಯಪೂರಕವಾದ ಕೈಗಾರಿಕೆಗಳನ್ನು ಅನುಲಕ್ಷಿಸಬೇಕು.

ಮುಂಬರುವ ಎರಡು ದಶಕಗಳಲ್ಲಿ ಭಾರತ ವಿದೇಶಿ ಸಾಲದ ಪಾವತಿಯ ವಿಷಮ ಪರಿಸ್ಥಿತಿ ಎದುರಿಸಬೇಕಾಗುವದು. ಆಮದಿನಲ್ಲಿ ಹೆಚ್ಚಳ, ರಫ್ತಿನಲ್ಲಿ ಕಡಿತ ಹಾಗೂ ವಿದೇಶೀ 'ಹಣ ಸಹಾಯ'ದ ಬಿಗು ವಾತಾವರಣ ಇದಕ್ಕೆ ಕಾರಣವಾಗಬಹುದು. ಬ್ಯಾಂಕುಗಳು ಭಾರತದಿಂದ ರಫ್ತಾಗುವ ಉತ್ಪನ್ನಗಳ ವಹಿವಾಟಿಗೆ ಎಲ್ಲ ಹಂತಗಳಲ್ಲೂ ಗಮನ ನೀಡಬೇಕು.

ಬ್ಯಾಂಕುಗಳು ಮುಂದಾಲೋಚನೆ ಹಾಗೂ ಮುನ್ನೆಚ್ಚರಿಕೆಯಿಂದ ತಮ್ಮ ವಹಿವಾಟು ನಡೆಸಿದರೆ ಮಾತ್ರ ಲಾಭದಲ್ಲಿ ಮುಂದುವರಿಯಬಲ್ಲವು ಹಾಗೂ ದೇಶದ ಏಳ್ಗೆಯಲ್ಲಿ ಹೆಚ್ಚುಹೆಚ್ಚಾಗಿ ಪಾಲ್ಗೊಳ್ಳಬಹುದು.

★

'ಬ್ಯಾಂಕಿಂಗ್ ಪ್ರಪಂಚ'ದ ಆಜೀವ ಚಂದಾದಾರರು

(ಜೂನ್ ಸಂಚಿಕೆಯಿಂದ ಮುಂದುವರಿದ ಪಟ್ಟಿ)

ಶ್ರೀಮತಿ/ಶ್ರೀ

೬೩೮ ಆರ್. ವಿ. ಜೋಷಿ
೬೩೯ ಎಂ. ಆರ್. ಚಿಂಚೋಳಿಕರ್
೬೪೦ ಕೆ. ಪಿ. ಉಪಾಧ್ಯ
೬೪೧ ಯು. ಬಿ. ಪ್ರಶಾಂತರಾವ್
೬೪೨ ಎಂ. ಕೆ. ಅಪ್ಪುಪುತ್ರಿ
೬೪೩ ಕೆ. ಎಂ. ರಾವ್
೬೪೪ ಎಂ. ಜಿ. ದೇಶಪಾಂಡೆ
೬೪೫ ವಿ. ಎಸ್. ಶೆಟ್ಕರ್
೬೪೬ ಜಿ. ಸುಂದರನಾಯಕ್
೬೪೭ ಬಿ. ಆರ್. ಕೃಷ್ಣಮೂರ್ತಿ
೬೪೮ ಕೆ. ಎಲ್, ಮಾಧವರಾವ್
೬೪೯ ಎಸ್. ಗುರುರಾಜ್
೬೫೦ ಬಿ. ರಾಮನಾಥ್
೬೫೧ ಎಚ್. ಎನ್, ಸುಭಾಷ್
೬೫೨ ಎಂ. ಜೆ. ಸೂರ್ಯಕಾಂತ
೬೫೩ ಎಚ್. ಎಸ್. ಸುರೇಶ
೬೫೪ ಟೌನ್ ಕೋ ಆಪರೇಟಿವ್ ಬ್ಯಾಂಕು, ಶಿರಾ
೬೫೫ ಚಿತ್ರದುರ್ಗ ಗ್ರಾಮೀಣ ಬ್ಯಾಂಕು, ಪ್ರಧಾನ ಕಛೇರಿ, ಚಿತ್ರದುರ್ಗ
೬೫೬ ಮಲ್ಲೇಶ್ವರಂ ಕೋ ಆಪರೇಟಿವ್ ಬ್ಯಾಂಕು, ಬೆಂಗಳೂರು
೬೫೭ ದಿ ಮೈಸೂರು ಸಿಲ್ಕ್ ಕ್ಲಾತ್ ಮರ್ಚೆಂಟ್ಸ್ ಕೋ ಆಪರೇಟಿವ್ ಬ್ಯಾಂಕ್ ಬೆಂಗಳೂರು

ಮೈಸೂರು ಬ್ಯಾಂಕ್ ಶಾಖೆಗಳು

೬೫೮ ಜಯನಗರ, ಮೈಸೂರು
೬೫೯ ಶಿಡ್ಲಘಟ್ಟ
೬೬೦ ನೆಲಮಂಗಲ

ಬ್ಯಾಂಕಿಂಗ್ ಸುದ್ದಿಸಾರ

'ರಂ'

ಉದರಿ ಧೋರಣೆಯಲ್ಲಿ ರಿಯಾಯ್ತಿ

ಪಂಜಾಬಿನಲ್ಲಿರುವ ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ಉದರಿ ಧೋರಣೆಯಲ್ಲಿ ಕೆಲವು ರಿಯಾಯ್ತಿಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ ಪ್ರಕಟಿಸಿದೆ. ಅವುಗಳೆಂದರೆ, ಬ್ಯಾಂಕ್ ಅಧಿಕಾರಿಗಳು ಘಟಕಗಳಿಗೆ ಬೇಕಾದ ಹೆಚ್ಚಿನ ದುಡಿಯುವ ಬಂಡವಾಳದ ಶೇ. 50ರಷ್ಟನ್ನು, ಗರಿಷ್ಠ 20 ಲಕ್ಷ ರೂಗಳಷ್ಟನ್ನು, ಮೇಲಧಿಕಾರಿಗಳ ಪೂರ್ವಾನುಮತಿ ಇಲ್ಲದೆ ನೀಡಬಹುದು. ಗೋಧಿ ಗಿರಣಿ ಹಾಗೂ ಸಂಸ್ಕರಣ ಘಟಕಗಳು ಉದರಿ ಪಡೆಯಲು ತರಬೇಕಾದ ಸ್ವಭಾಗವನ್ನು ಶೇ. 45ರಿಂದ ಶೇ. 30ಕ್ಕೆ ಇಳಿಸಲಾಗಿದೆ. ●

ರಫ್ತು ಉದರಿ ಖಾತರಿ ನಿಗಮದ ವಿನಿಮಯ ನಷ್ಟ ಸಂಭಾವ್ಯತೆ ಪಾಲಿಸಿ

1980ರಿಂದ ಜಾರಿಯಲ್ಲಿರುವ ವಿನಿಮಯ ದರ ಬದಲಾವಣೆಯಿಂದುಂಟಾಗುವ ನಷ್ಟ ಸಂಭಾವ್ಯತೆಯನ್ನು ತುಂಬಿಕೊಡುವ ರಫ್ತು ಉದರಿ ಖಾತರಿ ನಿಗಮದ ಪಾಲನೆಯಲ್ಲಿ ಹಲವು ಉಪಯುಕ್ತ ಬದಲಾವಣೆಗಳನ್ನು ನಿಗಮ ಜಾರಿಗೆ ತಂದಿದೆ. ಇನ್ನು ಮುಂದೆ ಘಟಕವೊಂದು ತಾನು ಆಮದು ಕೊಳ್ಳುವ ಕಚ್ಚಾಸರಕು ಉಪಕರಣಗಳ ಕರಾರಿಗೂ ಹಾಗೂ ತಾನು ತೆಗೆದುಕೊಂಡ ಮುಂಗಡಗಳಿಗೂ ವಿಮಾರಕ್ಷೆ ದೊರೆಯುತ್ತದೆ. ಇದರಿಂದ ಆಮದಾಧಾರಿತ ರಫ್ತುದಾರರಿಗೆ ಹೆಚ್ಚಿನ ಪ್ರಯೋಜನ ದೊರೆಯಲಿದೆ. ●

ಕೆನ್‌ಫಿನಾದ 'ನೀಡಿಕೆ ಗೃಹ'

ಕೆನರಾ ಬ್ಯಾಂಕ್ ಫೈನಾನ್ಸಿಯಲ್ ಸರ್ವಿಸಸ್ ಲಿ. ತನ್ನದೇ ಆದ 'ನೀಡಿಕೆ ಗೃಹ' (Issue House) ಒಂದನ್ನು ಬೊಂಬಾಯಿಯಲ್ಲಿ ತೆರೆದಿದೆ. ಇದರಿಂದಾಗಿ ವಿನಿಯೋಜಕರು ಹಾಗೂ ನೀಡಿಕೆದಾರರು ಇನ್ನು ಮುಂದೆ ಉತ್ತಮ ಸೇವೆ ಪಡೆಯುವರೆಂದು ಭಾವಿಸಲಾಗಿದೆ. ●

ಹೊಸ 'ಉಪಭೋಗಿ ಬೆಲೆಸೂಚಿ' ಜಾರಿಗೆ

1982 ಆಧಾರ ವರ್ಷವಾಗುಳ್ಳ ಹೊಸ ಉಪಭೋಗಿ ಬೆಲೆಸೂಚಿಯೊಂದು ಶೀಘ್ರದಲ್ಲೇ ಜಾರಿಗೆ ಬರಲಿದೆ. ಈಗ ಉಪಯೋಗದಲ್ಲಿರುವ ಬೆಲೆಸೂಚಿಗೆ 1960 ಆಧಾರ ವರ್ಷವಾಗಿದ್ದು ಅದು ಇತ್ತೀಚಿನ ಉಪಭೋಗಿ ವಿನ್ಯಾಸಗಳನ್ನು ಪ್ರತಿನಿಧಿಸದಿರುವುದಲ್ಲದೆ ಹೊಸ ಉಪಭೋಗಿ ವಸ್ತುಗಳನ್ನು ಹಾಗೂ ಅವುಗಳಿಗೆ ಸಲ್ಲಿಸಬೇಕಾದ ಮಹತ್ವನ್ನು ಒಳಗೊಂಡಿರದಿರುವುದೇ ಆಗಿದೆ. ●

8ನೆಯ ಪಂಚವಾರ್ಷಿಕ ಯೋಜನೆಗೆ ಬೆಳವಣಿಗೆಯ ಗುರಿ ಶೇ. 6

ಯೋಜನಾ ಆಯೋಗದ ಇತ್ತೀಚಿನ ಸಭೆಯಲ್ಲಿ ಯೋಜನೆಗಳು ಪ್ರಾರಂಭವಾದಂದಿನಿಂದ ಅತ್ಯಂತ ಹೆಚ್ಚಾದ ಶೇ 6ರ ಬೆಳವಣಿಗೆಯ ಗುರಿ ಹೊಂದಲು ತೀರ್ಮಾನಿಸಲಾಗಿದೆ. 8ನೆಯ ಯೋಜನೆಯಲ್ಲಿ ಒಟ್ಟು ಹೂಡಿಕೆ 6,49,926 ಕೋಟಿ ರೂಗಳಷ್ಟಿರಬೇಕೆಂಬುದು ಒಂದು ಊಹಾಂದಾಜು (guestimate). ಸಾಮಾಜಿಕ ನ್ಯಾಯದೊಡನೆ ಹೆಚ್ಚಿನ ಆರ್ಥಿಕ ಬೆಳವಣಿಗೆ ಸಾಧಿಸುವುದು ಯೋಜನೆಯ ಗುರಿಯಾಗಲಿವೆ. ●

ಮನೆ ಕೊಳ್ಳಲು ಯೂನಿಟ್ ಟ್ರಸ್ಟಿನ ಹೊಸ ಯೋಜನೆ

ವಸತಿ ಹಾಗೂ ನಿರ್ಮಾಣಕ್ಷೇತ್ರದಲ್ಲಿ ಸಣ್ಣ ಉಳಿತಾಯದಾರರು ಭಾಗವಹಿಸಲು ಅನುಕೂಲವಾಗುವಂತೆ ಹೊಸ ಯೋಜನೆಯೊಂದನ್ನು ಯೂನಿಟ್ ಟ್ರಸ್ಟ್ ಆಫ್ ಇಂಡಿಯ ರೂಪಿಸಿದೆ. ಈ ಯೋಜನೆಯಿಂದ ಉಳಿತಾಯವನ್ನು ವಸತಿ ಹಾಗೂ ನಿರ್ಮಾಣ ಕ್ಷೇತ್ರಕ್ಕೆ ಹರಿಸುವುದು ಸಾಧ್ಯವಾಗುತ್ತದೆ. ವಸತಿ ಅಭಿವೃದ್ಧಿ ಹಾಗೂ ಹಣಕಾಸು ನಿಗಮ ಈ ಯೋಜನೆಗೆ ಸಲಹೆ ನೀಡಲಿದೆ. ●

ವಿಮಾ ನಿವಾಸ ಯೋಜನೆ

ಭಾರತೀಯ ಜೀವವಿಮಾ ನಿಗಮ ತನ್ನ ಪಾಲಿಸಿದಾರರಿಗೆ ಮನೆ ಕೊಳ್ಳಲು/ ಕಟ್ಟಲು ಹೊಸ ಯೋಜನೆಯೊಂದನ್ನು ಜಾರಿಗೆ ತಂದಿದೆ. ಈ ಯೋಜನೆಯಡಿ ಬೊಂಬಾಯಿ, ಕಲಕತ್ತ, ದೆಹಲಿ ಹಾಗೂ ಮದರಾಸುಗಳಲ್ಲಿ ಗರಿಷ್ಠ ರೂ 3 ಲಕ್ಷಗಳಷ್ಟು ಸಾಲ ದೊರೆಯಲಿದೆ. ಶೇ. 12ರಿಂದ 15ರ ವರೆಗೆ ಬಡ್ಡಿಯೊಡನೆ 15ರಿಂದ 20 ವರ್ಷಗಳೊಳಗೆ ಸಾಲ ಹಿಂತಿರುಗಿಸಬೇಕು. ಸಾಲ ಮರುಪಾವತಿಗೆ ವಿಮಾಪಾಲಿಸಿ ಪಕ್ವ ಮೊತ್ತವನ್ನು ಉಪಯೋಗಿಸುವುದರ ಮೂಲಕ ಮರುಪಾವತಿ ಕಂತುಗಳನ್ನು ಕಡಿಮೆಮಾಡಿಕೊಳ್ಳುವ ಸೌಲಭ್ಯ ಸಹ ಇದೆ. ●

ಬ್ಯಾಂಕಿಂಗ್ ಕಾನೂನುಗಳಿಗೆ ತಿದ್ದುಪಡಿ

ಹಲವು ಬ್ಯಾಂಕಿಂಗ್ ಕಾನೂನುಗಳನ್ನು ಹಾಗೂ ಪರಕ್ರಾಮ್ಯ ಸಂಲೇಖಗಳ ಅಧಿನಿಯಮವನ್ನು ತಿದ್ದುಪಡಿ ಮಾಡುವ "ಸಾರ್ವಜನಿಕ ಹಣಕಾಸು ಸಂಸ್ಥೆ ಹಾಗೂ ಪರಕ್ರಾಮ್ಯ ಸಂಲೇಖಗಳ ಅಧಿನಿಯಮ (ತಿದ್ದುಪಡಿ) ವಿಧೇಯಕವನ್ನು ಸಂಸತ್ತಿನಲ್ಲಿ ಮಂಡಿಸಲಾಗಿದೆ. ಈ ವಿಧೇಯಕದ ಮುಖ್ಯ ಅಂಶಗಳೆಂದರೆ:

(1) ಸಾಕಷ್ಟು ಶಿಲ್ಕು ಇರದೆ ಚೆಕ್ಕುನೀಡುವುದನ್ನು ಅಪರಾಧ ಎಂದು ಪರಿಗಣಿಸುವುದು,

(2) ಬ್ಯಾಂಕಿಂಗ್ ಲೆಕ್ಕ ವರ್ಷದಲ್ಲಿ ಮಾರ್ಪಾಡು,

(3) ಉದ್ಯೋಗಿ ನಿರ್ದೇಶಕರು ಹಾಗು ಅಧಿಕಾರೇತರ ನಿರ್ದೇಶಕರ ನಿರ್ದೇಶಕತ್ವದ ಕಾಲಾವಧಿಯಲ್ಲಿ ಏಕರೂಪತೆ ತರುವುದು,

(4) ರಾಷ್ಟ್ರೀಯ ಬ್ಯಾಂಕುಗಳು ಆರ್ಥಿಕ ಬಂಡವಾಳ ಹೆಚ್ಚಿಸುವುದು.

ಹೀಗೆ ಹಲವು ಬದಲಾವಣೆಗಳನ್ನು ಜಾರಿಗೆ ತರುವ ಉದ್ದೇಶ ಇದೆ. ●

ಹಣಕಾಸು ಸಂಸ್ಥೆಗಳ ಸಂಪನ್ಮೂಲ : ಸಮಿತಿ

ಅವಧಿ ಸಾಲ ನೀಡುವ ಹಣಕಾಸು ಸಂಸ್ಥೆಗಳು ತಮ್ಮ ಸಂಪನ್ಮೂಲಗಳಿಗಾಗಿ ಸರ್ಕಾರವನ್ನು ಅವಲಂಬಿಸುವುದನ್ನು ತಪ್ಪಿಸಿ ಸಂಪನ್ಮೂಲಗಳನ್ನು ಸಂಗ್ರಹಿಸಲು ತಮ್ಮವೇ ಆದ ಮಾರ್ಗೋಪಾಯಗಳನ್ನು ಸೂಚಿಸಲು ಉನ್ನತಾಧಿಕಾರದ ಸಮಿತಿಯೊಂದನ್ನು ಯೋಜನಾ ಆಯೋಗ ನೇಮಿಸಿದೆ. ಸಮಿತಿಯ ನೇತೃತ್ವವನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಉಪಗವರ್ನರ್ ಸಿ. ರಂಗರಾಜನ್ ವಹಿಸುತ್ತಾರೆ. ಸಮಿತಿಯಲ್ಲಿ ಹಣಕಾಸು ಸಂಸ್ಥೆಗಳ ಪ್ರತಿನಿಧಿಗಳಲ್ಲದೆ, ಸರ್ಕಾರದ ಕಾರ್ಯದರ್ಶಿಗಳು ಹಾಗೂ ಪ್ರತಿನಿಧಿಗಳು ಇದ್ದಾರೆ. ●

ಕ್ರೆಡಿಟ್ ಲೈಯೊನಾಯ್ಸ್

ವಿಶ್ವದ 12ನೆಯ ಫ್ರಾನ್ಸ್‌ನ 2ನೆಯ, ಅತಿ ದೊಡ್ಡ ವಾಣಿಜ್ಯ ಬ್ಯಾಂಕ್ 'ದಿ ಕ್ರೆಡಿಟ್ ಲೈಯೊನಾಯ್ಸ್'ಗೆ (Credit Lyonnaix) ಬೊಂಬಾಯಿಯಲ್ಲಿ ಪೂರ್ಣ ಪ್ರಮಾಣದ ತನ್ನ ಶಾಖೆಯೊಂದನ್ನು ತೆರೆಯಲು ಪರವಾನಗಿ ದೊರೆತಿದೆ. ●

ರಿಸರ್ವ್ ಬ್ಯಾಂಕ್ ಹೊಸ ಉದರಿ ನೀತಿ

1988–89ರ ಉತ್ತರಾರ್ಧಕ್ಕಾಗಿ ಭಾರತೀಯ ರಿಸರ್ವ್ ಬ್ಯಾಂಕ್ ಪ್ರಕಟಿಸಿದ ಉದರಿ ನೀತಿ ವ್ಯಾಪಕ ಬದಲಾವಣೆಗಳನ್ನು ಜಾರಿಗೆ ತಂದಿದೆ. ಅವುಗಳನ್ನು ಹೀಗೆ ಪಟ್ಟಿಮಾಡಬಹುದು :

(1) ಉದರಿ ಪ್ರಾಧಿಕರಣ ಯೋಜನೆ ರದ್ದು,

(2) ಗರಿಷ್ಠ ಬಡ್ಡಿದರದ ಬದಲು ಕನಿಷ್ಠ ಬಡ್ಡಿದರ. ಸಾಲಗಳ ಮೇಲೆ ಸೂಕ್ತ ಬಡ್ಡಿದರ ವಿಧಿಸಲು ಬ್ಯಾಂಕುಗಳಿಗೆ ಅಧಿಕಾರ,

(3) ಬ್ಯಾಂಕುಗಳ ಸಾಲ ಖಾತೆಗಳ ವರ್ಗಾವಣೆಗೆ ಸಂಬಂಧಿಸಿದ ನಿಯಮಗಳ ಸಡಿಲಿಕೆ,

(4) ಭಾಗೀದಾರಿ ಪತ್ರ (participation certificate) ನೀಡಿಕೆ ಮೂಲಕ ಬ್ಯಾಂಕುಗಳು ಸಾಲ ಹಂಚಿಕೊಳ್ಳುವ ಸೌಲಭ್ಯ,

(5) ವಸತಿಗಾಗಿ ಬ್ಯಾಂಕು ನೀಡುವ ಸಾಲದ ಮೊತ್ತದಲ್ಲಿ ಹೆಚ್ಚಳ ಹಾಗೂ ಬಡ್ಡಿದರ ಇಳಿತ, ಈ ಮೇಲಿನ ಕ್ರಮಗಳಿಂದಾಗಿ ಸಾಲಗಾರರಿಗೆ ಉದರಿ ದೊರೆಯುವುದರ ಜೊತೆಗೆ ಬ್ಯಾಂಕುಗಳ ನಡುವೆ ಸ್ಪರ್ಧೆ ಏರ್ಪಡುವುದಲ್ಲದೆ, 'ಉದರಿ ಶಿಸ್ತು' (credit discipline) ಜಾರಿಗೆ ತರುವುದರಲ್ಲೂ ಬ್ಯಾಂಕುಗಳು ಯಶಸ್ವಿಯಾಗಬಹುದೆಂದು ಆಶಿಸಲಾಗಿದೆ. ●

ಚಿನ್ನದ ಒಡವೆ ರಫ್ತುದಾರರಿಗೆ ಸೌಲಭ್ಯ

ಒಡವೆಗಳನ್ನು ರಫ್ತು ಮಾಡುವವರಿಗೆ ಅಂತರರಾಷ್ಟ್ರೀಯ ದರದಲ್ಲಿ ಚಿನ್ನ ದೊರಕಿಸುವ ಯೋಜನೆಯೊಂದನ್ನು ಜಾರಿಗೆ ತರಲಾಗಿದೆ. ಭಾರತೀಯ ಸ್ಟೇಟ್ ಬ್ಯಾಂಕಿನ ಮೂಲಕ ಉದರಿ ಪತ್ರದ ಬೆಂಬಲ ಪಡೆದ/ಮುಂಗಡ ಹಣ ಪಡೆದ/ಬಟವಾಡೆ ಸಮಯದಲ್ಲಿ ಪಾವತಿ ಮಾಡುವ ರಫ್ತು ಆದೇಶ ಪಡೆದ ರಫ್ತುದಾರರಿಗೆ ಮುಂಗಡವಾಗಿಯೇ ಚಿನ್ನ ದೊರೆಯುವುದು. ●

ಆಹಾರ ಸಂಸ್ಕರಣ ಘಟಕಗಳಿಗೆ ವಿಶೇಷ ಸವಲತ್ತು

ಆಹಾರ ಸಂಸ್ಕರಣ ಘಟಕಗಳ ಬೆಳವಣಿಗೆ ಹಾಗೂ ಅಭಿವೃದ್ಧಿಗಾಗಿ ಹಲವು ಉತ್ತೇಜಕಗಳನ್ನು ನೀಡಲು ಸರಕಾರ ನಿರ್ಧರಿಸಿದೆ. ಏಕಸ್ವಾಮ್ಯ ಹಾಗೂ ನಿರ್ಬಂಧಿತ ವಿಲೆವಾರಿ ಆಚರಣೆಗಳು, ವಿದೇಶಿ ವಿನಿಮಯ ನಿಯಂತ್ರಣ ಅಧಿನಿಯಮದ ವ್ಯಾಪ್ತಿಯಲ್ಲಿ ಬರುವ ಕಂಪನಿಗಳು ಸಹ ಈ ಕ್ಷೇತ್ರ ಪ್ರವೇಶಿಸಬಹುದು. ನಿರ್ಬಂಧಿತ ಅಬ್ಕಾರಿ ಹಾಗೂ ಇತರ ಶುಲ್ಕಗಳನ್ನು ಪರಿಶೀಲನೆಗೆ ಒಳಪಡಿಸಿ ಸೂಕ್ತ ಮಾರ್ಪಾಟು ಮಾಡಲಾಗುವುದು. ರಾಷ್ಟ್ರೀಯ ಮತ್ತು ಅಭಿವೃದ್ಧಿ ಮಂಡಳಿಯ ಸ್ಥಾಪನೆಯ ಜೊತೆಗೆ ಈ ಕ್ಷೇತ್ರದಲ್ಲಿ ವಿದೇಶಿ ಬಂಡವಾಳದ ವಿನಿಯೋಜನೆಗೆ ಅವಕಾಶ ನೀಡಲಾಗುವುದು. ಅತ್ಯಾಧುನಿಕ ತಂತ್ರಜ್ಞಾನ ತರುವ ದೃಷ್ಟಿಯಿಂದ ಮಧ್ಯಮ ಮತ್ತು ಅತಿ ದೊಡ್ಡ ಕೈಗಾರಿಕೆಗಳಿಗೂ ಅವಕಾಶ ಉಂಟು. ಈ ನೀತಿಯಡಿಯಲ್ಲಿ 'ಟಾಟಾ' ಅವರು ಬಹು ರಾಷ್ಟ್ರೀಯ ಸಂಸ್ಥೆ ಪೆಪ್ಸಿಕೋದವರ ಸಹಯೋಗದೊಡನೆ ಪಂಜಾಬಿನಲ್ಲಿ 22 ಕೋಟಿ ರೂಗಳ ವೆಚ್ಚದಲ್ಲಿ ಸ್ಥಾಪಿಸಲಿರುವ ಸಂಸ್ಕರಣ ಘಟಕಕ್ಕೆ ಸರಕಾರ ಒಪ್ಪಿಗೆ ನೀಡಿದೆ. ●

ಸಣ್ಣ ಕೈಗಾರಿಕೆಗಳಿಗೆ ಹಣಕಾಸು: ಕಾರ್ಯತಂಡ

ಕೇಂದ್ರ ಸರ್ಕಾರ ಸಣ್ಣ ಕೈಗಾರಿಕೆಗಳ ಸಮಸ್ಯೆಗಳನ್ನು ಅಧ್ಯಯಿಸಲು ಕಾರ್ಯತಂಡವೊಂದನ್ನು ಜಿ. ಎಸ್. ದಹೋತ್ರೆ, ಅಧ್ಯಕ್ಷರು ದೇನಾ ಬ್ಯಾಂಕ್ ಅವರ ನೇತೃತ್ವದಲ್ಲಿ ನೇಮಿಸಿದೆ. ಕಾರ್ಯತಂಡ ವಾಣಿಜ್ಯೇತರ ಬ್ಯಾಂಕುಗಳಿಂದ ಸಣ್ಣಕೈಗಾರಿಕೆಗಳು ಹಣಕಾಸು ಸಹಾಯ ಪಡೆಯಲು ಇರುವ ಅಡ್ಡಿ ಆತಂಕಗಳನ್ನು ನಿವಾರಿಸಲು ಪರಿಹಾರಗಳನ್ನು ಸೂಚಿಸುವುದರ ಜೊತೆಗೆ ಕೈಗಾರಿಕಾ ವಾತಾವರಣವನ್ನು ಉತ್ತಮಗೊಳಿಸಲು ಸಲಹೆ ನೀಡಬೇಕೆಂದು ತಿಳಿಸಲಾಗಿದೆ. ●

ಬ್ಯಾಂಕುಗಳಲ್ಲಿ ಗಣಕೀಕರಣ : ರಿಸರ್ವ್ ಬ್ಯಾಂಕ್ ತಂಡ

1990ರಿಂದ 1994ರ ಅವಧಿಗೆ ಬ್ಯಾಂಕುಗಳಲ್ಲಿ ಗಣಕೀಕರಣದ ಬಗ್ಗೆ ಸ್ಥೂಲ ಯೋಜನೆಯೊಂದನ್ನು ತಯಾರಿಸಲು ಡಾ. ಸಿ. ರಂಗರಾಜನ್ ಅವರ ನೇತೃತ್ವದಲ್ಲಿ ತಂಡವೊಂದನ್ನು ನೇಮಿಸಿದೆ. ತಂಡ ಈವರೆಗೆ ಗಣಕೀಕರಣದಲ್ಲಿ ಆದ ಪ್ರಗತಿಯನ್ನು ಗಣನೆಗೆ ತೆಗೆದುಕೊಂಡು ಗ್ರಾಹಕಸೇವೆ ಹಾಗೂ ಉತ್ಪಾದಕತೆಯನ್ನು ಉತ್ತಮಗೊಳಿಸಲು ಬ್ಯಾಂಕುಗಳು ಗಣಕೀಕರಣಗೊಳಿಸಬಹುದಾದ ವ್ಯವಹಾರಗಳನ್ನು ಸೂಚಿಸಬೇಕು. ಸಮಿತಿ ತನ್ನ ವರದಿಯನ್ನು 31–3–1989ರೊಳಗೆ ಸಲ್ಲಿಸಬೇಕು. ●

ಬ್ಯಾಂಕುಗಳಿಗೆ ಬಹುಮಾನ

ಭಾರತದ ಬ್ಯಾಂಕುಗಳ ಸಂಘ ತನ್ನ ಸದಸ್ಯ ಬ್ಯಾಂಕುಗಳಿಗೆ "ಉತ್ಪಾದಕತಾ ಪ್ರಶಸ್ತಿ"ಗಳನ್ನು ನೀಡಲಿದೆ. ಪ್ರತಿ ರಾಜ್ಯದ/ಕೇಂದ್ರಾಡಳಿತ ಪ್ರದೇಶದ ಅತ್ಯುತ್ತಮ ಶಾಖೆಗಳಿಗೆ, ಸರ್ಕಾರಿ, ಖಾಸಗಿ, ಸಹಕಾರಿ ಬ್ಯಾಂಕುಗಳಿಗೆ ಪ್ರಶಸ್ತಿ ನೀಡಲಿದೆ. ಠೇವಣಿ ವೃದ್ಧಿ, ಉದರಿ ನೀಡಿಕೆ, ಗ್ರಾಹಕಸೇವೆ, ಲಾಭಪ್ರದತೆಗಳನ್ನು ಮಾನದಂಡಗಳಾಗಿ ಪರಿಗಣಿಸಲಾಗುತ್ತವೆ. ಇದಲ್ಲದೆ ವಿವಿಧ ಕ್ಷೇತ್ರಗಳಲ್ಲಿ, ಅಂದರೆ ಕೃಷಿ, ರಫ್ತು, ಬಡತನ ನಿವಾರಣೆ, ಮನೆವಾರ್ತೆಗಳ ವಿಚಾರದಲ್ಲಿ, ಅತ್ಯುತ್ತಮ ಸಾಧನೆ ತೋರುವ ಬ್ಯಾಂಕುಗಳಿಗೆ ಸಹ ಪ್ರಶಸ್ತಿ ದೊರೆಯುತ್ತದೆ. ●

೧೪ನೆಯ ಬ್ಯಾಂಕಿಂಗ್ ಕಮ್ಮಟ

ಡಿಸೆಂಬರ್ ೪ರಿಂದ ೯ರ ವರೆಗೆ
ಬೆಳಗಾಂವಿಯಲ್ಲಿ

ಸ್ಥಳ : ಬೆಳಗಾಂ ಲಾಡ್ಜ
ಉದ್ಘಾಟನೆ : ಶ್ರೀ ಎಚ್. ಕೆ. ಶಿವಾನಂದ ಐ.ಎ.ಎಸ್.
ವಿಭಾಗೀಯ ಆಯುಕ್ತರು
ಬ್ಯಾಂಕಿಂಗ್ ಪ್ರಪಂಚದ ಶ್ರೀ ಪಿ. ಕೆ. ಭಾಗೋಜಿ
ಡಿಸೆಂಬರ್ ಸಂಚಿಕೆ ಬಿಡುಗಡೆ : (ನಿವೃತ್ತ ಪ್ರಾಂಶುಪಾಲರು)
ಅಧ್ಯಕ್ಷತೆ : ಶ್ರೀ ಕ. ರಾ. ನಾಗರಾಜ್
(ಭಾರತೀಯ ಸ್ಟೇಟ್ ಬ್ಯಾಂಕಿನ ಬೆಳಗಾಂ ಶಾಖಾ ವ್ಯವಸ್ಥಾಪಕರು)

ಬಿ. ಕೆ. ಡಿ. ಕಾಲೇಜಿನಲ್ಲಿ **ಸಂಜೆ ೪ ಗಂಟೆಗೆ**

ನೆಮ್ಮದಿಯ ಬದುಕಿಗೆ ಕರ್ನಾಟಕ ಸನ್ನದ್ಧ

ಆಶೋತ್ತರಗಳು ಈಡೇರುತ್ತಿರುವ ನಾಡು ಕರ್ನಾಟಕ. 32ನೆಯ ರಾಜ್ಯೋತ್ಸವದ ಈ ಶುಭ ಸಂದರ್ಭದಲ್ಲಿ ನಾವೆಲ್ಲರೂ ಒಟ್ಟಿಗೆ ದುಡಿಯುವ ಸಂಕಲ್ಪ ಮಾಡೋಣ.

ನಾವು ಪರಸ್ಪರ ಕಲೆತು ಪ್ರಾಮಾಣಿಕವಾಗಿ ಪ್ರಯತ್ನ ಪಟ್ಟರೆ ಮಾತ್ರ ಎಲ್ಲ ಹಂತಗಳಲ್ಲಿಯೂ ನಿಜವಾದ ಪ್ರಗತಿಯನ್ನು ಕಾಣಲು ಸಾಧ್ಯ. ಕನ್ನಡ ನಾಡಿನ ಪುರೋಭಿವೃದ್ಧಿಗಾಗಿ ನಾವೆಲ್ಲರೂ ಸೇರಿ ಒಟ್ಟಿಗೆ ಶ್ರಮಿಸೋಣ.

ಹಸನಾದ ಬದುಕು : ಬಡವ ಬಲ್ಲಿದ ಎನ್ನುವ ಭೇದವಿಲ್ಲದೆ ಎಲ್ಲರೂ ಹಸನಾದ ಬದುಕು ಸಾಗಿಸಬೇಕು ಎಂದು ಕರ್ನಾಟಕ ಸರ್ಕಾರ ಬಯಸುತ್ತದೆ. ಅಂದರೆ ಎಲ್ಲರಿಗೂ ಕುಡಿಯುವ ನೀರು, ಪೌಷ್ಟಿಕ ಆಹಾರ, ನೆಮ್ಮದಿಯ ನೆರಳು, ಉಪಯುಕ್ತ ಶಿಕ್ಷಣ, ಸುಭದ್ರ ಉದ್ಯೋಗ ಮತ್ತು ಕೆಳಹಂತದಲ್ಲಿ ಪ್ರಜಾತಂತ್ರ ಇವೆಲ್ಲ ಲಭ್ಯವಾಗಬೇಕು.

ಮೂಲ ಅಗತ್ಯಗಳು : ಈ ಸರ್ಕಾರ ಪರಿಹರಿಸಿದ ಮೊದಲ ಸಮಸ್ಯೆ ಕುಡಿಯುವ ನೀರಿನದು. ಒಟ್ಟು 1870 ಗ್ರಾಮಗಳಿಗೆ ಕೊಳಾಯಿ ನೀರು ಲಭಿಸಿತು. 54000 ಕೊಳವೆ ಬಾವಿಗಳನ್ನು ತೋಡಿಸಲಾಯಿತು. ಕಳೆದ 30 ವರ್ಷಗಳಲ್ಲಿ ಇಷ್ಟೊಂದು ಬಾವಿಗಳನ್ನು ತೋಡಿಸಿರಲಿಲ್ಲ. ಗ್ರಾಮೀಣ ನೀರು ಪೂರೈಕೆಯಲ್ಲಿ ಕರ್ನಾಟಕ ರಾಷ್ಟ್ರದಲ್ಲೇ ಮೊದಲು, ಇದೊಂದು ಹೆಗ್ಗಳಿಕೆ.

ಗ್ರಾಮಗಳಿಗೆ ಸ್ವಯಂ ಆಡಳಿತ : ಜಿಲ್ಲಾ ಪರಿಷತ್ ಶಾಸನದಿಂದ ಅಧಿಕಾರ ವಿಕೇಂದ್ರಿಕರಣಗೊಂಡಿತು. ಇದರ ಫಲವಾಗಿ ಜನರಿಗೆ ನಿಜವಾದ ಅಧಿಕಾರ ಸಿಕ್ಕಿತು. ಈ ಕ್ರಮಕ್ಕೆ ಇಡೀ ದೇಶ ಪ್ರಶಂಸಿಸಿತು. ಇದರಿಂದ ಶೇ. 25ರಷ್ಟು ಸ್ಥಾನ ಮಹಿಳೆಯರಿಗೆ ಮೀಸಲು. ಶೇ. 18ರಷ್ಟು ಸದಸ್ಯತ್ವ ಪರಿಶಿಷ್ಟ ವರ್ಗದವರಿಗೆ ಲಭ್ಯ.

ಅಗತ್ಯ ವಸ್ತುಗಳ ನ್ಯಾಯಯುತ ಪೂರೈಕೆ : ಗ್ರಾಮಗಳಲ್ಲಿ ಈಗ ಕೊಳವೆ ಬಾವಿ, ಶಾಲೆ, ಆಸ್ಪತ್ರೆ, ಏನೇ ಆಗಬೇಕಾದರೂ ಸ್ಥಳೀಯರೇ ಆ ಕಾರ್ಯ ಕೈಗೆತ್ತಿಕೊಳ್ಳಲು ಸಾಧ್ಯ. ಎಲ್ಲ ಅಧಿಕಾರ ಅವರದೇ.

ರಾಜ್ಯದಲ್ಲಿ 58 ಲಕ್ಷ ಹಸಿರು, ಕೇಸರಿ ಕಾರ್ಡುಗಳ ಮೂಲಕ ಬಡವರಿಗೆ ಅಗತ್ಯ ವಸ್ತುಗಳ ಪೂರೈಕೆ. ಕೃಷಿ ಕಾರ್ಮಿಕ, ಗರ್ಭಿಣಿ ಮಹಿಳೆಯರಿಗೆ ವಿಶೇಷ ಭತ್ಯೆ ಮಂಜೂರು. ಆಶ್ರಯಹೀನ ವಿಧವೆಯರಿಗೆ ರೂ. 50 ಮಾಸಾಶನ. ವೃದ್ಧರಿಗೂ ಅಂಗವಿಕಲರಿಗೂ ಈ ಸೌಲಭ್ಯ.

ವಿಶೇಷ ಪ್ರೋತ್ಸಾಹ ಕ್ರಮಗಳು : ಒಂದನೇ ಮತ್ತು ಎರಡನೇ ತರಗತಿ ಮಕ್ಕಳಿಗೆ ಉಚಿತ ಸಮವಸ್ತ್ರ, ಸರ್ಕಾರಿ ಶಾಲೆಗಳಲ್ಲಿ ಏಳನೇ ತರಗತಿ ತನಕ ಉಚಿತ ಪಠ್ಯಪುಸ್ತಕ ನೀಡಿದೆ.

ಉದ್ಯಮಿಗಳಿಗೆ ಅವಕಾಶ : ಪ್ರಸ್ತುತ ಉದ್ಯಮ ವಾತಾವರಣ ಉತ್ತಮವಾಗಿರುವುದರಿಂದ ಬೇರೆ ರಾಜ್ಯಗಳ ಉದ್ಯಮಿಗಳು ರಾಜ್ಯಕ್ಕೆ ಬರುವುದು ಹೆಚ್ಚಾಗಿದೆ. ಒಂದೇ ಕಡೆ ಉದ್ಯಮಕ್ಕೆ ಅಗತ್ಯವಾದ ಪರವಾನಗಿ ಮಂಜೂರಾತಿ ನೀಡುವ ಕ್ರಮ ಫಲ ನೀಡಿದೆ. ಇದರಿಂದ ಪ್ರತಿ ವರ್ಷ ಸಹಸ್ರಾರು ಸಣ್ಣ ಉದ್ಯಮ ಘಟಕಗಳ ಸ್ಥಾಪನೆ.

ಲೋಕಾಯುಕ್ತ : ಭ್ರಷ್ಟಾಚಾರ ನಿರ್ಮೂಲನೆಗೆ ಮುಖ್ಯಮಂತ್ರಿಗಳನ್ನೊಳಗೊಂಡಂತೆ ಉನ್ನತ ಅಧಿಕಾರಿಗಳ ಮೇಲಿನ ಆರೋಪ ವಿಚಾರಣೆಗೆ ಲೋಕಾಯುಕ್ತ ಸ್ಥಾಪನೆ. ಇಂತಹ ಕ್ರಮ ದೇಶದಲ್ಲೇ ಮೊದಲು.

ವಚನ ಪಾಲನೆ : ಈ ಸರ್ಕಾರದ ಮೇಲೆ ಜನತೆಗೆ ಅಪರಿಮಿತ ವಿಶ್ವಾಸ. ಆದ್ದರಿಂದಲೇ ಭ್ರಷ್ಟಾಚಾರ ಹತ್ತಿಕ್ಕಿ ಆಡಳಿತ ಚುರುಕು ಮಾಡುವ ಕ್ರಮ ಕೈಗೊಂಡಿದ್ದೇವೆ. ಕಳ್ಳಸಾಗಾಣಿಕೆ, ಅಕ್ರಮ ದಾಸ್ತಾನು, ಮತ್ತು ತೆರಿಗೆ ವಂಚನೆ ವಿರುದ್ಧ ಕ್ರಮಗಳು ಬಿಗಿಗೊಂಡಿವೆ.

ನಮ್ಮ ಎಲ್ಲ ಪ್ರಯತ್ನಗಳು ಫಲಿಸುತ್ತಿವೆ. ಸಾಧಿಸಬೇಕಿರುವುದು ಇನ್ನೂ ಬಹಳಷ್ಟಿದೆ. ಆ ಗುರಿ ಸಾಧನೆಗಾಗಿ ನಾವು ಪರಸ್ಪರ ಕೈಕೂಡಿಸೋಣ. ಒಟ್ಟಿಗೆ ಶ್ರಮಿಸೋಣ.

ಕರ್ನಾಟಕದಲ್ಲಿ ಪ್ರತಿಯೊಬ್ಬರ ಬದುಕು ಹಸನು

ಆಶೋತ್ತರಗಳು ಈಡೇರುತ್ತಿರುವ ನಾಡು ಕರ್ನಾಟಕ

ಹರಿ : 291088

"ಕರ್ನಾಟಕ ವಾರ್ತೆ"

R. N. 36702/83

PRINTED BY G. H. KRISHNAMURTHY, MYSORE PRINTING AND PUBLISHING HOUSE, CLOCK TOWER SQUARE, MYSORE-